# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ-155<br>Volume-155 | ಬೆಂಗಳೂರು, ಗುರುವಾರ ,04, ಜೂನ್, 2020 ( ಜ್ಯೇಷ್ಠ ,14, ಶಕವರ್ಷ ೧೯೪2)<br>Bengaluru, THURSDAY, 04, JUNE,2020( Jyestha,14, ShakaVarsha 1942) | ಸಂಚಿಕೆ-23<br>Issue - 23 |
|---|---|---|


## ¨ÁU 3

## ¸ÀPÁðgÀzÀ DAiÀiÁ E¯ÁSÉUÀ¼À ªÀÄÄRå¸ÀÜgÀ ªÀÄÄvÀÄÛ ¸À¼ÃAiÀÄ ¥Á¢PÁj UÀ¼ÉUÉ

## ¸ÀA§A¢¹zÀ C¢¸ÀÆZÀ£ÉUÀ¼ÀÄ

ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 46 ಪಕಸೇ 2019

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 28-06-2019

**ಅಧಿಕೃತ ಜ್ಞಾಪನ**

ವಿಷಯ: ಸಮಾಜ ಕಲ್ಯಾಣ ಇಲಾಖೆಯ ಅಪರ ನಿರ್ದೇಶಕರ ವೃಂದದ ಜೇಷ್ಠತೆ (ದಿನಾಂಕ: 01-01-2019 ರಲ್ಲಿದ್ದಂತೆ) ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಿಸುವ ಬಗ್ಗೆ.

*******

ಕರ್ನಾಟಕ ಸಿವಿಲ್ ಸೇವೆಗಳು (ಬಡ್ತಿ, ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ, 1973 ಹಾಗೂ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧರಣೆ ಅಧಿನಿಯಮ 2002 (ಕರ್ನಾಟಕ ಅಧಿನಿಯಮ 10/2002) ರನ್ವಯ ಸಮಾಜ ಕಲ್ಯಾಣ ಇಲಾಖೆಯ ಅಪರ ನಿರ್ದೇಶಕರ ವೃಂದದ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಆಗಿರುವುದಿಲ್ಲ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)

ಆಯುಕ್ತರು ರವರ ಕಛೇರಿ, ಮುಖ್ಯ ಕಛೇರಿ ಆವರಣ, ನರಸಿಂಹರಾಜ ಚೌಕ, ಬೆಂಗಳೂರು-02

ಸಂಖ್ಯೆ: ಅ.ಆ./ಘ.ತ್ಯಾ.ನಿ/ಪಿ.ಆರ್/9266/2019-20 ದಿನಾಂಕ:20-04-2020

### ಘನತ್ಯಾಜ್ಯ ನಿರ್ವಹಣೆ ಉಪನಿಯಮಗಳು (ಮಾರ್ಚ್ 2020)

### ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ1976ರ (1977ರ ಕರ್ನಾಟಕ ಅಧಿನಿಯಮ 14)ರ ಕಲಮು 423, 424, 426, 431-A, 431-B ಮತ್ತು ಘನತ್ಯಾಜ್ಯ ನಿರ್ವಹಣೆ ನಿಯಮಾವಳಿಗಳು 2016ರ 15(ಇ) ಮತ್ತು (ಜಡ್.ಎಫ್)ನೇ ನಿಯಮಗಳಲ್ಲಿ ಓದಲಾಗಿರುವಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವ ನಿಟ್ಟಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯು ಘನತ್ಯಾಜ್ಯ ನಿರ್ವಹಣೆಗಾಗಿ ಈ ಕೆಳಗಿನ ಉಪನಿಯಮಗಳನ್ನು ಸಿದ್ಧಪಡಿಸಿದೆ.

### ಅಧ್ಯಾಯ 1

### ಸಾಮಾನ್ಯ

1**.ಲಘು ಶೀರ್ಷಿಕೆ ಮತ್ತು ಆರಂಭ:-(**1) ಈ ಉಪನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಘನತ್ಯಾಜ್ಯ ನಿರ್ವಹಣೆ (ಬಿಬಿಎಂಪಿ ಎಸ್‌ಡಬ್ಲ್ಯುಎಮ್) ಉಪನಿಯಮ, 2020 ಎಂದು ಕರೆಯಬಹುದಾಗಿದೆ.

(2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಆಡಳಿತ ಮಂಡಳಿಯಿಂದ ಅನುಮೋದನೆಗೊಂಡ ಬಳಿಕ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಇದು ಜಾರಿಗೆ ಬರಲಿದೆ.

**2.ವ್ಯಾಪ್ತಿ ಪ್ರದೇಶ:-(**1)ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ (1977ರ ಕರ್ನಾಟಕ ಅಧಿನಿಯಮ 14)ರ ಅನ್ವಯ ಸ್ಥಾಪನೆಯಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದು ವ್ಯಾಪ್ತಿಯಲ್ಲಿ ಇದು ಅನ್ವಯವಾಗಲಿದೆ. ಈ ಉಪನಿಯಮಗಳು ಅಧಿನಿಯಮದ ಕಲಮು 423ರ ಉಪಕಲಮು (1)ರಅಡಿಯಲ್ಲಿ ಜಾರಿಗೆ ಬರಲಿದೆ.

(2)ಬಿಬಿಎಂಪಿ ವ್ಯಾಪ್ತಿಯಲ್ಲೇ ಉತ್ಪಾದನೆಯಾದ ಆದರೆ ವ್ಯಾಪ್ತಿಯಿಂದ ಹೊರಕ್ಕೆ ಸಂಗ್ರಹಿಸಲ್ಪಟ್ಟ, ಸಾಗಾಟಗೊಳಿಸಲ್ಪಟ್ಟ, ಸಂಸ್ಕರಿಸಲ್ಪಟ್ಟ ಮತ್ತು ವಿಲೇ ಮಾಡಲಾದ ಯಾವುದೇ ಘನತ್ಯಾಜ್ಯಕ್ಕೆ ಇದು ಅನ್ವಯವಾಗುವುದು. ಇದೇ ರೀತಿಯಾಗಿ ಯಾವುದೇ ತ್ಯಾಜ್ಯ ಬಿಬಿಎಂಪಿ ವ್ಯಾಪ್ತಿಯಿಂದ ಹೊರ ಭಾಗದಲ್ಲಿ ಉತ್ಪಾದನೆಯಾಗಿ ಆದರೆ ವ್ಯಾಪ್ತಿಯ ಒಳಭಾಗದಲ್ಲಿ ವಿಲೇ ಮಾಡಲಾಗುವ ತ್ಯಾಜ್ಯಕ್ಕೂ ಈ ಉಪನಿಯಮ ಅನ್ವಯವಾಗುವುದು.

(3)ಪ್ಲಾಸ್ಟಿಕ್ ತ್ಯಾಜ್ಯ, ಕಟ್ಟಡನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯ, ಬಯೋ ಮೆಡಿಕಲ್‌ತ್ಯಾಜ್ಯ ಹಾಗೂ ಇ-ತ್ಯಾಜ್ಯಗಳ ಸಂಬಂಧಿತ ನಿಯಮಾವಳಿಗಳ ಅಡಿಯಲ್ಲಿ ಈ ಉಪನಿಯಮಗಳನ್ನು ಓದಬಹುದಾಗಿದೆ.

**3. ವ್ಯಾಖ್ಯಾನಗಳು:- (1)** ಈ ಉಪನಿಯಮಗಳಲ್ಲಿ ಲಗತ್ತಿಸಲಾಗಿರುವ ಆದರೆ ವ್ಯಾಖ್ಯಾನಿಸದೇ ಇರುವ ಅನುಸೂಚಿಗಳು, ಪದಗಳು ಮತ್ತು ಬಳಕೆ ಮಾಡಿರುವ ಅಭಿವ್ಯಕ್ತಿಗಳು ಪರಿಸ್ಥಿತಿಯ ಅಗತ್ಯ ಸಂದರ್ಭಗಳ ಹೊರತಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅದಕ್ಕೆ ಸಂಬಂಧಿತ ಅರ್ಥವನ್ನು ಹೊಂದಿರುತ್ತವೆ.

3.1 **"ಏರೋಬಿಕ್ ಕಾಂಪೋಸ್ಟಿಂಗ್" (ಆಮ್ಲಜನಕದ ಮೂಲಕ ಗೊಬ್ಬರ)** ಎಂದರೆ ಆಮ್ಲಜನಕದ ಉಪಸ್ಥಿತಿಯಲ್ಲಿ ಸಾವಯವ ವಸ್ತುಗಳನ್ನು ಸೂಕ್ಷ್ಮಜೀವಿಗಳಿಂದ ವೈಜ್ಞಾನಿಕ ವಿಭಜನೆಯ ನಿಯಂತ್ರಿತ ಪ್ರಕ್ರಿಯೆ.

**3.2** **"ಅನ್‌ಏರೋಬಿಕ್ ಡೈಜೆಶನ್"** ಎಂದರೆ ಆಮ್ಲಜನಕ ರಹಿತವಾಗಿ ಸಾವಯವ ವಸ್ತುಗಳನ್ನು ಸೂಕ್ಷ್ಮಜೀವಿಗಳಿಂದ ವೈಜ್ಞಾನಿಕ ವಿಭಜನೆಯ ನಿಯಂತ್ರಿತ ಪ್ರಕ್ರಿಯೆ.

**3.3** **"ಅಧಿಕೃತಗೊಳಿಸುವುದು"**ಎಂದರೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ (ಕೆಎಸ್‌ಪಿಸಿಬಿ) ಅನುಮತಿ ಪಡೆದಿರುವ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿಗೆ ಜವಾಬ್ಧಾರಿಯುತವಾಗಿರುವ ಸ್ಥಳೀಯ ಪ್ರಾಧಿಕಾರ, ಅಥವಾ ಇನ್ನಿತರ ಯಾವುದೇ ಏಜೆನ್ಸಿ ಅಥವಾ ವ್ಯವಸ್ಥೆಯೊಂದರ ನಿರ್ವಾಹಕ.

**3.4** "**ಅಧಿಕೃತತ್ಯಾಜ್ಯ ಸಂಸ್ಕರಣೆಗಾರರು"** ಅಂದರೆ ಘನತ್ಯಾಜ್ಯ ಸಂಸ್ಕರಣೆಗೆ ಬಿಬಿಎಂಪಿ ಅಥವಾ ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ (ಕೆಎಸ್‌ಪಿಸಿಬಿ)ಯಿಂದ ಘನತ್ಯಾಜ್ಯ ಸಂಸ್ಕರಣೆ ನಿಯಮಗಳು 2016ರ ನಿಯಮ16(1)(ಇ) ಪ್ರಕಾರ ಮತ್ತು ನಿಯಮದ ನಮೂನೆ-II ರ ಪ್ರಕಾರ ಅಂತಹ ಅಧಿಕೃತಗೊಳಿಸಲ್ಪಟ್ಟಿರುವ ಯಾವುದೇ ಸಂಸ್ಥೆ.

**3.5** **"ಜೈವಿಕ ವಿಘಟನೀಯ(ಕೊಳೆತು ಹೋಗುವ) ತ್ಯಾಜ್ಯ"**ಎಂದರೆ ಯಾವುದೇ ಸಾವಯವ ವಸ್ತುವನ್ನು ಸೂಕ್ಷ್ಮಾಣು ಜೀವಿಗಳನ್ನು ಬಳಸಿ ಸರಳವಾದ ಮತ್ತು ಸ್ಥಿರವಾದ ಸಂಯುಕ್ತಗಳನ್ನಾಗಿ ವಿಘಟಿಸಬಹುದಾದ ತ್ಯಾಜ್ಯ.

**3.6** **"ಬಯೋ ಮಿಥೇನೇಶನ್"**ಎಂದರೆ ಮಿಥೇನ್‌ನ್ನು ಸಮೃದ್ಧ ಪ್ರಮಾಣದಲ್ಲಿ ಹೊಂದಿರುವ ಬಯೋಗ್ಯಾಸ್ (ಜೈವಿಕ ಅನಿಲ) ಉತ್ಪಾದನೆಗೆ ಕಿಣ್ವ(ಎಂಜೈಮ್‌)ಗಳನ್ನು ಬಳಸಿ ಸಾವಯವ ವಸ್ತುಗಳನ್ನು ವಿಘಟಿಸುವುದು(ಕೊಳೆಸುವುದು).

**3.7 "ಬಯೋಮೆಡಿಕಲ್ ವೇಸ್ಟ್"(ವೈದ್ಯಕೀಯಜೈವಿಕತ್ಯಾಜ್ಯ)** ಎಂದರೆ ಈ ಸಂದರ್ಭಗಳಲ್ಲಿ ಸಂಗ್ರಹವಾದ ತ್ಯಾಜ್ಯ

(i) ಮನುಷ್ಯರ ಅಥವಾ ಪ್ರಾಣಿಗಳಲ್ಲಿನ ರೋಗದ ಪತ್ತೆ, ಚಿಕಿತ್ಸೆ, ಅಥವಾ ರೋಗ ನಿರೋಧ ಪ್ರಕ್ರಿಯೆ ಸಂದರ್ಭಗಳಲ್ಲಿ ಅಥವಾ ಸಂಶೋಧನಾ ಚಟುವಟಿಕೆಗಳಲ್ಲಿ ಅಥವಾ ಸಂಬಂಧಿತ ಸಂದರ್ಭಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ; ಅಥವಾ

(ii) ಮನುಷ್ಯರ ಅಥವಾ ಪ್ರಾಣಿಗಳಲ್ಲಿನ ರೋಗದ ಪತ್ತೆ, ಚಿಕಿತ್ಸೆ, ಅಥವಾ ರೋಗ ನಿರೋಧ ಪ್ರಕ್ರಿಯೆ ಸಂದರ್ಭಗಳಲ್ಲಿ ಅಥವಾ ಸಂಶೋಧನಾ ಚಟುವಟಿಕೆಗಳಲ್ಲಿ ಉಪಯೋಗಕ್ಕಾಗಿ ಜೀವಿಗಳು ಅಥವಾ ಸೂಕ್ಷ್ಮಾಣು ಜೀವಿಗಳನ್ನು ಬಳಸಿ ಮಾಡಲಾದ ಉತ್ಪನ್ನಗಳು ಅಥವಾ ಚಯಾಪಚಯ ಪ್ರಕ್ರಿಯೆ ಅಥವಾ ಜೀವ ರಸಾಯನಿಕ (ಬಯೋಕೆಮಿಕಲ್) ಪ್ರತಿಕ್ರಿಯೆಗಳಿಂದ ಉತ್ಪನ್ನವಾಗುವ ತ್ಯಾಜ್ಯ; ಅಥವಾ

(iii) ಆರೋಗ್ಯ ಶಿಬಿರಗಳಲ್ಲಿ;

ಅನುಸೂಚಿ-1ರ ಡಿ-ಭಾಗದಲ್ಲಿ ಸಚಿತ್ರ ವಿವರಣಾ ಪಟ್ಟಿ ನೀಡಲಾಗಿದೆ.

**3.8 "ಬ್ಲಾಕ್"** ಎಂದರೆ ಸುಮಾರು ಏಳುನೂರ ಐವತ್ತು (750) ಮನೆಗಳನ್ನು ಹೊಂದಿರುವ, ಸಣ್ಣ ಅಂಗಡಿಗಳನ್ನು ಮತ್ತು ವಾಣಿಜ್ಯ ಸಂಸ್ಥೆಗಳು, ಈ ಮನೆಗಳನ್ನು ಹಾಗೂ ಸಂಸ್ಥೆಗಳನ್ನು ಸಂಪರ್ಕಿಸುವ ಬೀದಿಗಳು, ರಸ್ತೆಗಳನ್ನು ಹೊಂದಿರುವ ಪ್ರದೇಶವಾಗಿದ್ದು, ಆದಾಗ್ಯೂ ಇದನ್ನು ಬಿಬಿಎಂಪಿಯು ಪರಿಶೀಲಿಸಬಹುದು ಮತ್ತು ಪರಿಷ್ಕರಿಸಬಹುದು, ಕಾಲಕಾಲಕ್ಕೆ ಆಧರಿಸಿ ಒಬ್ಬ ವ್ಯಕ್ತಿಗೆ ತಲಾವಾರು ಉತ್ಪನ್ನವಾಗುವ ಘನತ್ಯಾಜ್ಯ ಪ್ರಮಾಣಕ್ಕೆಅನುಗುಣವಾಗಿ ಅಥವಾ ಸ್ಥಳೀಯ ಸ್ಥಿತಿಗತಿಗಳನ್ನು ಅನುಸರಿಸಿ ಪರಿಣಾಮಕಾರಿಯಾದ ತ್ಯಾಜ್ಯ ಸಂಗ್ರಹ, ಸಾಗಣಿಕೆ ಮತ್ತು ಸಂಸ್ಕರಣೆಗೆ ಅನುಗುಣವಾಗಿ ಹೊಂದಾಣಿಕೆ ಮಾಡಬಹುದಾಗಿದೆ.

**3.9"ಬ್ರಾಂಡ್ಓನರ್**" (ಉತ್ಪನ್ನದ ಮಾಲೀಕರು) ಎಂದರೆ ನೋಂದಾಯಿತ ಉತ್ಪನ್ನದ ಲೇಬಲ್‌ನ ಅಡಿಯಲ್ಲಿ ಮಾರಾಟ ಮಾಡುವ ವ್ಯಕ್ತಿ ಅಥವಾ ಸಂಸ್ಥೆ.

**3.10 "ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕ**"ಎಂದರೆ

(1)ವಸತಿ ಪ್ರದೇಶದ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಮತ್ತು ಇದು ವಸತಿ ಸಮುಚ್ಚಯ, ಬಹು-ಹಂತದ ವಸತಿ ಘಟಕಗಳು, ಒಂದು ಆವರಣದಲ್ಲಿ 100 ಘಟಕಗಳಿಗಿಂತ ಹೆಚ್ಚಿರುವ ಸಮುದಾಯಗಳು (ಗೇಟೆಡ್‌ಕಮ್ಯುನಿಟೀಸ್)ಗಳನ್ನು ಒಳಗೊಂಡಿರುವುದು.

(2)ಸಾಂಸ್ಥಿಕ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಯಾವುದೇ ಸರ್ಕಾರದ ಇಲಾಖೆಗಳು, ಧಾರ್ಮಿಕ ಸಂಸ್ಥೆಗಳು, ಆವರಣಗಳು (ಕಾರ್ಪೊರೇಟ್, ಕೈಗಾರಿಕಾ, ಶೈಕ್ಷಣಿಕ, ಸಂಶೋಧನಾ ಸಂಸ್ಥೆಗಳು ವಸತಿ ಆವರಣಗಳನ್ನು ಹೊಂದಿಕೊಂಡಂತಿರುವ/ತಿರದ, ವಸತಿ ಸಮೂಹಗಳು, ಟೆಕ್‌ಪಾರ್ಕ್‌ಗಳು), ಕೇಂದ್ರ ಸರ್ಕಾರದ ಅಥವಾ ಅಧೀನಕ್ಕೊಳಪಟ್ಟ

ಇಲಾಖೆಗಳನ್ನು ಹೊಂದಿರುವ ಕಟ್ಟಡಗಳು, ರಾಜ್ಯ ಸರ್ಕಾರದ ಇಲಾಖೆಗಳು ಅಥವಾ ಅಧೀನಕ್ಕೊಳಪಟ್ಟ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು,ಸಾರ್ವಜನಿಕ ರಂಗದ ಅಧೀನ ಸಂಸ್ಥೆಗಳು ಅಥವಾ ಖಾಸಗಿ ಸಂಸ್ಥೆಗಳು, ಆಸ್ಪತ್ರೆಗಳು, ನರ್ಸಿಂಗ್‌ಹೋಂಗಳು, ಶಾಲೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು, ಇತರೇ ಶೈಕ್ಷಣಿಕ ಸಂಸ್ಥೆಗಳು, ವಸತಿ ನಿಲಯಗಳು, ಹೊಟೇಲುಗಳು, ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆ, ಪೂಜಾಸ್ಥಳಗಳು, ಕ್ರೀಡಾಂಗಣ, ಕ್ರೀಡಾ ಮತ್ತು ಸಂಕೀರ್ಣಗಳು,ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ನೈಸರ್ಗಿಕ ಮಾರುಕಟ್ಟೆಗಳು, ಕೃಷಿ ಉತ್ಪನ್ನ ಮಾರಾಟ ಸಂಸ್ಥೆ(ಎಪಿಎಂಸಿ) ಯಾರ್ಡ್‌ಗಳು, ಹಾಪ್‌ಕಾಮ್ಸ್ ಮತ್ತು ಹಾಲು ಮಾರಾಟಗಾರರು, ಮರದೊಂದಿಗೆ ವ್ಯವಹರಿಸುವ ಮುಗ್ಗಟ್ಟುಗಳು ಮತ್ತು ತೋಟಗಾರಿಕೆಯಂತಹ ಆವರಣಗಳು, ದಿನವೊಂದಕ್ಕೆ ಸರಾಸರಿ 100 ಕೆಜಿಗಿಂತ ಹೆಚ್ಚಿನ ಪ್ರಮಾಣದ ತ್ಯಾಜ್ಯ ಉತ್ಪಾದಿಸುವ ನರ್ಸರಿ-ಹೂತೋಟಗಳು ಮತ್ತು ಅಥವಾ 5000 ಚದರ ಮೀಟರ್ ವಿಸ್ತೀರ್ಣದಲ್ಲಿ ಆವರಿಸಿಕೊಂಡಿರುವಂತವುಗಳು, ಪ್ರಮಾಣ ಮತ್ತು ಗಾತ್ರಕ್ಕೆ ಅನುಗುಣವಾಗಿರದೇ ಇರುವ ಸಾರ್ವಜನಿಕ ಹೊರಾಂಗಣದಲ್ಲಿ ಆಯೋಜಿಸುವ ಕಾರ್ಯಕ್ರಮಗಳು (ವ್ಯಾಪಾರ ಮೇಳ, ಸಾರ್ವಜನಿಕ ಸಮಾರಂಭಗಳು, ಮನರಂಜನಾ ಕಾರ್ಯಕ್ರಮಗಳು, ರ್ಯಾಲಿಗಳು, ಕ್ರೀಡಾ ಕಾರ್ಯಕ್ರಮಗಳು).

(3)ವಾಣಿಜ್ಯ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ದಿನವೊಂದಕ್ಕೆ 100 ಕೆಜಿಗಿಂತ ಹೆಚ್ಚು ಕಸ ಉತ್ಪಾದಿಸುವ ವಾಣಿಜ್ಯ ಸಂಸ್ಥೆಗಳು ಮತ್ತು / ಅಥವಾ 5000 ಚದರ ಮೀಟರ್ ಗೂ ಹೆಚ್ಚು ಪ್ರದೇಶ ಹೊಂದಿರುವಂತಹವು. ಇವುಗಳನ್ನು ಇದು ಒಳಗೊಂಡಿರುವುದು.

(ಎ) ವ್ಯಾಪಾರ ಪರವಾನಗಿ (ಟ್ರೇಡ್ ಲೈಸೆನ್ಸ್) ಅನ್ವಯವಾಗುವಂತಹ ಅಥವಾ ಮತ್ತು ಯಾವುದೇ ನಿಯಂತ್ರಕ ಪ್ರಾಧೀಕಾರದ ಅಡಿಯಲ್ಲಿ ಇರುವ ಯಾವುದೇ ವಾಣಿಜ್ಯ ಸಂಸ್ಥೆ ಕಂಪನಿ ಅಥವಾ ಕಚೇರಿ ಪ್ರತಿಷ್ಠಾನ, ಹೊಟೇಲ್, ರೆಸ್ಟೋರೆಂಟ್, ಕಾರ್ಖಾನೆ, ಕಲ್ಯಾಣ ಮಂಟಪ, ಮಾಲ್, ವ್ಯಾಪಾರ ಸಮುಚ್ಛಯ, ಸೂಪರ್ ಮಾರ್ಕೆಟ್, ಮದುವೆ ಸಭಾಂಗಣ, ಸಮಾವೇಶ ಸಭಾಂಗಣ, ಪೂಜಾ ಸ್ಥಳ, ಸಂಸ್ಥೆ, ಪಾವತಿಸುವ ಅತಿಥಿಗೃಹ (ಪೇಯಿಂಗ್‌ಗೆಸ್ಟ್) ಕ್ಲಬ್, ಅಡುಗೆಯವರು (ಕೇಟರರ್ಸ್), ಸಭಾಂಗಣ, ಪೆಟ್ರೋಲ್ ಬಂಕ್‌ಗಳು, ಸರ್ವೀಸ್‌ಗ್ಯಾರೇಜ್, ಪಟಾಕಿ ಮಾರಾಟ, ಕಟ್ಟಡ ಕಾಮಗಾರಿ ವಸ್ತುಗಳ ಮಾರಾಟ, ಕ್ಷೌರಿಕರ ಅಂಗಡಿ ಅಥವಾ ಸಲೂನ್‌ಗಳು ಅಥವಾ ಇನ್ನಾವುದೇ ವಾಣಿಜ್ಯ ಅಥವಾ ಸಾರ್ವಜನಿಕ ಸಂಸ್ಥೆ.

(ಬಿ) ಬೇಕರಿಗಳು, ಸಿಹಿ ತಿಂಡಿ ಮಳಿಗೆಗಳು, ಹಣ್ಣಿನರಸ (ಜ್ಯೂಸ್) ಮತ್ತು ಲಸ್ಸಿ ಅಂಗಡಿಗಳು, ಐಸ್‌ಕ್ರೀಂ ಪಾರ್ಲರ್ ಗಳು, ಫಾಸ್ಟ್ ಫುಡ್‌ಚಾಟ್ಸ್, ಟೀ ಮತ್ತುಕಾಫಿ, ಊಟ ಮತ್ತುತಿಂಡಿ, ಕೋಳಿ ಸಾಕಣೆ ಮತ್ತು ಎಳನೀರು ಮೊದಲಾದ ಸಣ್ಣಪುಟ್ಟ(ಚಿಲ್ಲರೆ) ವ್ಯಾಪಾರ, ದೇವಸ್ಥಾನಗಳು, ಸಂಚಾರಿ ವ್ಯಾಪಾರಿಗಳು, ಚಿಲ್ಲರೆ ಮಾರಾಟಗಾರರು, ಬೀದಿ ಬದಿ ವ್ಯಾಪಾರಿಗಳು, ತಿರುಗಾಡುವ ವ್ಯಾಪಾರಿಗಳು ಅಥವಾ ತಾತ್ಕಾಲಿಕ ಅಂಗಡಿಗಳನ್ನು ಹೊಂದಿರುವವರು, ಹೂವಿನ ಬೊಕ್ಕೆ (ಹೂಗುಚ್ಛ) ಸ್ಟಾಲ್‌ಗಳು ಹಾಗೂ ಸಣ್ಣ ಪ್ರಮಾಣದ ಗುಡಿ ಕೈಗಾರಿಕೆಗಳು ಮೊದಲಾದ ತೆರನ ಸಂಸ್ಥೆಗಳು;

ಆದಾಗ್ಯೂ, ಮುಂದಿನ ಕಾಲಾವಧಿಯಲ್ಲಿ ಬೃಹತ್ ಪ್ರಮಾಣದ ಕಸ ಉತ್ಪಾದಕರಾಗಿ ಘೋಷಿಸಲ್ಪಡುವವರ ಕಸದ ಮಿತಿಯನ್ನು ಬದಲಿಸುವ ಮತ್ತು ತ್ಯಾಜ್ಯ ಸಂಗ್ರಹಿಸುವ / ಸಂಸ್ಕರಿಸುವ ವಿಧಾನವನ್ನು ಅಧಿಕೃತ ಆದೇಶದ ಮೂಲಕ ಅಧಿಸೂಚಿಸುವ ಹಕ್ಕನ್ನು ಬಿಬಿಎಂಪಿ ಹೊಂದಿದೆ.

**3.11 "ಬೃಹತ್‌ತ್ಯಾಜ್ಯ"**ವು ವಾಣಿಜ್ಯ ಮತ್ತು ವಸತಿ ಆವರಣಗಳಿಂದ ಸಂಗ್ರಹಿಸಲ್ಪಟ್ಟು ಅವುಗಳ ರಾಶಿ, ಆಕಾರ, ಗಾತ್ರ ಅಥವಾ ಪ್ರಮಾಣದಿಂದಾಗಿ ಬಿಬಿಎಂಪಿಯ ಅಭಿಪ್ರಾಯದಂತೆ ಮತ್ತು / ಅಥವಾ ತ್ಯಾಜ್ಯವನ್ನು ಪ್ರತಿದಿನ ಬಿಬಿಎಂಪಿಯ ಮನೆ-ಮನೆ ಸಂಗ್ರಹದ ವೇಳೆ ಸಂಗ್ರಹಿಸುವುದು ಸುಲಭ ಸಾಧ್ಯವಾಗದೇ ಇರುವುದು.

**3.12 "ಉಪನಿಯಮ**"ಎಂದರೆ ಸ್ಥಳೀಯ ಸಂಸ್ಥೆಗಳಿಂದ ಅಧಿಸೂಚಿತವಾದ ನಿಯಂತ್ರಣ ಕ್ರಮಗಳು, ನಗರಗಳ ಗಣತಿ ಮತ್ತುಅಧಿಸೂಚಿತ ಪ್ರದೇಶ ಉಪನಗರ ಮೊದಲಾದ ಕಡೆಗಳಲ್ಲಿ ಅವುಗಳ ವ್ಯಾಪ್ತಿಯಲ್ಲಿ ಈ ನಿಯಮಾವಳಿಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಅನುವು ಮಾಡಿಕೊಡುವಂತಹುದಾಗಿದೆ.

**3.13 "ಸಿ ಮತ್ತು ಡಿ ನಿಯಮಗಳು"**ಎಂದರೆ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯ ನಿಯಮಾವಳಿಗಳು 2016 ಆಗಿದ್ದು, ಇದು ಬಿಬಿಎಂಪಿಯ ಅಧಿಸೂಚನೆಗಳು, ಆದೇಶಗಳು ಹಾಗೂ ನಿರ್ದೇಶನಗಳನ್ನು ಮತ್ತು/ಅಥವಾ ಸೂಕ್ತ ಸರ್ಕಾರಿ ಪ್ರಾಧಿಕಾರಗಳ ಸಂಬಂಧಿಸಿದ ನಿಯಮಾವಳಿಗಳನ್ನು ಹೊಂದಿರುವುದು.

**3.14"ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷತ್ಯಾಜ್ಯ"ವು** ಕಟ್ಟಡನಿರ್ಮಾಣ ಮತ್ತು ಭಗ್ನಾವಶೇಷತ್ಯಾಜ್ಯ ನಿರ್ವಹಣಾ ನಿಯಮಾವಳಿ 2016ರ ನಿಯಮ(3) ಉಪನಿಯಮ(1)ರ ಅನುಸೂಚಿ(ಸಿ)ಯಲ್ಲಿ ನೀಡಲಾದ ಅರ್ಥವನ್ನು ಹೊಂದಿರಬೇಕು.

**3.15 "ಸಿಪಿಸಿಬಿ"** ಎಂದರೆ ಕೇಂದ್ರ ಪರಿಸರ ನಿಯಂತ್ರಣ ಮಂಡಳಿ.

**3.16 "ದಹನಕಾರಿ/ಅಗ್ನಿಕಾರಕತ್ಯಾಜ್ಯ**" ಎಂದರೆ ಜೈವಿಕವಾಗಿ ವಿಘಟನೆ ಆಗದ (ಕರಗದೇ ಇರುವುದು), ಪುನರ್ ಬಳಕೆ ಮಾಡಲಾಗದ, ಮತ್ತೆ ಬಳಸಲಾಗದ, ಹಾನಿಕಾರಕವಲ್ಲದ ಘನತ್ಯಾಜ್ಯವಾಗಿದ್ದು 1500 ಕಿಲೋ ಕ್ಯಾಲೊರಿ/ಕೆಜಿ ಕನಿಷ್ಟ ಕ್ಯಾಲೊರಿ ಮೌಲ್ಯವನ್ನು ಹೊಂದಿರುವುದಾಗಿರುತ್ತದೆ.

**3.17"ಗೊಬ್ಬರ ತಯಾರಿಕೆ"(ಕಾಂಪೋಸ್ಟಿಂಗ್)** ಎಂದರೆ ಸಾವಯವ ವಸ್ತುಗಳನ್ನು ಸೂಕ್ಷ್ಮಾಣುಜೀವಿಗಳ ಮೂಲಕ ವಿಭಜನೆಯನ್ನೊಳಗೊಂಡ ನಿಯಂತ್ರಿತ ಪ್ರಕ್ರಿಯೆ.

**3.18 "ಸಹ ಸಂಸ್ಕರಣೆ"** ಎಂದರೆಕೈಗಾರಿಕಾ ಪ್ರಕ್ರಿಯೆಗಳಲ್ಲಿ ವಿಘಟನೆ ಹೊಂದದ (ಕೊಳೆತು ಹೋಗದ) ಮತ್ತು ಮರು ಬಳಕೆ ಮಾಡಲಾಗದ ಘನ ತ್ಯಾಜ್ಯಗಳ ಬಳಕೆ. ಈ ಘನತ್ಯಾಜ್ಯಗಳ ಕ್ಯಾಲೊರಿಫಿಕ್ ಮೌಲ್ಯ 1500 ಕಿಲೊ ಕ್ಯಾಲೊರಿ/ಕೆಜಿಗಿಂತ ಹೆಚ್ಚಿದ್ದು ಘನ ತ್ಯಾಜ್ಯಗಳನ್ನು ಕಚ್ಚಾ ವಸ್ತುಗಳಾಗಿ ಅಥವಾ ಶಕ್ತಿಯ ಮೂಲವಾಗಿ ಅಥವಾ ಎರಡನ್ನೂ ನೈಸರ್ಗಿಕ ಖನಿಜ ಸಂಪನ್ಮೂಲಗಳು ಮತ್ತು ಪಳೆಯುಳಿಕೆ ಇಂಧನಗಳ ಬದಲಿಯಾಗಿ ಅಥವಾ ಹೆಚ್ಚುವರಿಯಾಗಿ ಬಳಕೆ ಮಾಡುವುದಾಗಿದೆ.

**3.19** "**ವಿಕೇಂದ್ರಿತ ಸಂಸ್ಕರಣೆ"** ಎಂದರೆ ವಿಘಟನೆ ಹೊಂದಬಹುದಾದ ತ್ಯಾಜ್ಯಗಳ ಗರಿಷ್ಟ ಸಂಸ್ಕರಣೆಗಾಗಿ ಚದುರಿಕೊಂಡಿರುವ ಸ್ಥಳೀಯ ವ್ಯವಸ್ಥೆಗಳನ್ನು ಸ್ಥಾಪಿಸುವುದು. ಪುನರ್ ಬಳಕೆ ಮಾಡಬಹುದಾದವುಗಳನ್ನು ಅವುಗಳು ಉತ್ಪಾದನೆ ಆಗುವ ಮೂಲಕ್ಕೆ ಹತ್ತಿರದಲ್ಲೇ ಸಂಗ್ರಹಿಸುವುದು. ಈ ಮೂಲಕ ತ್ಯಾಜ್ಯದ ಸಂಸ್ಕರಣೆ ಅಥವಾ ವಿಲೇಗೆ ಸಾಗಾಟವನ್ನು ಕನಿಷ್ಟಗೊಳಿಸುವುದು.

**3.20 "ವಿಲೇವಾರಿ"** ಘನತ್ಯಾಜ್ಯ ನಿರ್ವಹಣಾ ನಿಯಮಾವಳಿ 2016ರ ಅಧಿಸೂಚಿ I ರಲ್ಲಿ ಸೂಚಿಸಿರುವಂತೆ ಘನತ್ಯಾಜ್ಯ ಸಂಸ್ಕರಿಸಿದ ನಂತರದ ಉಳಿಕೆ ತ್ಯಾಜ್ಯ ಮತ್ತು ಬೀದಿಗಳನ್ನು ಗುಡಿಸುವುದರ ಜಡ ತ್ಯಾಜ್ಯ, ಮತ್ತು ಭೂಮಟ್ಟದಲ್ಲಿರುವ ಚರಂಡಿಗಳಿಂದ ಹೂಳು ತೆಗೆಯುವುದರ ಮೂಲಕ ಅಂತರ್ಜಲ, ಮೇಲ್ಮೈ ನೀರು, ಸುತ್ತುವರಿದ ಗಾಳಿ ಮಲಿನವಾಗದಂತೆ ಪ್ರಾಣಿ ಪಕ್ಷಿಗಳು ಆಕರ್ಷಿತವಾಗದಂತೆ ಅಂತಿಮ ಮತ್ತು ಸುರಕ್ಷಿತ ವಿಲೇವಾರಿ ಮಾಡುವುದಾಗಿದೆ.

**3.21"ಅಪಾಯಕಾರಿ ಗೃಹ ತ್ಯಾಜ್ಯ"**ಎಂದರೆ ಗೃಹ (ಮನೆಗಳ) ಹಂತದಲ್ಲಿ ಉತ್ಪತ್ತಿಯಾದ ತ್ಯಾಜ್ಯವಾಗಿದ್ದು, ಬಳಸಿ ಬಿಟ್ಟಿರುವ ಪೇಂಟ್‌ಗಳ ಡ್ರಮ್‌ಗಳು, ಕ್ರಿಮಿನಾಶಕ ಕ್ಯಾನ್‌ಗಳು, ಸಿಎಫ್‌ಎಲ್ ಬಲ್ಬ್ ಗಳು, ಟ್ಯೂಬ್‌ಲೈಟ್‌ಗಳು, ಬಳಕೆ ಅವಧಿ ಮೀರಿದ ಔಷಧಿಗಳು, ಒಡೆದು ಹೋಗಿರುವ ಪಾದರಸದ ಉಷ್ಣತಾ ಮಾಪಕ (ಥರ್ಮೋ ಮೀಟರ್)ಗಳು, ಬಳಸಿದ ಬ್ಯಾಟರಿಗಳು, ಬಳಕೆ ಮಾಡಿದ ಸೂಜಿಗಳು ಮತ್ತು ಸಿರಿಂಜ್‌ಗಳು ಮತ್ತು ಮಲಿನಗೊಂಡಿರುವ / ಕಲುಷಿತ ಹತ್ತಿ ಇತ್ಯಾದಿಗಳನ್ನು ಇದು ಒಳಗೊಂಡಿದೆ.

**3.22 "ಮನೆ ಮನೆ ಸಂಗ್ರಹಣೆ"** ಎಂದರೆ ಮನೆ ಮನೆಗಳ ಬಾಗಿಲಿನಿಂದ, ಅಂಗಡಿಗಳಿಂದ, ವಾಣಿಜ್ಯ ಸಂಸ್ಥೆಗಳಿಂದ, ಕಚೇರಿಗಳಿಂದ, ಸಂಸ್ಥೆಗಳು ಅಥವಾ ಇನ್ನಿತರ ಗೃಹೇತರ ಆವರಣಗಳಿಂದ ಘನತ್ಯಾಜ್ಯ ಸಂಗ್ರಹ. ಭಾರಿ ಪ್ರಮಾಣದ ಉತ್ಪಾದಕರನ್ನು ಇದು ಹೊರತಾಗಿದೆ ಮತ್ತು ಇದು ಮನೆಗಳು, ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಕಚೇರಿಗಳು, ಸಾಂಸ್ಥಿಕ ಅಥವಾ ಗೃಹೇತರ ಆವರಣಗಳು ಮತ್ತು ಇಂತಹ ಸ್ಥಳಗಳಿಂದ ಅವುಗಳ ಪ್ರವೇಶದ್ವಾರದ ಬಳಿ ಅಥವಾ ನಿಗದಿ ಮಾಡಲಾದ ಸ್ಥಳ, ಅಥವಾ ಹೌಸಿಂಗ್ ಸೊಸೈಟಿಯ ನೆಲ ಮಹಡಿಯಿಂದ, ಬಹುಮಹಡಿ ಕಟ್ಟಡಗಳು ಅಥವಾ ವಸತಿ ಸಮುಚ್ಚಯ (ಅಪಾರ್ಟ್‌ಮೆಂಟ್)ಗಳ ನೆಲ ಮಹಡಿಗಳಿಂದ ಬೃಹತ್ ವಸತಿ, ವಾಣಿಜ್ಯ ಅಥವಾ ಸಾಂಸ್ಥಿಕ ಸಂಕೀರ್ಣಗಳ ಆವರಣಗಳಿಂದ ಘನತ್ಯಾಜ್ಯದ ಸಂಗ್ರಹಣೆ;

**3.23"ಒಣ ತ್ಯಾಜ್ಯ"**ಎಂದರೆ ವಿಘಟನೆ ಹೊಂದದ ತ್ಯಾಜ್ಯ ಮತ್ತು ಬೀದಿಗಳನ್ನು ಗುಡಿಸುವಿಕೆಯ ಜಡತ್ಯಾಜ್ಯವಲ್ಲದ ತ್ಯಾಜ್ಯವಾಗಿದೆ. ಇದು ಪುನರ್ ಬಳಕೆ ಮಾಡಬಹುದಾದ ಮತ್ತು ಪುನರ್ಬಳಕೆ ಮಾಡಲಾಗದ ತ್ಯಾಜ್ಯ, ಅಗ್ನಿಕಾರಕ/ದಹನಕಾರಿ ತ್ಯಾಜ್ಯಗಳನ್ನು ಒಳಗೊಂಡಿದೆ. ಅಧಿಸೂಚಿI ರ ಬಿ-ವಿಭಾಗದಲ್ಲಿ ವಿವರವಾದ ಸಚಿತ್ರಪಟ್ಟಿ ನೀಡಲಾಗಿದೆ;

**3.24 "ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ ಅಥವಾ ಡಿಡಬ್ಲ್ಯುಸಿಸಿ" ಎಂದರೆ ಜೈವಿಕ** ವಿಘಟನೀಯವಲ್ಲದ ತ್ಯಾಜ್ಯವನ್ನು ಒಟ್ಟುಗೂಡಿಸಲು, ಸಂಗ್ರಹಿಸಲು, ವಿಂಗಡಿಸಲು ಮತ್ತು ನಿರ್ವಹಿಸಲು ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣಾ ಸೌಲಭ್ಯ. ಘನತ್ಯಾಜ್ಯ ನಿಯಮಗಳು 2016ರ ನಿಯಮ 15(ಸಿ) ಮತ್ತು (ಡಿ)ಗೆ ಅನುಗುಣವಾಗಿ ತ್ಯಾಜ್ಯ ತೆಗೆಯುವವರು/ ಅನೌಪಚಾರಿಕ ತ್ಯಾಜ್ಯ

ಸಂಗ್ರಹಕಾರರು/ತ್ಯಾಜ್ಯ ತೆಗೆಯುವಿಕೆಗೆ ಸಂಬಂಧಿಸಿದ ಸ್ವಸಹಾಯ ಗುಂಪುಗಳು ನಿರ್ವಹಿಸುವ ಸಂಪನ್ಮೂಲ ಸಂಸ್ಥೆಗಳ ಮೂಲಕ ಅದನ್ನು ಬಿಬಿಎಂಪಿ ನಿರ್ವಹಿಸುತ್ತದೆ. ಚಿಂದಿ ಆಯುವವರನ್ನು ಮಧ್ಯಮ ನಿರ್ವಹಣೆಯಲ್ಲಿ ಸಬಲೀಕರಣಗೊಳಿಸುವ ಮೂಲಕ ಕೇಂದ್ರಗಳನ್ನು ಸ್ವತಂತ್ರವಾಗಿ ನಿರ್ವಹಿಸುವುದು ಮತ್ತು ಸಾಮಾಜಿಕ ವಾಣಿಜ್ಯೋದ್ಯಮಿಯಾಗುವುದು ಇವುಗಳ ಅಂತಿಮ ಗುರಿಯಾಗಿದ್ದು ಇದು ಸಂಪನ್ಮೂಲ ಉತ್ಪಾದನಾ ಸಂಸ್ಥೆಯಾಗಿ ಆರಂಭಿಕ ಹಂತದಲ್ಲಿ ಮಧ್ಯವರ್ತಿ ಬೆಂಬಲ ನೀಡುವ ಪದರವಾಗಿ ಕೆಲಸ ಮಾಡುತ್ತದೆ;

**3.25"ಹಳೆಯ ತೆರೆದ ತ್ಯಾಜ್ಯ ರಾಶಿ"**ಎಂದರೆ ಭೂ ಭರ್ತಿಯ ನೈರ್ಮಲ್ಯ ತತ್ವಗಳನ್ನು ಪಾಲಿಸದೇ ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ಸ್ಥಳೀಯ ಸಂಸ್ಥೆಗಳು ಬಳಕೆ ಮಾಡುವ ಜಾಗ;

**3.26 "ಕಾರ್ಯಕ್ರಮಗಳು"**ಎಂದರೆ ಯಾವುದೇ ಸಮಾರಂಭಗಳಿಗಾಗಿ, ಆಚರಣೆಗಳಿಗಾಗಿ, ಸಭೆಗಳಿಗಾಗಿ, ಸಮಾವೇಶ, ಮೆರವಣಿಗೆ, ಹೊರಾಂಗಣ ಸಭಾಂಗಣದ ಚಟುವಟಿಕೆಗಳು, ಸಾರ್ವಜನಿಕ ಸ್ಥಳಗಳಲ್ಲಿ ಸಿನೆಮಾ ಚಿತ್ರೀಕರಣಕ್ಕಾಗಿ ಸಮಾಗಮಗೊಳ್ಳುವುದು ಅಥವಾ ಸೇರುವುದಾಗಿದೆ;

**3.27" ಉತ್ಪಾದಕರ ವಿಸ್ತರಿತ ಜವಾಬ್ದಾರಿ (ಇ.ಪಿ.ಆರ್)"** ಎಂದರೆ ಪ್ಲಾಸ್ಟಿಕ್, ಸತು, ಗಾಜು ಅಥವಾ ರಟ್ಟಿನಡಬ್ಬ ಇತ್ಯಾದಿಗಳ ಉತ್ಪಾದಕರ ಜವಾಬ್ದಾರಿ. ಪ್ಯಾಕೇಜಿಂಗ್ ಉತ್ಪನ್ನಗಳು ಬಾಳಿಕೆ ಬರುವವರೆಗೆ ಪರಿಸರಿಕವಾಗಿ ಉತ್ತಮ/ಸಮರ್ಪಕ ನಿರ್ವಹಣೆ ಮಾಡುವುದು;

**3.28 "ಇ-ತ್ಯಾಜ್ಯ"** ಎಂಬುವುದು ಇ-ತ್ಯಾಜ್ಯ (ನಿರ್ವಹಣಾ) ನಿಯಮಾವಳಿ 2016ರ, ಷರತ್ತು (ಆರ್)ನ ನಿಯಮ(3)ರ ಉಪನಿಯಮ(1)ರ ಅಡಿಯಲ್ಲಿ ಬರುವ ಅರ್ಥವನ್ನೇ ಹೊಂದಿರಬೇಕು.

**3.29"ಸೌಲಭ್ಯ"** ಎಂದರೆ ಘನತ್ಯಾಜ್ಯವನ್ನು ಪ್ರತ್ಯೇಕಿಸುವ, ಪಡೆಯುವ, ಸಂಗ್ರಹಿಸುವ, ಸಂಗ್ರಹಣೆ ಮಾಡುವ, ಪುನರ್ ಬಳಕೆ, ಸಂಸ್ಕರಣೆ ನಿರ್ವಹಣೆ ಅಥವಾ ಘನತ್ಯಾಜ್ಯದ ಸುರಕ್ಷಿತ ವಿಲೇವಾರಿ ಮಾಡುವ ವ್ಯವಸ್ಥೆ ಆಗಿದ್ದು ಘನತ್ಯಾಜ್ಯ ನಿರ್ವಹಣಾ ಪ್ರಕ್ರಿಯೆ ಆಗಿದೆ;

**3.30 "ರೂಢಿ ಮಾಡುವುದು/ ಎಚ್ಚರಿಕೆ ಅವಧಿ"**ಎಂದರೆ ಈ ಉಪನಿಯಮಗಳನ್ನು ಉಲ್ಲಂಘಿಸಿದರೆ ವಿಧಿಸಬಹುದಾದ ದಂಡದಿಂದ ವಿನಾಯಿತಿ ನೀಡುವ ನಿರ್ದಿಷ್ಟಅವಧಿ;

**3.31 "ದಂಡ"**ಎಂದರೆ ನಿಯಮಗಳು ಅಥವಾ ಉಪ ನಿಯಮದಲ್ಲಿರುವ ನಿರ್ದೇಶನಗಳನ್ನು ಪಾಲಿಸದೇ ಇರುವುದಕ್ಕೆ ಉಪನಿಯಮದಂತೆ ತ್ಯಾಜ್ಯ ಉತ್ಪಾದಕರು ಅಥವಾ ತ್ಯಾಜ್ಯ ಸಂಸ್ಕರಣೆ ಮಾಡುವ ಮತ್ತು ವಿಲೇವಾರಿ ವ್ಯವಸ್ಥೆ ಒಳಗೊಂಡಂತೆ ನೋಂದಾಯಿತ ಸೇವಾದಾರರು, ಅಧಿಕೃತತ್ಯಾಜ್ಯ ಸಂಸ್ಕರಣೆಗಾರರು ಮತ್ತು ಸಂಗ್ರಹ, ಸಾಗಾಟ, ಸಂಸ್ಕರಣೆ ಹಾಗೂ ವಿಲೇ ಕಾರ್ಯಾಚರಣೆಗೆ ಜವಾಬ್ದಾರರಾಗಿರುವ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳ ಮೇಲೆ ದಂಡ ವಿಧಿಸುವುದು;

**3.32 "ಉದ್ಯಾನಗಳು ಮತ್ತು ತೋಟಗಾರಿಕಾ ತ್ಯಾಜ್ಯ"**ಎಂದರೆ ಸಾರ್ವಜನಿಕ ಪ್ರದೇಶದಲ್ಲಿನ ಬೃಹತ್ ತ್ಯಾಜ್ಯ-ಉದ್ಯಾನವನಗಳು, ತೋಟಗಳು, ಸಂಚಾರಿ ದ್ವೀಪಗಳು, ರಸ್ತೆ ವಿಭಜಕಗಳು ಹಾಗೂ ಹುಲ್ಲು, ಮರದ ತುಂಡುಗಳು, ಕಳೆಗಳು, ಮರದ 'ಕಂದು' ಬಣ್ಣದ ಸಮೃದ್ಧ ಇಂಗಾಲ ಹೊಂದಿರುವ ಕತ್ತರಿಸಿದ ಶಾಖೆಗಳು, ರೆಂಬೆಗಳು, ಮರದ ತೊಗಟೆಗಳು, ಒಣಹುಲ್ಲು ಕಡ್ಡಿ ಅಥವಾ ಸತ್ತ ಎಲೆಗಳು ಮತ್ತು ಮರದ ಸವರಿದ ಭಾಗಗಳು;

**3.33 "ನಿರ್ವಹಣೆ"** ಎಂದರೆ ವಿಂಗಡಣೆ, ಪ್ರತ್ಯೇಕಿಸುವುದು, ವಸ್ತುಗಳನ್ನು ಮರಳಿ ಪಡೆಯುವುದು, ಸಂಗ್ರಹಣೆ, ದ್ವಿತೀಯ ಹಂತದ ಸಂಗ್ರಹ, ಸಣ್ಣ ತುಂಡುಗಳನ್ನಾಗಿ ಮಾಡುವುದು, ಮೂಟೆ ಕಟ್ಟುವುದು, ಪುಡಿ ಮಾಡುವುದು, ಲೋಡ್ ಮಾಡುವುದು/ ತುಂಬಿಸುವುದು, ಇಳಿಸುವುದು, ಸಾಗಾಣಿಕೆ, ಸಂಸ್ಕರಣೆ ಮತ್ತು ಘನತ್ಯಾಜ್ಯದ ವಿಲೇವಾರಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳು;

**3.34 "ಅಪಾಯಕಾರಿ ತ್ಯಾಜ್ಯ"** ಎಂದರೆ ಯಾವುದೇ ತ್ಯಾಜ್ಯವಸ್ತು ಅವುಗಳ ಭೌತಿಕ, ರಾಸಾಯನಿಕ, ಪ್ರತಿಕ್ರಿಯಾತ್ಮಕ, ವಿಷಕಾರಕವಾಗಿದ್ದು ಇದು ತಾನಾಗಿಯೇ ಅಥವಾ ಇನ್ನಾವುದೇ ತ್ಯಾಜ್ಯದೊಂದಿಗೆ ಸೇರಿಕೊಂಡಾಗ ಅಥವಾ ವಸ್ತುಗಳೊಂದಿಗೆ ಸೇರಿದಾಗ ಆರೋಗ್ಯ ಅಥವಾ ಪರಿಸರಕ್ಕೆ ಅಪಾಯ ಉಂಟು ಮಾಡಬಲ್ಲಂತಹದ್ದು. ಇವುಗಳನ್ನು ಈ ಉಪನಿಯಮದ ಅನುಸೂಚಿ-IIರಲ್ಲಿ ವಿಶೇಷವಾಗಿ ಪಟ್ಟಿ ಮಾಡಲಾಗಿದೆ, ಮತ್ತು ಇತರ ಎಲ್ಲ ಅಪಾಯಕಾರಿ ತ್ಯಾಜ್ಯಗಳನ್ನು ಅಪಾಯಕರ ತ್ಯಾಜ್ಯ(ನಿರ್ವಹಣೆ ಮತ್ತು ನಿಭಾವಣೆ) 1989ರಲ್ಲಿ ವಿವರಿಸಲಾಗಿದೆ. ಇದನ್ನು ಅಪಾಯಕಾರಿ ಮತ್ತು ಇತರ ತ್ಯಾಜ್ಯ(ನಿರ್ವಹಣೆ ಮತ್ತು ಗಡಿಯಾಚೆಗಿನ ಸಾಗಾಟ) ನಿಯಮಾವಳಿ 2016 ಎಂದು ತಿದ್ದುಪಡಿ ಮಾಡಲಾಗಿದೆ;

**3.35 "ದಹಿಸುವುದು"**ಎಂದರೆ ಘನತ್ಯಾಜ್ಯವನ್ನು ಅತಿ ಹೆಚ್ಚು ತಾಪ(ಬಿಸಿ)ದೊಂದಿಗೆ ನಿಯಂತ್ರಿತ ವಾತಾವರಣದಲ್ಲಿ ಉಷ್ಣತೆಯಲ್ಲಿ ವಸ್ತುಗಳನ್ನು ಕುಸಿಯುವಂತೆ ಸುಡುವುದು ಅಥವಾ ಉರಿಸುವುದು;

**3.36"ಜಡವಾಗಿರುವವು"** ಎಂದರೆ ಜೈವಿಕವಾಗಿ ವಿಘಟನೆ ಆಗದ, ಮರುಬಳಕೆ ಮಾಡಲಾಗದ ಅಥವಾ ಸುಡಲಾಗದ ತ್ಯಾಜ್ಯಗಳು, ಬೀದಿ ಗುಡಿಸುವ ತ್ಯಾಜ್ಯ, ಅಥವಾ ಧೂಳು, ಮೇಲ್ಮಟ್ಟದ ಚರಂಡಿಗಳಿಂದ ತೆಗೆಯಲಾದ ಹೂಳು, ಅಥವಾ ತ್ಯಾಜ್ಯ ಸಂಸ್ಕರಣೆಯಿಂದ ತಿರಸ್ಕತವಾಗಿರುವಂತಹ ಜಡ ವಸ್ತುಗಳು ಸೇರಿವೆ;

**3.37 "ಅನೌಪಚಾರಿಕ ತ್ಯಾಜ್ಯ ಸಂಗ್ರಾಹಕರು"**ಎಂದರೆ ಮರು ಬಳಕೆ ಮಾಡುವಂತಹ ವಸ್ತುಗಳನ್ನು ಸಂಗ್ರಹಿಸುವ, ಪ್ರತ್ಯೇಕಿಸುವ, ಮಾರಾಟ ಮಾಡುವ ಅಥವಾ ಖರೀದಿ ಮಾಡುವ ವ್ಯಕ್ತಿಗಳು, ಸಂಘಗಳು ಅಥವಾ ತ್ಯಾಜ್ಯ ವ್ಯಾಪಾರಿಗಳು;

**3.38"ತಾಣಗಳಲ್ಲಿ (ಕಿಯಾಸ್ಕ್) ಸಂಗ್ರಹಣೆ"** ಎಂದರೆ ಕಸ ಉತ್ಪಾದಕರು ಸಂಗ್ರಹಿಸಿದ ಮತ್ತು ಪ್ರತ್ಯೇಕಿಸಿದ ಘನತ್ಯಾಜ್ಯವನ್ನು ತ್ಯಾಜ್ಯ ಪಡೆಯುವ ತಾಣಕ್ಕೆ ಅಥವಾ ಕಸ ಕಿಯಾಸ್ಕ್ ಗೆ ತಂದು ನೀಡುವ ವ್ಯವಸ್ಥೆ. ಇದನ್ನು ಬಿಬಿಎಂಪಿ ಮತ್ತು/ಅಥವಾ ನೋಂದಾಯಿತ ಸೇವಾದಾರರಿಂದ ನೀಡಲ್ಪಟ್ಟ ವಾಹನಗಳಲ್ಲಿ ಮುಂದಿನ ಸಾಗಾಟಕ್ಕಾಗಿ ಕಳುಹಿಸುವ ಪದ್ಧತಿ.

**3.39 "ಕೆಎಸ್‌ಪಿಸಿಬಿ"**ಎಂದರೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ;

**3.40 "ಲೀಚೆಟ್"**ಎಂದರೆ ಘನತ್ಯಾಜ್ಯದೊಳಗೆ ಅಥವಾ ಇತರೇ ಮಾಧ್ಯಮದೊಳಗೆ ಹರಿದು ಅವುಗಳಲ್ಲಿ ಕರಗಿ ಹೋಗಿರುವ ಅಥವಾ ಅವುಗಳಿಗೆ ಅಂಟಿಕೊಂಡಿರುವ / ತೂಗು ಹಾಕಿಕೊಂಡಿರುವ ವಸ್ತುಗಳನ್ನು ಹೊರಗೆ ತರುವ ದ್ರವವಾಗಿದೆ.

**3.41 "ಕಸ"** ಎಂದರೆ ಎಲ್ಲ ತಿರಸ್ಕತ ಮತ್ತು ಅಸ್ವಚ್ಛ ವಾತಾವರಣ ನಿರ್ಮಾಣ ಮಾಡುವಂತಹ, ಈ ಉಪನಿಯಮ ಪ್ರಕಾರ ನಿಷೇಧಿಸಲ್ಪಟ್ಟಿರುವ ವಸ್ತುಗಳನ್ನು ಎಸೆಯುವುದರಿಂದ ಅಥವಾ ಸಂಗ್ರಹಿಸುವುದರಿಂದ ಸಾರ್ವಜನಿಕ ಆರೋಗ್ಯಕ್ಕೆ ಹಾನಿಕಾರಕ ಆಗಬಹುದಾದ ಸುರಕ್ಷತೆ ಅಥವಾ ಕ್ಷೇಮಕ್ಕೆಅಪಾಯಕಾರಿ ಆಗಬಹುದಾದ ವಸ್ತುಗಳು;

**3.42"ಕಸದಡಬ್ಬಿ"** ಎಂದರೆ ಸಾಕಷ್ಟು ಸಂಖ್ಯೆಯ ಜನರು ಓಡಾಡುವ ಪ್ರದೇಶಗಳಾದ ವಾಣಿಜ್ಯ ಪ್ರದೇಶಗಳು, ಮಾರುಕಟ್ಟೆ, ಪ್ರವಾಸಿ ತಾಣಗಳು ಹಾಗೂ ಇನ್ನಿತರ ಸ್ಥಳಗಳಾಗಿದ್ದು ಸಾರ್ವಜನಿಕರ /ಪಾದಚಾರಿಗಳ ಅನುಕೂಲಕ್ಕಾಗಿ ಬಿಬಿಎಂಪಿ ನಿರ್ಮಿಸಿ ನಿರ್ವಹಿಸುವ ಪ್ರತ್ಯೇಕಿಸಿದ ಕಸ ಸಂಗ್ರಹ ವ್ಯವಸ್ಥೆ ಆಗಿದೆ. ಆದರೆ, ಇವುಗಳನ್ನು ಪ್ರಾಥಮಿಕ ಸಂಗ್ರಹದಿಂದ ಸಂಗ್ರಹವಾದ ಕಸದ ದ್ವಿತೀಯ ಹಂತದ ಕಸ ಸಂಗ್ರಹಡಬ್ಬಗಳೆಂದು ಪರಿಗಣಿಸಬಾರದು;

**3.43 "ಕಸ ಎಸೆಯುವುದು"**ಎಂದರೆ ಅದು ಬೀಳುವ, ಇಳಿಯುವ, ಬೀಸುವ, ಕೊಚ್ಚಿ ಹೋಗುವ/ ತೊಳೆದು ಹೋಗುವ, ಜಿನುಗುವ/ಒಳ ಸೇರಿ ಹೋಗುವ ಅಥವಾ ತಪ್ಪಿಸಿಕೊಳ್ಳುವ ಅಥವಾ ಬೀಳಬಹುದಾದ ಕಡೆಗಳಲ್ಲಿ ಕಸ ಹಾಕುವುದು ಅಥವಾ ಎಸೆಯುವುದು ಅಥವಾ ಇಳಿದು ಹೋಗಬಹುದಾದ/ತೊಳೆದು ಹೋಗಬಹುದಾದ/ಜಿನುಗಬಹುದಾದ/ಒಳ ಸೇರಿ ಹೋಗಬಹುದಾದ ಅಥವಾ ತಪ್ಪಿಸಿಕೊಳ್ಳಬಹುದಾದ ಅಥವಾ ಸಾರ್ವಜನಿಕ ಸ್ಥಳಗಳಲ್ಲಿಕಸ ಬೀಳುವಂತೆ ಮಾಡಬಹುದಾದ ಅಥವಾ ಕಸವು ಬೀಳಲು, ಹಾರಿ ಹೋಗಲು ಅನುವು ಮಾಡಿಕೊಡುವುದು, ತೊಳೆದು ಹೋಗಲು, ಬಸಿದು/ಜಿನುಗಿ ಹೋಗಲು ಅಥವಾ ತಪ್ಪಿಸಿಕೊಂಡು ಹೋಗುವ ಕಡೆಗಳಲ್ಲಿ ಕಸವನ್ನು ಹಾಕುವುದು/ಎಸೆಯುವುದು ಅಥವಾ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಹಾಕುವುದು.

**3.44 "ಮಾರುಕಟ್ಟೆ ಸಂಘಗಳು"**ಎಂದರೆ ಅಂಗಡಿ ಮಾಲೀಕರು ಅಥವಾ ಅಂಗಡಿ ಇಟ್ಟವರು ವ್ಯಾಪಾರಿಗಳು, ವರ್ತಕರು, ವ್ಯವಹಾರಸ್ಥರು, ಡೀಲರ್ ಗಳು, ವ್ಯಾಪಾರಿಗಳು, ಮಧ್ಯವರ್ತಿಗಳು ಅಥವಾ ಏಜೆನ್ಸಿ, ನಿಗದಿತ ನೆರೆಹೊರೆಯ ಪ್ರದೇಶಕ್ಕೆ ಸೇವೆ ಒದಗಿಸುವವರು ಆಗಿದ್ದು ಮಾರುಕಟ್ಟೆ ಅಥವಾ ಸಹಕಾರ ಸಂಘಗಳ ರಿಜಿಸ್ಟ್ರಾರ್ ಬಳಿ ನೋಂದಣಿ ಆಗಿರುವ ಅಥವಾ ಆಗದೇ ಇರುವ ಪ್ರದೇಶಗಳ ಗುಂಪು ಅಥವಾ ಕೂಟ/ಸಂಘಗಳಾಗಿವೆ;

**3.45"ವಸ್ತುಗಳ ಪುನರ್ಪಡೆಯುವ ವ್ಯವಸ್ಥೆ/ಒಟ್ಟುಗೂಡಿಸುವ ಕೇಂದ್ರ"** ಎಂದರೆ ಕಾಂಪೋಸ್ಟ್ ಮಾಡಲಾಗದ ಘನತ್ಯಾಜ್ಯವನ್ನು ಒಟ್ಟುಗೂಡಿಸುವ ಮತ್ತು ದ್ವಿತೀಯ ಮತ್ತು ತೃತೀಯ ಪ್ರಕ್ರಿಯೆಯನ್ನು ಬಿಬಿಎಂಪಿ ಅಥವಾ ಬಿಬಿಎಂಪಿಯು ಅಧೀಕೃತಗೊಳಿಸಿರುವ ಯಾವುದೇ ವ್ಯಕ್ತಿ ಅಥವಾ ಸೇವಾದಾರ ಸಂಸ್ಕರಣೆ ಅಥವಾ ವಿಲೇವಾರಿ ಮಾಡಲು ತಲುಪಿಸುವ ಮುನ್ನ ಪ್ರತ್ಯೇಕಿಸಲು, ವಿಂಗಡಿಸಲು ಮತ್ತು ತ್ಯಾಜ್ಯದ ವಿವಿಧ ಭಾಗಗಳಿಂದ ಮರುಬಳಕೆ ಮಾಡಬಹುದಾದವುಗಳನ್ನು ಮರಳಿ ಪಡೆಯಲು ಅಧಿಕೃತ ಅನೌಪಚಾರಿ ಕಚೇರಿ ಆಯುವವರ, ಮರುಬಳಕೆ ಮಾಡುವವರ ಅಥವಾ ಸ್ಥಳೀಯ ಸಂಸ್ಥೆಗಳಿಂದ ಗೊತ್ತು ಮಾಡಲ್ಪಟ್ಟಿರುವ.

**3.46 "ಮಾರ್ಷಲ್ಸ್"** ಎಂದರೆ ಬಿಬಿಎಂಪಿ ನೌಕರರು ಅಥವಾ ಆಯುಕ್ತರಿಂದ ನೇಮಕಗೊಂಡ ಇತರರಾಗಿದ್ದು ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುವ ನಡವಳಿಕೆಗಳನ್ನು ಪತ್ತೆ ಮಾಡುವುದು ಅಥವಾ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುವ ಮಾನವನ ಹೊರತಾದ ತಂತ್ರಜ್ಞಾನ ಮಧ್ಯವರ್ತಿ.

**3.47" ಹಾಜರಾತಿ ಸ್ಥಳಗಳು"**ಎಂದರೆ ವಾರ್ಡ್‌ನೊಳಗೆ ನಿಗದಿತ ಪ್ರದೇಶವಾಗಿದ್ದು ತ್ಯಾಜ್ಯ ಕೆಲಸಗಾರರ ಹಾಗೂ ವಾಹನಗಳ ಹಾಜರಾತಿ ಪಡೆಯಲು ವಾರ್ಡ್‌ವೊಂದರಲ್ಲಿ ನಿಗದಿಪಡಿಸಿದ ಪ್ರದೇಶವಾಗಿದೆ. ವಾರ್ಡ್‌ನ ಗಾತ್ರಕ್ಕೆ ಅನುಗುಣವಾಗಿ ಹಾಜರಾತಿ ಪ್ರದೇಶಗಳ ಸಂಖ್ಯೆಯನ್ನು ಸೂಕ್ತವಾಗಿ ಅಂತಿಮಗೊಳಿಸಬಹುದು.

**3.48 "ನೆರೆಹೊರೆ"** ಎಂದರೆ ಅದರ ಭೌತಿಕ ವಿನ್ಯಾಸಕ್ಕೆ ಸಂಬಂಧಿಸಿ, ಸ್ವಭಾವ ಅಥವಾ ಅಲ್ಲಿನ ನಿವಾಸಿಗಳನ್ನು ಸಂಬಂಧಿಸಿದ ಸ್ಪಷ್ಟವಾಗಿ ವಿವರಿಸಲಾಗಿರುವ / ವ್ಯಾಖ್ಯಾನಿಸಲಾಗಿರುವ ಪ್ರದೇಶ.

**3.49 "ಹೊಸ ನಿರ್ಮಾಣ"**ಎಂದರೆ ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದಲ್ಲಿರುವ ಎಲ್ಲಾ ಕಟ್ಟಡಗಳು.

**3.50 "ಜೈವಿಕವಾಗಿ ವಿಘಟನೆಯಾಗದ ತ್ಯಾಜ್ಯ"** ಸೂಕ್ಷ್ಮಾಣು ಜೀವಿಗಳಿಂದ ಸರಳವಾದ ಹಾಗೂ ಸ್ಥಿರ ಸಂಯುಕ್ತವಾಗಿ ವಿಘಟಿಸಲಾಗದ ಯಾವುದೇ ತ್ಯಾಜ್ಯ;

3.51 **"ನೋಂದಾಯಿತ ಸೇವಾದಾರರು"** ಎಂದರೆ ಯಾವುದೇ ವ್ಯಕ್ತಿ/ಸಂಸ್ಥೆಗಳು, ನೋಂದಾಯಿತ ಸಂಘ, ಟ್ರಸ್ಟ್, ಪಾಲುದಾರಿಕೆ, ಸೀಮಿತ ಹೊಣೆಗಾರಿಕೆ ಮತ್ತು/ಅಥವಾ ಇತರೆ ನೋಂದಾಯಿತ ಸಂಸ್ಥೆ ಜೊತೆಗೆ ಚಿಂದಿ ಆಯುವವರ ನೋಂದಾಯಿತ ಸಂಸ್ಥೆ ಅಥವಾ ಯಾವುದೇ ಸ್ವಸಹಾಯ ಗುಂಪುಗಳು ಮತ್ತು/ಅಥವಾ ತ್ಯಾಜ್ಯ ವ್ಯವಹಾರ ಸ್ಥರು ದ್ವಿಪಕ್ಷೀಯ ಒಪ್ಪಂದ ಪ್ರಕಾರ ಬಿಬಿಎಂಪಿಯಿಂದ ನೇಮಕಗೊಂಡ ಬೃಹತ್‌ತ್ಯಾಜ್ಯಉತ್ಪಾದಕರಲ್ಲದ ಕಾರ್ಮಿಕ ಕಾನೂನು ಸೇರಿದಂತೆ ಅನ್ವಯವಾಗುವ ಎಲ್ಲಾ ನಿಬಂಧನೆಗಳನ್ನು ಪಾಲಿಸುವ ಕಸ ಉತ್ಪಾದಕರಿಗೆ ಸೇವೆ ಒದಗಿಸುವ ಬಿಬಿಎಂಪಿಯಿಂದ ನೇಮಿಸಲ್ಪಟ್ಟವರು;

**3.52"ಉಪದ್ರವ"** ಎಂದರೆ ಯಾವುದೇ ಜೀವಕ್ಕೆ ಅಪಾಯತರಬಲ್ಲ, ಆರೋಗ್ಯಕ್ಕೆಅಥವಾ ಆಸ್ತಿಗೆ ಹಾನಿಕಾರಕವಾಗುವಂತಹ ದೇಹಕ್ಕೆ ಘಾಸಿ ಉಂಟು ಮಾಡಬಲ್ಲ, ಅಪಾಯಕರ, ಕಿರಿಕಿರಿ ತರುವ ಅಥವಾ ನೋಡುವುದಕ್ಕೆ ಅಪರಾಧ ಎನ್ನಿಸುವಂತಹ, ವಾಸನೆ ಉಂಟು ಮಾಡಬಲ್ಲ ಅಥವಾ ಕೇಳಬಲ್ಲ ಯಾವುದೇ ಕೃತ್ಯ, ಲೋಪ/ಚ್ಯುತಿತರುವ ವಿಷಯ.

**3.53 "ಅನುಭೋಗದಾರ"** ಎಂದರೆ ಮತ್ತು ಇವರನ್ನು ಒಳಗೊಂಡಿದೆ,

ಭೂಮಿ, ಕಟ್ಟಡ(ಗಳು), ಕೊರಡಿ(ಗಳು) ಮತ್ತು/ಅಥವಾ ಅದೇ ರೀತಿಯಾದ ಆವರಣಗಳನ್ನು ಅಥವಾ ಅದರ ಭಾಗಗಳನ್ನು ಅನುಭೋಗಿಸುವುದಕ್ಕಾಗಿ ಅಥವಾ ಬಳಕೆಗಾಗಿ ಬಾಡಿಗೆ ನೀಡುತ್ತಿರುವ ಅಥವಾ ಮಾಲಿಕನಿಗೆ ಬಾಡಿಗೆ ನೀಡಬೇಕಾದ ಯಾವುದೇ ವ್ಯಕ್ತಿ;

i. ಭೂಮಿ, ಕಟ್ಟಡ(ಗಳು), ಕೊಠಡಿ(ಗಳು) ಮತ್ತು/ಅಥವಾ ಅದೇ ರೀತಿಯಾದ ಆವರಣಗಳನ್ನು ಅನುಭೋಗಿಸುತ್ತಿರುವ ಅಥವಾ ಬಳಕೆ ಮಾಡುತ್ತಿರುವ ಮಾಲಿಕ.

ii. ಭೂಮಿ, ಕಟ್ಟಡ(ಗಳು), ಕೊಠಡಿ(ಗಳು) ಮತ್ತು/ಅಥವಾ ಅದೇ ರೀತಿಯಾದ ಆವರಣಗಳ ಬಾಡಿಗೆ–ಉಚಿತ ಬಾಡಿಗೆದಾರ;

iii. ಭೂಮಿ, ಕಟ್ಟಡ(ಗಳು), ಕೊಠಡಿ(ಗಳು) ಮತ್ತು/ಅಥವಾ ಅದೇ ರೀತಿಯಾದ ಆವರಣಗಳ ಪರವಾನಗಿ ಹೊಂದಿರುವವರು;

iv. ಭೂಮಿ, ಕಟ್ಟಡ(ಗಳು), ಕೊಠಡಿ(ಗಳು) ಮತ್ತು/ಅಥವಾಅದೇರೀತಿಯಾದ ಆವರಣಗಳ ಉಪಯೋಗ ಮತ್ತು ಅನುಭೋಗಕ್ಕಾಗಿ ಮಾಲಿಕರಿಗೆ ನಷ್ಟ ನೀಡಬೇಕಾದ ಯಾವುದೇ ವ್ಯಕ್ತಿ; ಮತ್ತು

v. ಸಂಬಂಧಿತರ ಅಧೀನದಲ್ಲಿರುವ ಸ್ವತ್ತುಗಳ ಸರ್ಕಾರಿ ಇಲಾಖೆಗಳ ಮುಖ್ಯಸ್ಥ;

**3.54 "ಕೇಂದ್ರ/ಘಟಕ ನಿರ್ವಾಹಕ"**ಎಂದರೆ ಘನತ್ಯಾಜ್ಯ ನಿರ್ವಹಣೆ ಸೌಲಭ್ಯ ಅಥವಾ ವ್ಯವಸ್ಥೆಯ ಮಾಲಿಕತ್ವ ಹೊಂದಿರುವ ಅಥವಾ ನಿರ್ವಹಿಸುತ್ತಿರುವ ಬಿಬಿಎಂಪಿ ಒಳಗೊಂಡಂತೆ ಅಥವಾ ಬಿಬಿಎಂಪಿಯಿಂದ ನೇಮಕವಾದ ಇನ್ನಾವುದೇ ಸಂಸ್ಥೆ/ಘಟಕ ಅಥವಾ ಏಜೆನ್ಸಿಯಾಗಿದೆ;

**3.55** **"ಮಾಲಿಕ"**ಎಂದರೆ ಯಾವುದೇ ಕಟ್ಟಡ, ಅಥವಾ ಭೂಮಿ ಅಥವಾ ಅದರ ಭಾಗದ ಮಾಲಿಕರ ಹಕ್ಕುಗಳನ್ನು ಚಲಾಯಿಸುವ ವ್ಯಕ್ತಿ;

**3.56** **"ಪ್ರಾಥಮಿಕ ಸಂಗ್ರಹಣೆ"**ಎಂದರೆ ಪ್ರತ್ಯೇಕಿಸಿದ ಘನತ್ಯಾಜ್ಯವನ್ನು ಅದರ ಉತ್ಪಾದನಾ ಮೂಲಗಳಾದ ಮನೆಗಳೂ ಸೇರಿದಂತೆ ಅಂಗಡಿಗಳು, ಕಚೇರಿಗಳು ಮತ್ತಿತರ ಇನ್ನಾವುದೇ ಗೃಹೇತರ ಆವರಣಗಳಿಂದ ಅಥವಾ ಸಂಗ್ರಹ ಕೇಂದ್ರಗಳಿಂದ ಅಥವಾ ಬಿಬಿಎಂಪಿ ನಿಗದಿ ಮಾಡಿದ ಯಾವುದೇ ಖಚಿತ ಸ್ಥಳದಿಂದ ಸಂಗ್ರಹಿಸುವುದು, ಎತ್ತುವುದು ಹಾಗೂ ತೆಗೆಯುವುದು;

**3.57** **"ಸಂಸ್ಕರಣೆ"** ಎಂದರೆ ಪ್ರತ್ಯೇಕಿಸಿದ ಘನ ತ್ಯಾಜ್ಯಗಳನ್ನು ಮತ್ತೆ ಉಪಯೋಗಿಸುವ, ಪುನರ್ ಬಳಕೆಗೆ ಪರಿವರ್ತಿಸುವ (ರೀಸೈಕಲ್) ಅಥವಾ ಹೊಸ ವಸ್ತುವಾಗಿ ಬದಲಿಸುವ ವೈಜ್ಞಾನಿಕ ಪ್ರಕ್ರಿಯೆ ಆಗಿದೆ.

**3.58** **"ಸಂಸ್ಕರಣೆ ಶುಲ್ಕ"**ಎಂದರೆ ಬಿಬಿಎಂಪಿ ನಿಗದಿ ಮಾಡಿದ ಶುಲ್ಕ ಅಥವಾ ಬೆಂಬಲ ಬೆಲೆ ಆಗಿದ್ದು, ಮಾಲಿಕರು/ಗ್ರಾಹಕರು (ರಿಯಾಯಿತಿ ಪಡೆಯುವವರು), ಅಥವಾ ತ್ಯಾಜ್ಯ ಸಂಸ್ಕರಣೆ ವ್ಯವಸ್ಥೆ ಹೊಂದಿರುವ ನಿರ್ವಾಹಕರು ಅಥವಾ ಉಳಿಕೆ ಘನತ್ಯಾಜ್ಯವನ್ನು ಬಳಕೆ ಮಾಡುತ್ತಿರುವ ಭೂಭರ್ತಿ ಸ್ಥಳದಲ್ಲಿ ವಿಲೇವಾರಿ ಮಾಡಲು, ಅಗತ್ಯವಿರುವ ಎಲ್ಲೇ ಆಗಲಿ ಪಾವತಿಸಲು ವಿಧಿಸುವ ಶುಲ್ಕವಾಗಿದೆ.

**3.59** **"ಸಾರ್ವಜನಿಕ ಸ್ಥಳ"**ಎಂದರೆ ಯಾವುದೇ ರಸ್ತೆ, ಪ್ರಧಾನರಸ್ತೆ, ಸೇತುವೆರಸ್ತೆ, ಬೀದಿ/ಗಲ್ಲಿ, ಕಾಲುದಾರಿ, ಓಣಿ ಅಥವಾ ಓಡಾಡುವ ಸ್ಥಳ/ಭಾಗ, ಹೆದ್ದಾರಿ, ಏರುದಾರಿ/ ಒಡ್ಡುದಾರಿ, ಸೇತುವೆ, ಚೌಕದಓಣಿ ಅಥವಾ ನಡುಭಾಗವಾಗಿದೆ. ಇದು ಸಾರ್ವಜನಿಕ ರಸ್ತೆ ಆಗಿರಬಹುದು ಅಥವಾ ಸಾರ್ವಜನಿಕರಿಗೆ ಓಡಾಟದ ಹಕ್ಕು ಹೊಂದಿರುವ, ಸಾರ್ವಜನಿಕರಿಗೆ ಪ್ರವೇಶದ

ಹಕ್ಕು ಇರುವ ಉದ್ಯಾನವನಗಳು, ಹೂತೋಟಗಳು, ಮನರಂಜನಾ ಮೈದಾನಗಳು, ಆಟದ ಮೈದಾನಗಳು, ಕಡಲತೀರಗಳು, ಜಲಮೂಲಗಳು, ನೀರಿನ ಹರಿವುಗಳು, ಸಾರ್ವಜನಿಕ ಪ್ಲಾಜ್ಜಾಗಳು ಹಾಗೂ ವಾಯುವಿಹಾರ ಸ್ಥಳಗಳು, ಸರಕಾರಿ ಮತ್ತು ಮಹಾನಗರಪಾಲಿಕೆ ಕಟ್ಟಡಗಳು, ಸಾರ್ವಜನಿಕ ಆಸ್ಪತ್ರೆಗಳು, ಮಾರುಕಟ್ಟೆಗಳು, ವಧಾಗಾರಗಳು, ನ್ಯಾಯಾಲಯಗಳು ಇತ್ಯಾದಿಗಳನ್ನು ಒಳಗೊಂಡಿದೆ;

**3.60** **"ಸಾರ್ವಜನಿಕ ಉಪದ್ರವ"**ಎಂದರೆ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ದೇಹಕ್ಕೆ ಘಾಸಿ ಉಂಟು ಮಾಡಬಲ್ಲ, ಅಪಾಯಕರ, ಕಿರಿಕಿರಿ ತರುವ ಅಥವಾ ನೋಡುವುದಕ್ಕೆ ಅಪರಾಧ ಎನ್ನಿಸುವಂತಹ, ವಾಸನೆ ಉಂಟು ಮಾಡಬಲ್ಲ ಅಥವಾ ಕೇಳಬಲ್ಲ ಅಥವಾ ಓಡಾಟಕ್ಕೆ ತೊಂದರೆ ಉಂಟು ಮಾಡಬಲ್ಲ ಕೆಲಸ ಅಥವಾ ಶಾಂತಿಗೆ ಭಂಗತರಬಲ್ಲ ಜೀವಕ್ಕೆ ಅಪಾಯ ತಂದೊಡ್ಡಬಲ್ಲ ಅಥವಾ ಆರೋಗ್ಯ ಅಥವಾ ಆಸ್ತಿಗೆ ಹಾನಿ ಉಂಟುಮಾಡಬಲ್ಲ ಯಾವುದೇ ಕೃತ್ಯ, ಲೋಪ/ಚ್ಯುತಿತರುವ ವಿಷಯ;

**3.61** **"ಸಾರ್ವಜನಿಕ ಬೀದಿ"** ಎಂದರೆ ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆ1976ರ ಉಪಕಲಮು (31)ರ ಕಲಮು (2)ರಲ್ಲಿರುವ ಅರ್ಥವನ್ನೇ ಹೊಂದಿರಬೇಕು;

**3.62** **"ಆವರಣ"**ಎಂದರೆ ಯಾವುದೇ ಜಾಗ, ಕಟ್ಟಡ ಅಥವಾ ಕಟ್ಟಡದ ಭಾಗವಾಗಿದ್ದು ಅದಕ್ಕೆ ಸಂಬಂಧಿಸಿದ ಯಾವುದೇ ಹೂದೋಟ/ಉದ್ಯಾನ,ಮೈದಾನ ಅಥವಾ ಅದರ ಒಂದು ಭಾಗ ಹಾಗೂ ಭೂಮಿಯ ಮೇಲೆ ನಿರ್ಮಿಸಲಾದ ಕಟ್ಟಡಗಳಾಗಿದ್ದು ವಾಸಿಸುವ ಮನೆ, ವ್ಯಾಪಾರ, ಕೈಗಾರಿಕೆ, ಸೇವೆ, ವ್ಯಾಪಾರ, ಸರಕಾರ ಅಥವಾ ಇನ್ನಾವುದೇ ಸಾರ್ವಜನಿಕ ಅಥವಾ ಖಾಸಗಿ ಉದ್ದೇಶಗಳಾದ ಮದುವೆ, ಔತಣಕೂಟ, ಸಭೆ, ವಸ್ತುಪ್ರದರ್ಶನ, ಕಾರ್ಯಕ್ರಮಗಳು ಇತ್ಯಾದಿಗಳಿಗೆ ಬಳಕೆ. ವಾಹನಗಳ ನಿಲುಗಡೆಗಾಗಿ, ಬೀದಿ ಬದಿವ್ಯಾಪಾರಕ್ಕಾಗಿ,ಕಾಮಗಾರಿಗಳ ಸ್ಥಳದಲ್ಲಿ ಸಾಮಗ್ರಿಗಳ ಸಂಗ್ರಹ ಅಥವಾ ಇನ್ನಾವುದೇ ಸಾರ್ವಜನಿಕ ಅಥವಾ ಖಾಸಗಿ ಉದ್ದೇಶಕ್ಕಾಗಿ ಬಿಬಿಎಂಪಿಯಿಂದತಾತ್ಕಾಲಿಕವಾಗಿ ಅನುಮತಿ ಪಡೆದಿರುವ ಸಾರ್ವಜನಿಕ ರಸ್ತೆಯ ಭಾಗ ಕೂಡ ಇದರಲ್ಲಿ ಸೇರಿದ್ದು ಇದು ವಾಹನಗಳ ಸಂಚಾರದ ಹೊರತಾಗಿ ಇನ್ನೇನೂ ಆಗಿರಬಹುದಾಗಿದೆ.

**3.63 "ಧಾರಕಗಳು"** ಎಂದರೆ ಯಾವುದೇ ಸಂಗ್ರಹದ ಪಾತ್ರೆ (ಕಂಟೇನರ್) ಆಗಿದ್ದು ಇದು ಯಾವುದೇ ರೀತಿಯ ಘನತ್ಯಾಜ್ಯದ ಸಂಗ್ರಹಕ್ಕಾಗಿ ಬಳಕೆ ಮಾಡುವ ಡಬ್ಬ ಮತ್ತು ಚೀಲಗಳು ಆಗಿರಬಹುದಾಗಿದೆ.

**3.64 "ಪುನರ್ ಬಳಕೆಗೆ ಪರಿವರ್ತಿಸುವುದು"** ಎಂದರೆ ಪ್ರತ್ಯೇಕಿಸಿದ ವಿಘಟನೆ ಹೊಂದದೇ ಇರುವ ಘನತ್ಯಾಜ್ಯವಾಗಿದ್ದು ಇದನ್ನು ಹೊಸ ಉತ್ಪನ್ನಗಳ ತಯಾರಿಗೆ ಅಥವಾ ಹೊಸ ಉತ್ಪನ್ನಗಳ ತಯಾರಿಗೆ ಕಚ್ಚಾ ವಸ್ತುವಾಗಿ ಬಳಸಲಾಗುವುದು. ಇದು ಮೂಲ ಉತ್ಪನ್ನಕ್ಕೆ ಸರಿ ಸಮನಾಗಿರಬಹುದು ಅಥವಾ ಅದನ್ನು ಹೋಲದೇ ಭಿನ್ನವಾಗಿರಬಹುದು.

**3.65 "ಪುನರ್ ಬಳಕೆಗೆ ಪರಿವರ್ತಿಸಬಹುದಾದ ತ್ಯಾಜ್ಯ"**ಎಂದರೆ ಸಾಮಾನ್ಯವಾಗಿ ಘನ ತ್ಯಾಜ್ಯದಲ್ಲಿ ಕಂಡು ಬರುವ ಮತ್ತು ಒಟ್ಟಾಗಿ ಮತ್ತು ಸಾಮಾನ್ಯವಾಗಿ "ಒಣ ತ್ಯಾಜ್ಯ/ಕಸ" ಎಂದು ಕರೆಯಲಾಗುವುದು. ಹಲವು ವಿಧದ ಗಾಜುಗಳು, ಕಾಗದ, ಲೋಹ, ಪ್ಲಾಸ್ಟಿಕ್, ವಸ್ತ್ರ, ಇಲೆಕ್ಟ್ರಾನಿಕ್ ವಸ್ತುಗಳು ಇತ್ಯಾದಿ ಆಗಿದೆ.

**3.6 "ತಿರಸ್ಕೃತ ತ್ಯಾಜ್ಯ"** ಎಂದರೆ ವಿವಿಧ ಚಟುವಟಿಕೆಗಳಿಂದ ಉತ್ಪಾದನೆಯಾದ, ಜೈವಿಕವಾಗಿ ವಿಘಟಿಸಬಲ್ಲ / ಜೈವಿಕವಾಗಿ ವಿಘಟಿಸಲಾಗದ ಸ್ವಭಾವವುಳ್ಳ ಪ್ರಕ್ರಿಯೆಗಳು ಘನ ಅಥವಾ ಅರೆ ಘನ ರೂಪದಲ್ಲಿರುವ ಸೇವಿಸಲಾಗದ, ಬಳಸಲಾಗದ ಅಥವಾ ಪ್ರಸ್ತುತಇರುವ ಸ್ಥಿತಿಯಲ್ಲಿ ಉತ್ಪಾದಕರಿಂದ ಸಂಸ್ಕರಿಸಲಾಗದಯಾವುದೇತ್ಯಾಜ್ಯ.

**3.67" ತಿರಸ್ಕೃತ ತ್ಯಾಜ್ಯ ಉತ್ಪಾದಿತ ಇಂಧನ"(ಆರ್.ಡಿ.ಎಫ್)** ಎಂದರೆ ಕ್ಲೋರಿನ್‌ಯುಕ್ತ ವಸ್ತುಗಳನ್ನು ಹೊರತಾಗಿ ಪ್ಲಾಸ್ಟಿಕ್, ಮರ ಅಥವಾ ಸಾವಯವ ತ್ಯಾಜ್ಯದಂತಹ ಘನತ್ಯಾಜ್ಯಗಳ ದಹನಕಾರಿ ಅಂಶದಿಂದ ಪಡೆದಿರುವ ಇಂಧನ. ಇದು ಉಂಡೆಯ ಅಥವಾ ಘನತ್ಯಾಜ್ಯವನ್ನುಒಣಗಿಸುವುದರಿಂದ, ನವಿರು ಗರಿಯಿಂದ, ನಿರ್ಜಲೀಕರಣಗೊಳಿಸುವುದ ರಿಂದ ಹಾಗೂ ಒತ್ತೊತ್ತಾಗಿಡುವುದರಿಂದ ರೂಪಿಸಬಹುದು.

**3.68 "ಉಳಿಕೆಯಾದ ಜಡತ್ಯಾಜ್ಯ"** ಎಂದರೆತ್ಯಾಜ್ಯ ಮತ್ತು ಘನ ತ್ಯಾಜ್ಯದ ಸಂಸ್ಕರಣೆ ವ್ಯವಸ್ಥೆ/ಸೌಲಭ್ಯದಿಂದತಿರಸ್ಕರಿಸಲ್ಪಟ್ಟಿರುವಂತಹುದಾಗಿದ್ದು ಇವುಗಳು ಪುನರ್ ಬಳಕೆಗೆ ಪರಿವರ್ತಿಸಲಾಗದಅಥವಾ ಮುಂದಿನ ಸಂಸ್ಕರಣೆಗೆ ಸಾಧ್ಯವಾಗದೇ ಇರುವಂತಹುದನ್ನು ಒಳಗೊಂಡಿರುತ್ತದೆ.

**3.69 "ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ"** ಎಂದರೆ ನಿರ್ದಿಷ್ಟ ನೆರೆಹೊರೆಯ ಅಥವಾ ಬಿಬಿಎಂಪಿ ವ್ಯಾಪ್ತಿಗೆ ಬರುವ ಪ್ರದೇಶದ ಗುಂಪು, ಮಾಲಿಕರ ಸಂಘ ಅಥವಾ ವಸತಿ ಸಮುಚ್ಛಯದ ಅನುಭೋಗಿಗಳು ಆಗಿದ್ದು ಸಹಕಾರ ಸಂಘಗಳ ರಿಜಿಸ್ಟ್ರಾರ್ ಅವರಿಂದ ನೋಂದಣಿ ಆಗಿರುವ ಅಥವಾ ಆಗಿರದೇ ಇರುವುದನ್ನು ಒಳಗೊಂಡಿರಬಹುದು. ಇವುಗಳು ಬಿಬಿಎಂಪಿಗೆ ಸಂಬಂಧಿಸಿದ ನಾಗರಿಕ ಸಮಸ್ಯೆಗಳನ್ನು ಹೊಂದಿರುತ್ತದೆ.

**3.70 "ನಿಯಮಗಳು"**ಎಂದರೆ ಘನತ್ಯಾಜ್ಯ ನಿರ್ವಹಣಾ ನಿಯಮಾವಳಿ, 2016

**3.71 "ನೈರ್ಮಲ್ಯ ಭೂಭರ್ತಿ"**ಎಂದರೆ ಉಳಿಕೆ ಜಡತ್ಯಾಜ್ಯವನ್ನು ಸುರಕ್ಷಿತ ಕ್ರಮಗಳಿಂದ ಸಿದ್ಧಪಡಿಸಿದ ಸ್ಥಳದಲ್ಲಿ ವಿಲೇವಾರಿ ವ್ಯವಸ್ಥೆ, ಅಂತರ್ಜಲ ಮಾಲಿನ್ಯ, ಮೇಲ್ಮೈಮಟ್ಟದ ನೀರಿನ ಮಾಲಿನ್ಯ, ಧೂಳಿನಿಂದ ಕೂಡಿದ ಗಾಳಿ, ಕಸದ ಮೇಲಿನ ಗಾಳಿ, ಕೆಟ್ಟ ವಾಸನೆ/ ದುರ್ಗಂಧ, ಬೆಂಕಿ ದುರಂತ, ಪ್ರಾಣಿಗಳ ಹಾವಳಿ, ಪಕ್ಷಿಗಳ ಹಾವಳಿ, ಕೀಟಗಳು, ಹೆಗ್ಗಣಗಳು, ಹಸಿರು ಮನೆ ಅನಿಲ ಹೊರಸೂಸುವ ಪರಿಣಾಮ, ನಿರಂತರ ಸಾವಯವ ಮಾಲಿನ್ಯ, ಅಸಮತೋಲಿತ ಇಳಿಜಾರು ಹಾಗೂ ಕುಸಿತಗಳ ವಿರುದ್ಧವಾಗಿ ಸುರಕ್ಷತಾ ಕ್ರಮಗಳೊಂದಿಗೆ ರೂಪಿಸಲಾದ ಭೂಭರ್ತಿ ವ್ಯವಸ್ಥೆಆಗಿದೆ.

**3.72 "ನೈರ್ಮಲ್ಯತ್ಯಾಜ್ಯ"** ಎಂದರೆ ಬಳಕೆ ಮಾಡಲಾದ ಡಯಾಪರ್ ಗಳು, ನೈರ್ಮಲ್ಯ ಟವೆಲ್‌ಗಳು, ಕರವಸ್ತ್ರ (ನ್ಯಾಪ್ಕಿನ್)ಗಳು, ಋತುಸ್ರಾವಿಕ (ಋತುಚಕ್ರದ ವೇಳೆ ಬಳಕೆ ಮಾಡಿದ) ಬಟ್ಟೆಗಳು ಮತ್ತು ಕಪ್‌ಗಳು, ಹಾಸಿಗೆಯ ಮೇಲೆ ಬಳಸಿದ ಹತ್ತಿಯ/ ಶೀಟ್‌ಗಳು, ಋತುಸ್ರಾವಿಕರಕ್ತ, ದೇಹದ ಮೇಲಿನ ಗಾಯದಿಂದಾದ ರಕ್ತ, ಇನ್ನಿತರ ಸ್ರವಿಸುವಿಕೆಯನ್ನು

ಸ್ವಚ್ಛಗೊಳಿಸಲು ಬಳಕೆ ಮಾಡಿದ ನುಣುಪಾದ ವಸ್ತು (ಟ್ಯಾಂಪನ್ಸ್), ಕಾಂಡೋಮ್‌ಗಳು (ಗರ್ಭನಿರೋಧಕಗಳು), ಕಿವಿ ಸ್ವಚ್ಛಗೊಳಿಸುವ ಕಡ್ಡಿಗಳು(ಇಯರ್ ಬಡ್ಸ್), ಶೌಚಾಲಯದ ಪೇಪರ್ ಗಳು, ಬ್ಯಾಂಡ್‌ಏಡ್, ಮನೆಗಳಲ್ಲಿ ಬಳಸಿದ ಸಿರಿಂಜ್‌ಗಳು ಹಾಗೂ ಇದೇ ತೆರನಾದ ಇನ್ನಿತರ ವಸ್ತುಗಳನ್ನೊಳಗೊಂಡಿರುವುದು.

**3.73** **"ಬೀದಿಗುಡಿಸುವುದು"**ಎಂದರೆ ಸಾರ್ವಜನಿಕ ರಸ್ತೆಗಳನ್ನು, ಕಾಲು ದಾರಿಗಳು, ಪಾದಚಾರಿ ಮಾರ್ಗಗಳು ಹಾಗೂ ರಸ್ತೆಗಳಲ್ಲಿ ಹಾಕಿರುವ ಮೇಲ್ಸೈ ಚರಂಡಿಗಳನ್ನು / ಕಂದಕ (ಕಾಲುವೆ)ಗಳನ್ನು ಒಂದುತುದಿಯಿಂದ ಇನ್ನೊಂದು ತುದಿವರೆಗೆ ನಿರ್ಧರಿತ ಸಮಯದಲ್ಲಿ/ ಪ್ರತಿದಿನವು ಕೈನಿಂದ ಅಥವಾ ಯಾಂತ್ರಿಕವಾಗಿ ಸ್ವಚ್ಛಗೊಳಿಸುವುದು.

**3.74** **"ಶುಚಿಮಿತ್ರ"** ಎಂದರೆ ವಾರ್ಡ್‌ನ/ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ವ್ಯಕ್ತಿಗಳ/ ನಾಗರಿಕರ ಗುಂಪು ಆಗಿದ್ದು ವ್ಯಾಪ್ತಿಯ ವಾರ್ಡ್ ಸಮಿತಿ ಮತ್ತು ಬಿಬಿಎಂಪಿಯೊಂದಿಗೆ ನೋಂದಾಯಿಸಲ್ಪಟ್ಟ ಮತ್ತು ಸ್ವಯಂಪ್ರೇರಿತವಾಗಿ,

(i) ನಿಯಮಿತ ಸಮೀಕ್ಷೆ(ಸರ್ವೇ)ಗಳನ್ನು ನಡೆಸುವುದು ಮತ್ತು ಎಸ್‌ಡಬ್ಲ್ಯುಎಮ್ ನಿಯಮಾವಳಿ 2016 ಅನುಷ್ಠಾನದ ಕುರಿತು ಹಾಗೂ ಈ ಉಪನಿಯಮ 2020ನ್ನು ಅವರ ವಾರ್ಡ್‌ಗಳಲ್ಲಿ ಅನುಷ್ಠಾನಗೊಳಿಸುವ ಕುರಿತು ವರದಿ ತಯಾರಿ.

(ii) ತಮ್ಮ ವಾರ್ಡ್‌ಗಳಲ್ಲಿ ಸ್ವಚ್ಛತಾ ಅಭಿಯಾನ ಅಥವಾ ಜಾಗೃತಿ ಅಭಿಯಾನಗಳಲ್ಲಿ ಪಾಲ್ಗೊಳ್ಳುವುದು ಮತ್ತು

(iii) ಸಮೀಕ್ಷೆ ವೇಳೆ ಗುರುತಿಸಲಾದ ವಿಚಾರಗಳ ಕುರಿತು ಪರಿಹಾರಕ್ಕಾಗಿ ವಾರ್ಡ್ ಸಮಿತಿ ಮತ್ತು ಘನತ್ಯಾಜ್ಯ ನಿರ್ವಹಣೆ ಕೋಶ ಹಾಗೂ ಬಿಬಿಎಂಪಿಯೊಂದಿಗೆ ಸಂಪರ್ಕ ಕಲ್ಪಿಸುವುದು.

**3.75 "ದ್ವಿತೀಯ ಬಿಂದು" (ದ್ವಿತೀಯ ಹಂತದ ಸಂಗ್ರಹಣೆ)** ಎಂದರೆ ಪ್ರಾಥಮಿಕ ಸಂಗ್ರಹಣೆಯ ಬಳಿಕ ಘನತ್ಯಾಜ್ಯವನ್ನು ಪ್ರಾಥಮಿಕ ಸಂಗ್ರಹಣೆಯಿಂದ ದ್ವಿತೀಯ ಸಂಗ್ರಹ ವಾಹನಕ್ಕೆ ವರ್ಗಾಯಿಸಲು ವಾರ್ಡ್‌ನಲ್ಲಿ ಗುರುತಿಸಲಾದ ಬಿಂದುವನ್ನು ತ್ಯಾಜ್ಯವನ್ನು ಸಂಸ್ಕರಣೆ ಅಥವಾ ವಿಲೇವಾರಿ ಸೌಲಭ್ಯಕ್ಕೆ ಸಾಗಾಟ ಮಾಡುವುದಕ್ಕಾಗಿ.

**3.76** **"ಪ್ರತ್ಯೇಕಿಸುವುದು/ಬೇರ್ಪಡಿಸುವುದು"**ಎಂದರೆ ಘನತ್ಯಾಜ್ಯದ ಬೇರೆ ಬೇರೆ ಅಂಶಗಳಾದ ಕೃಷಿ ಹಾಗೂ ಹೈನುಗಾರಿಕೆ(ಡೈರಿ) ಸೇರಿದಂತೆ ಜೈವಿಕವಾಗಿ ವಿಘಟನೆಗೊಳ್ಳುವ ತ್ಯಾಜ್ಯ, ಪುನರ್ ಬಳಕೆಗೆ ಪರಿವರ್ತಿಸಬಹುದಾದ ಮತ್ತು ಪುನರ್ ಬಳಕೆಗೆ ಪರಿವರ್ತಿಸಲಾಗದ ದಹನಕಾರಿ ತ್ಯಾಜ್ಯ ಹಾಗೂ ಪುನರ್ ಬಳಕೆಗೆ ಪರಿವರ್ತಿಸಲಾಗದ ಜಡತ್ಯಾಜ್ಯ, ಮನೆಗಳ ಅಪಾಯಕಾರಿ ತ್ಯಾಜ್ಯವೂ ಸೇರಿದಂತೆ ನೈರ್ಮಲ್ಯ ತ್ಯಾಜ್ಯ ಹಾಗೂ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯಗಳನ್ನು ವಿಂಗಡಿಸಿ ಪ್ರತ್ಯೇಕವಾಗಿ ಸಂಗ್ರಹಿಸುವುದು;

**3.77** **"ಬಳಕೆದಾರರ ಶುಲ್ಕ"**ಎಂದರೆ ಮಾಲಿನ್ಯಕಾರಕ ಪಾವತಿಸುವ ತತ್ವದ ಪ್ರಕಾರ ಘನತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವಿಲೇವಾರಿ ಸೇವೆಗಳನ್ನು ಒದಗಿಸುವ ಸಂಪೂರ್ಣ ಅಥವಾ ಭಾಗಶಃ ವೆಚ್ಚವನ್ನು ಭರಿಸಲು ಬೃಹತ್ ತ್ಯಾಜ್ಯ ಉತ್ಪಾದಕರಿಗೆ ಅಧಿಕೃತ ತ್ಯಾಜ್ಯ ಸಂಸ್ಕರಣೆಗಾರ ವಿಧಿಸುವ ನಿರ್ದಿಷ್ಟ ಶುಲ್ಕ.

**3.78** **"ಘನತ್ಯಾಜ್ಯ"**ಎಂದರೆ ಘನ ಅಥವಾ ಅರೆ ಘನ ರೂಪದಲ್ಲಿರುವ ಮನೆಗಳ ತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ, ವಾಣಿಜ್ಯ ತ್ಯಾಜ್ಯ, ಸಂಸ್ಥೆಗಳ ತ್ಯಾಜ್ಯ, ಅಡುಗೆ ಮತ್ತು ಮಾರುಕಟ್ಟೆ ತ್ಯಾಜ್ಯ ಮತ್ತು ಗೃಹೇತರ ತ್ಯಾಜ್ಯ, ಬೀದಿ ಗುಡಿಸುವುದರಿಂದ ಸಿಗುವ ತ್ಯಾಜ್ಯ, ಮೇಲ್ಮೈ ಚರಂಡಿಗಳಿಂದ ತೆಗೆಯಲಾದ ಹೂಳು, ತೋಟಗಾರಿಕಾ ತ್ಯಾಜ್ಯ, ಕೃಷಿ ಮತ್ತು ಹೈನುಗಾರಿಕಾ ತ್ಯಾಜ್ಯ, ಸಂಸ್ಕರಿತ ಬಯೋ ಮೆಡಿಕಲ್ (ವೈದ್ಯಕೀಯ)ತ್ಯಾಜ್ಯ, ಅಪಾಯಕಾರಿ ತ್ಯಾಜ್ಯಗಳನ್ನು ಒಳಗೊಂಡಿರುತ್ತದೆ. ಕೈಗಾರಿಕೇತರ ತ್ಯಾಜ್ಯ, ವೈದ್ಯಕೀಯ ತ್ಯಾಜ್ಯ ಮತ್ತು ಇ-ತ್ಯಾಜ್ಯ, ಬ್ಯಾಟರಿ ತ್ಯಾಜ್ಯ ಸ್ಥಳೀಯಾಡಳಿತದ ಪ್ರದೇಶದಿಂದ ಉತ್ಪಾದಿಸಲ್ಪಟ್ಟ ವಿಕಿರಣ ತ್ಯಾಜ್ಯ ಮತ್ತು ಘನತ್ಯಾಜ್ಯ ನಿಯಮಾವಳಿ 2016ರಡಿಯಲ್ಲಿ ನಿಯಮ-2ರಲ್ಲಿ ಹೇಳಲಾದ ಇನ್ನಿತರ ವಸ್ತುಗಳನ್ನು ಹೊರತುಪಡಿಸಿ;

**3.79** **"ವಿಂಗಡಿಸುವುದು"**ಎಂದರೆ ಕಾಗದ, ಪ್ಲಾಸ್ಟಿಕ್, ಕಾ ರ್ಡ್‌ಬೋರ್ಡ್‌ಗಳು(ರಟ್ಟು), ಲೋಹ, ಗಾಜು ಮೊದಲಾದ ಪುನರ್ ಬಳಕೆಗೆ ಸಾಧ್ಯವಾಗುವಂತಹ ಇನ್ನಿತರ ವಸ್ತುಗಳನ್ನು ಪುನರ್ ಬಳಕೆಗೆ ಪರಿವರ್ತಿಸಲು ಸಾಧ್ಯವಾಗುವಂತೆ ಸಾಕಷ್ಟು ಪ್ರಮಾಣದಲ್ಲಿ ಮಿಶ್ರಿತ ಘನತ್ಯಾಜ್ಯದಿಂದ ಪ್ರತ್ಯೇಕಿಸುವುದು.

**3.80** **"ಸ್ಥಿರೀಕರಣ"** ಎಂದರೆ ವಿಘಟಿಸಬಲ್ಲ ತ್ಯಾಜ್ಯವನ್ನು ಲೀಚೆಟ್ ಅಥವಾ ಆಕ್ರಮಣಕಾರೀ ವಾಸನೆ ಉತ್ಪಾದಿಸದಂತೆ ಸ್ಥಿರ ಸ್ಥಿತಿಗೆ ಜೈವಿಕ ವಿಘಟನೆಗೊಳಿಸುವುದು. ಇದು ಕೃಷಿ ಭೂಮಿಗೆ ಬಳಕೆಗೆ, ಮಣ್ಣಿನ ಸವಕಳಿ ನಿಯಂತ್ರಣ ಹಾಗೂ ಮಣ್ಣಿನ ಸ್ವಾಸ್ಥ್ಯಕ್ಕಾಗಿ ಬಳಸಲು ಯೋಗ್ಯವಾಗುವಂತೆ ಮಾಡುವುದು.

**3.81** **"ಸ್ಥಿರೀಕೃತ ಜೈವಿಕ ವಿಘಟನೆಗೊಳ್ಳುವ ತ್ಯಾಜ್ಯ"**ಎಂದರೆ ವಿಘಟನೆಗೊಳ್ಳಬಲ್ಲ ತ್ಯಾಜ್ಯವನ್ನು ಯಾಂತ್ರಿಕ/ಜೈವಿಕ ಸಂಸ್ಕರಣೆಯಿಂದ ಸ್ಥಿರೀಕೃತಗೊಳಿಸಿದ್ದರ (ರೋಗಕಾರಕಗಳಿಂದ ಮುಕ್ತವಾದ) ಫಲಿತಾಂಶ ಮತ್ತು ಕೇವಲ ಸ್ಥಿರೀಕರಿಸಿದಾಗ ಮಾತ್ರ ಯಾವುದೇ ನಿರ್ಬಂಧಗಳಿಲ್ಲದೇ ಬಳಕೆ ಮಾಡಬಹುದು.

**3.82** **"ಬೀದಿವ್ಯಾಪಾರಿ"**ಎಂದರೆ ಸರಕು/ಸಾಮಗ್ರಿಗಳು, ಸಾಮಾನು, ದಿನಸಿಗಳು, ಆಹಾರ ಸಾಮಗ್ರಿಗಳು ಅಥವಾ ದಿನಬಳಕೆಯ ಸಾಮಗ್ರಿಗಳ ಮಾರಾಟದಲ್ಲಿ ತೊಡಗಿರುವವರು ಅಥವಾ ಸಾರ್ವಜನಿಕರಿಗೆ ಸೇವೆ ಒದಗಿಸುವವರು. ಇವರು ಬೀದಿಯಲ್ಲಿ, ಓಣಿ/ಸಂದಿಗಳಲ್ಲಿ, ಕಾಲುದಾರಿ, ಪಾದಚಾರಿ ಮಾರ್ಗ, ಕಲ್ಲು ಹೊದಿಸಿದ ದಾರಿ, ಸಾರ್ವಜನಿಕ ಉದ್ಯಾನಗಳು ಅಥವಾ ಇನ್ನಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ಖಾಸಗಿ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ನಿರ್ಮಾಣ ಮಾಡಲಾದ ಕಟ್ಟಡ/ವಿನ್ಯಾಸದಲ್ಲಿಅಥವಾ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ ವ್ಯವಹರಿಸಬಹುದು. ಇವರನ್ನು ಬೀದಿ ವ್ಯಾಪಾರಿ, ಕೂಗಿಕೊಂಡು ಬೀದಿಗಳಲ್ಲಿ ವ್ಯಾಪಾರ ಮಾಡುವವ (ಕೂಗಿಮಾರುಗ), ಆಕ್ರಮಿ ಹಾಗೂ ಇನ್ನಿತರಯಾವುದೇ ಸ್ಥಳೀಯ ಅಥವಾ ವಲಯವಾರು ಸಮಾನಾರ್ಥ ನೀಡುವ ಪದಗಳಿಂದ ಕರೆಯಬಹುದು. "ಬೀದಿ ವ್ಯಾಪಾರ" ಎಂಬ ಪದವು ಅವುಗಳ ವ್ಯಾಕರಣ ಭಿನ್ನತೆ/ವ್ಯತ್ಯಾಸಗಳಿಂದಾಗಿ ಮತ್ತು ಸಂಬಂಧಿಸಿದ ಅಭಿವ್ಯಕ್ತಿಗಳಿಗೆ ಅನುಸಾರವಾಗಿ ವ್ಯಾಖ್ಯಾನಿಸಬೇಕು;

**3.83 "ಘನತ್ಯಾಜ್ಯ ನಿರ್ವಹಣಾ ಕೋಶ"**ಎಂದರೆ ಘನತ್ಯಾಜ್ಯ ನಿರ್ವಹಣೆಯ ದಿನನಿತ್ಯದ ಚಟುವಟಿಕೆಯ ಜವಾಬ್ಧಾರಿ ಹೊಂದಿರುವ ವಾರ್ಡ್ ಮಟ್ಟದ, ವಿಭಾಗ ಮಟ್ಟದ ಮತ್ತು ವಲಯ ಮಟ್ಟದ ಅಧಿಕಾರಿಗಳು ಜೊತೆಗೆ ಮುಖ್ಯಕಚೇರಿ ಮಟ್ಟದ ಘನತ್ಯಾ ನಿರ್ವಹಣೆಯ ಮೇಲ್ವಿಚಾರಣಾ ಅಧಿಕಾರಿಗಳು.

**3.84"ಘನತ್ಯಾಜ್ಯ ನಿರ್ವಹಣಾ ಸುಂಕ"** ಎಂದರೆ ಬೀದಿಗಳು ಮತ್ತು ಸಾರ್ವಜನಿಕ ಪ್ರದೇಶಗಳ ಸ್ವಚ್ಛತೆ ಕಾಪಾಡಲು ಮತ್ತು ನಿರ್ವಹಿಸಲು ತಗಲುವ ವೆಚ್ಚದ ಪೂರ್ಣ ಅಥವಾ ಭಾಗಶ: ಶುಲ್ಕವಾಗಿ, ಕಸ ಉತ್ಪಾದಕರಿಗೆ ಬಿಬಿಎಂಪಿ ವಿಧಿಸುವ ಸ್ವತ್ತು ತೆರಿಗೆಯ ಭಾಗವಾಗಿದ್ದು ನಿರ್ದಿಷ್ಟ ಶುಲ್ಕವಾಗಿದೆ.

**3.85 "ಸಾಗಾಟ/ಸಾಗಣೆ"** ಎಂದರೆ ಘನ ತ್ಯಾಜ್ಯದ ಸಾಗಾಟ, ಇದು ಸಂಸ್ಕರಿಸಿದ ಅಥವಾ ಭಾಗಶ: ಸಂಸ್ಕರಿಸಿದ ಅಥವಾ ಸಂಸ್ಕರಿಸದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪರಿಸರಕ್ಕೆ ಯಾವುದೇ ಹಾನಿ ಆಗದ ರೀತಿಯಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಲಾದ ಮತ್ತು ಮುಚ್ಚಿದ ಸಾಗಾಣಿಕೆ ವ್ಯವಸ್ಥೆಯೊಂದಿಗೆ ಕೆಟ್ಟ ವಾಸನೆ ಬಾರದಂತೆ, ನೆಲದ ಮೇಲೆ ಚೆಲ್ಲದಂತೆ ಮತ್ತು ನೋಡಲಾಗದ ಸ್ಥಿತಿಯನ್ನು ತಡೆಯುವ ರೀತಿಯಲ್ಲಿ ಸಾಗಾಟ ಮಾಡುವುದಾಗಿರುತ್ತದೆ;

**3.86 "ವರ್ಗಾವಣೆ ಕೇಂದ್ರ"** ಎಂದರೆ ಪ್ರಾಥಮಿಕ ಸಂಗ್ರಹದಿಂದ ಘನತ್ಯಾಜ್ಯ ಪಡೆಯಲು ಮತ್ತು ಮುಚ್ಚಿದ ವಾಹನದಲ್ಲಿ ಅಥವಾ ಕಂಟೇನರ್ಗಳಲ್ಲಿ ಇದನ್ನು ಬೃಹತ್ ಪ್ರಮಾಣದಲ್ಲಿ ಒಟ್ಟಿಗೆ ತ್ಯಾಜ್ಯ ಸಂಸ್ಕರಣೆ ಮತ್ತು/ಅಥವಾ ವಿಲೇವಾರಿ ವ್ಯವಸ್ಥೆಯಿರುವ ಕಡೆಗೆ ತ್ಯಾಜ್ಯ ವರ್ಗಾವಣೆಗೆ ಮತ್ತು ನಿಗದಿತ ಗುಣಮಟ್ಟದ ನಿರ್ವಹಣಾ ವಿಧಾನದಲ್ಲಿ ನೆಲದ ಮೇಲೆ ಯಾವುದೇ ಗಲೀಜು/ಕೊಳೆ ಇಲ್ಲದಂತೆ(ಎನ್‌ಜಿಒಜಿ) ಮತ್ತು ಗಲೀಜು / ತ್ಯಾಜ್ಯವು ವರ್ಗಾವಣೆ ಅಥವಾ ಸಾಗಾಟದ ವೇಳೆ ಶೂನ್ಯ ಸೋರುವಿಕೆ / ಚೆಲ್ಲುವಿಕೆ ತತ್ವವನ್ನು ಅನುಸರಿಸುವುದರೊಂದಿಗೆ ಸಾಗಣಿಕೆ ನಡೆಸುವುದು;

**3.87"ಸಂಸ್ಕರಣೆ"**ಎಂದರೆ ಯಾವುದೇ ತ್ಯಾಜ್ಯದ ಭೌತಿಕ, ರಾಸಾಯನಿಕ ಅಥವಾ ಜೈವಿಕ ಗುಣಲಕ್ಷಣಗಳನ್ನು ಅಥವಾ ಸಂಯೋಜನೆಯನ್ನು ಬದಲಿಸಿ ಅವುಗಳ ಪ್ರಮಾಣವನ್ನು ಕಡಿಮೆ ಮಾಡುವ ಅಥವಾ ಹಾನಿ ಮಾಡುವ ಸಂಭಾವ್ಯತೆಯನ್ನು ಕಡಿಮೆ ಮಾಡುವ ವಿಧಾನ, ತಂತ್ರ ಅಥವಾ ಪ್ರಕ್ರಿಯೆ ಆಗಿದೆ.

**3.88 "ಬಳಕೆದಾರರ ಶುಲ್ಕ"** ಎಂದರೆ ಮಲಿನಗೊಳಿಸುವವರು (ಮಾಲಿನ್ಯಕಾರಕರು) ಪಾವತಿಸುವ ತತ್ವದ ಆಧಾರದ ಮೇಲೆ ಬಿಬಿಎಂಪಿಯು ಘನತ್ಯಾಜ್ಯ ನಿರ್ವಹಣೆ ನಿಯಮಾವಳಿ 2016ರ ನಿಯಮ-15(ಎಫ್) ರಡಿಯಲ್ಲಿ ಯಾವುದೇತ್ಯಾಜ್ಯದ ಉತ್ಪಾದಕರ ಮೇಲೆ ನಿರ್ದಿಷ್ಟ ಸೇವೆಯಾದ ಘನತ್ಯಾಜ್ಯ ಸಂಗ್ರಹದ, ಸಾಗಾಟದ, ಸಂಸ್ಕರಣೆಯ ಮತ್ತು / ಅಥವಾ ವಿಲೇವಾರಿಯ ಸೇವೆಗಳ ಖರ್ಚನ್ನು ಪೂರ್ಣವಾಗಿ ಅಥವಾ ಭಾಗಶ: ಭರಿಸಲು ವಿಧಿಸುವ ಶುಲ್ಕವಾಗಿದೆ;

**3.89"ಖಾಲಿ ನಿವೇಶನ"**ಎಂದರೆ ಯಾವುದೇ ಖಾಸಗಿ ವ್ಯಕ್ತಿಗೆ ಸೇರಿದ ಮತ್ತು ಅವರು ಈಗ ಅದನ್ನು ಅನುಭೋಗಿಸದೇ ಖಾಲಿ ಬಿಟ್ಟಿರುವ ಯಾವುದೇ ಜಾಗ ಅಥವಾ ಬಳಸದೇ ಬಿಟ್ಟಿರುವ ಬಯಲು ಜಾಗ.

**3.90 "ಎರೆಹುಳ ಗೊಬ್ಬರ" (ವರ್ಮಿ ಕಂಪೋಸ್ಟಿಂಗ್)** ಎಂದರೆ ಎರೆಹುಳಗಳನ್ನು ಬಳಸಿ ಜೈವಿಕವಾಗಿ ವಿಘಟಿಸಬಹುದಾದ ತ್ಯಾಜ್ಯವನ್ನು ಗೊಬ್ಬರವಾಗಿ (ಕಾಂಪೋಸ್ಟ್) ಪರಿವರ್ತಿಸುವುದು.

**3.91"ವಾರ್ಡ್‌ಮೈಕ್ರೋಪ್ಲಾನ್"**ಎಂದರೆ ಘನತ್ಯಾಜ್ಯ ನಿರ್ವಹಣೆ ನಿಯಮಾವಳಿ 2016ರ ಅನುಸಾರವಾಗಿ ಘನತ್ಯಾಜ್ಯ ನಿರ್ವಹಣೆಯ ಉದ್ದೇಶವನ್ನು ಸಾಧಿಸಲು ವಾರ್ಡ್ ಅನ್ನು ಬ್ಲಾಕ್‌ಗಳಾಗಿ ವಿಭಜಿಸುವ ಮೂಲಕ, ಬೀದಿ ಗುಡಿಸುವಿಕೆಯ ಮಾರ್ಗಗಳನ್ನು ಸ್ಥಾಪಿಸುವುದು, ಪ್ರಾಥಮಿಕ ಸಂಗ್ರಹಣೆ ಮತ್ತು ವಾರ್ಡ್ ಮಟ್ಟದಲ್ಲಿ ವಿವಿಧ ರೀತಿಯ ಘನತ್ಯಾಜ್ಯವನ್ನು ಸಾಗಾಣೆಯ ಮೂಲಕ ನಿರ್ವಹಣೆಗಾಗಿ ಮಾಡಿದ ಸಣ್ಣ ಬ್ಲಾಕ್‌ಗಳ ಮೂಲಭೂತ ಯೋಜನೆ ಎಂದರ್ಥ. ಈ ಉದ್ದೇಶಗಳನ್ನು ಘನತ್ಯಾಜ್ಯ ನಿರ್ವಹಣೆ ನಿಯಮಾವಳಿ 2016ಕ್ಕೆ ಅನುಗುಣವಾಗಿ ಸಾಧಿಸಲು ಮತ್ತುಇದನ್ನು ಕಾಲಕಾಲಕ್ಕೆ ಬಿಬಿಎಂಪಿ ಪರಿಶೀಲಿಸುತ್ತದೆ ಮತ್ತು ಪರಿಷ್ಕರಿಸುತ್ತದೆ.

**3.92 "ತ್ಯಾಜ್ಯ ಶ್ರೇಣಿ ವ್ಯವಸ್ಥೆ"** ಎಂದರೆ ಘನತ್ಯಾಜ್ಯದ ನಿರ್ವಹಣೆಯ ಆದ್ಯತಾ ಕ್ರಮವಾಗಿದೆ. ಈ ಕೆಳಗಿನ 5-ವಿಚಾರಗಳಿಗೆ (5R(s)) ಮೇಲೆ ಗಮನವಿರಿಸಿ ನಿರ್ವಹಿಸಬೇಕಾಗಿದೆ. ಅಂದರೆ ತಡೆಗಟ್ಟುವುದು (ಬಳಕೆ ಮೇಲೆ ತಡೆ), ಕಡಿಮೆಗೊಳಿಸುವುದು, ಮತ್ತೆಉಪಯೋಗಿಸುವುದು, ಪುನರ್ ಬಳಕೆಗೆ ಪರಿವರ್ತಿಸುವುದು, ಹಿಂಪಡೆಯುವುದು ಹಾಗೂ ಕೊನೆಯ ಆಯ್ಕೆಯಾಗಿ ವಿಲೇವಾರಿ ಮಾಡುವುದಾಗಿದೆ. ಅಂದರೆ ತಡೆಗಟ್ಟುವುದು ಅತ್ಯಂತ ಆದ್ಯತೆಯ ಆಯ್ಕೆಯಾಗಿದೆ ಮತ್ತು ಭೂ ಭರ್ತಿಯಲ್ಲಿ ವಿಲೇವಾರಿ ಮಾಡುವುದು ಕೊನೆಯ ಅನಿವಾರ್ಯತೆ ಆಗಿದೆ;

**3.93 "ತ್ಯಾಜ್ಯ ಉತ್ಪಾದಕ"** ಘನತ್ಯಾಜ್ಯವನ್ನು ಉತ್ಪಾದಿಸುವ ಪ್ರತಿಯೋರ್ವ ವ್ಯಕ್ತಿ ಅಥವಾ ಜನರ ಗುಂಪು, ಪ್ರತಿಯೊಂದು ಮನೆಗಳ ಆವರಣ ಮತ್ತು ಗೃಹೇತರ /ವಾಣಿಜ್ಯ ಸಂಸ್ಥೆಗಳು ಜೊತೆಗೆ ರಾಜ್ಯ ಮತ್ತುಕೇಂದ್ರ ಸರಕಾರಿ ಸಂಸ್ಥೆಗಳಾದ ಭಾರತೀಯ ರೈಲ್ವೇ, ರಕ್ಷಣಾ ಸಂಸ್ಥೆಗಳು ಇತ್ಯಾದಿಗಳಾಗಿವೆ;

**3.94 "ಚಿಂದಿ ಆಯುವವರು"** ಎಂದರೆ ತ್ಯಾಜ್ಯ ಉತ್ಪಾದನೆ ಆಗುವ ಮೂಲಗಳಿಂದ ಅಥವಾ ತ್ಯಾಜ್ಯ ಉತ್ಪಾದಕರಿಂದ ನೇರವಾಗಿ ಜೈವಿಕವಾಗಿ ವಿಘಟನೆಯಾಗದ ತ್ಯಾಜ್ಯವನ್ನು ಸಂಗ್ರಹಿಸಿ ಮತ್ತೆ ಬಳಸಬಹುದಾದ ಅಥವಾ ಪುನರ್ ಬಳಕೆಗೆ ಪರಿವರ್ತಿಸಬಹುದಾದ ಘನತ್ಯಾಜ್ಯಗಳನ್ನು ಅನೌಪಚಾರಿಕವಾಗಿ ಸಂಗ್ರಹಿಸುವ ಅಥವಾ ಪುನ: ಪಡೆಯುವ ಕೆಲಸದಲ್ಲಿ ತೊಡಗಿಕೊಂಡಿರುವ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪು ಆಗಿದೆ. ಈ ಮೂಲಕ ಅವರು ತಮ್ಮ ಜೀವನಾಧಾರ ರೂಪಿಸಿಕೊಳ್ಳುತ್ತಾರೆ.

**3.95"ತ್ಯಾಜ್ಯ ಕೆಲಸಗಾರರು"**ಎಂದರೆ ಬಿಬಿಎಂಪಿಯ ಅಡಿಯಲ್ಲಿ ತ್ಯಾಜ್ಯ ನಿರ್ವಹಣೆಯಲ್ಲಿ ಒಳಗೊಂಡಿರುವ ಎಲ್ಲಾ ವ್ಯಕ್ತಿಗಳು

(1) ಪೌರಕಾರ್ಮಿಕರು - ಬೀದಿ ಗುಡಿಸುವವರಾಗಿದ್ದು ಬೀದಿ ಗುಡಿಸಿದ ಕಸದ ಸಂಗ್ರಹ ಮಾಡುವುದು ಜೊತೆಗೆ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವವರು.

(2) ಸಹಾಯಕ - ಪ್ರಾಥಮಿಕ ಸಂಗ್ರಹಣೆ ವಾಹನಗಳಲ್ಲಿ ಬಾಗಿಲಿನ ಮೆಟ್ಟಿಲುಗಳಿಂದ ತ್ಯಾಜ್ಯವನ್ನು ಸಂಗ್ರಹಿಸಲು ಮತ್ತು ದ್ವಿತೀಯ ಸಾಗಾಣಿಕೆ ವಾಹನವನ್ನು ಲೋಡ್ ಮಾಡಲು ಸಹಾಯ ಮಾಡುವವರು ಆಗಿರುತ್ತಾರೆ.

(3) ಚಾಲಕ - ಪ್ರಾಥಮಿಕ ಸಂಗ್ರಹಣೆ ಮತ್ತು ದ್ವಿತೀಯ ಸಾಗಾಣಿಕೆ ವಾಹನಗಳನ್ನು ಓಡಿಸುವವರು.

(4) ಮೇಲ್ವಿಚಾರಕ– ಮೇಲಿನ ತ್ಯಾಜ್ಯಕಾರ್ಮಿಕರ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಒಟ್ಟುಗೂಡಿಸಲಾದ ವ್ಯಕ್ತಿಗಳು.

**3.96** **"ತ್ಯಾಜ್ಯ ಸಂಗ್ರಹಡಬ್ಬ"** ಎಂದರೆ ಮಾಲಿಕರು ಮತ್ತು ಅಥವಾ/ ಒಂದು ಅಥವಾ ಅದಕ್ಕಿಂತ ಹೆಚ್ಚು ಆವರಣಗಳಲ್ಲಿ ಇರುವವರ ಸಹಯೋಗದೊಂದಿಗೆ ನಿರ್ಮಿಸಲ್ಪಡುವ ಮತ್ತು ನಿರ್ವಹಿಸಲ್ಪಡುವ ವಿಂಗಡಿಸಿದ ಘನತ್ಯಾಜ್ಯವನ್ನು ಪ್ರತ್ಯೇಕವಾಗಿ ತಮ್ಮ ಆವರಣದಲ್ಲಿ/ ಆಶ್ರಯಿತರ ಅಥವಾ ಅವರ ಸಾಮಾನ್ಯ ಆವರಣದಲ್ಲಿಸಂಗ್ರಹಿಸುವ ವ್ಯವಸ್ಥೆ.

**3.97"ಶೂನ್ಯ ತ್ಯಾಜ್ಯ ವಾರ್ಡ್**"ಎಂದರೆ ವಾರ್ಡ್‌ನಲ್ಲಿ ಉತ್ಪತ್ತಿಯಾದ ಘನತ್ಯಾಜ್ಯ ಸಂಪೂರ್ಣವಾಗಿ ಮೂಲದಲ್ಲೇ ಪ್ರತ್ಯೇಕಿಸಲ್ಪಟ್ಟಿರುವುದು ಮತ್ತು ಬೇರೆ ಬೇರೆ ವಿಧವಾಗಿ ಸಂಗ್ರಹಿಸಲ್ಪಡುವುದು, ಜೈವಿಕವಾಗಿ ವಿಘಟಿತವಾಗಬಲ್ಲ ತ್ಯಾಜ್ಯವನ್ನು ವಾರ್ಡ್‌ನಲ್ಲೇ ಕಾಂಪೋಸ್ಟಿಂಗ್ ಅಥವಾ ಬಯೋಮಿಥನೈಸೇಶನ್ ಪ್ರಕ್ರಿಯೆ ಮೂಲಕ ಸಂಸ್ಕರಿಸಲಾಗುವುದು, ಪುನರ್ ಬಳಕೆ ಮಾಡಬಲ್ಲ ತ್ಯಾಜ್ಯವನ್ನು ಅಧಿಕೃತ ತ್ಯಾಜ್ಯ ಆಯುವವರ ಮತ್ತು ಪುನರ್ ಉತ್ಪಾದನೆ ಮಾಡುವವರಿಗೆ ಮತ್ತು ಉಳಿಕೆ ತ್ಯಾಜ್ಯವನ್ನುತ್ಯಾಜ್ಯ ಸಂಗ್ರಹ ಏಜೆನ್ಸಿಗಳಿಗೆ ಅಥವಾ ನಿಯೋಜಿತ ಏಜೆನ್ಸಿಗಳಿಗೆ ನೀಡಲಾಗುವುದು. ಇಂತಹ ವಾರ್ಡ್‌ಗಳು ಶ್ರೇಣೀಕೃತ ತ್ಯಾಜ್ಯವ್ಯವಸ್ಥೆಗೆ ಹೊಂದಿಕೊಳ್ಳುವ ಪ್ರಯತ್ನ ಮಾಡಬೇಕು ಮತ್ತು ಸಂಪೂರ್ಣ ಏಕ ಬಳಕೆಯ ತ್ಯಾಜ್ಯವಾಗುವ ವಸ್ತುಗಳ ಬಳಕೆಯನ್ನು ಹಂತ ಹಂತವಾಗಿ ನಿಲ್ಲಿಸುವ ಮೂಲಕ ಸಂಪೂರ್ಣವಾಗಿ ಬಳಕೆ ನಿಲ್ಲಿಸುವುದಕ್ಕೂ ಇಂತಹ ವಾರ್ಡ್‌ಗಳು ಕ್ರಮ ವಹಿಸಬೇಕು.

**3.98 "ಸ್ವಚ್ಛಆವರಣ(ಕ್ಯಾಂಪಸ್)"**ಎಂದರೆ ಉತ್ಪತ್ತಿಯಾದ ಘನತ್ಯಾಜ್ಯ ಸಂಪೂರ್ಣವಾಗಿ ಮೂಲದಲ್ಲೇ ಪ್ರತ್ಯೇಕಿಸಲ್ಪಟ್ಟಿರುವುದು ಮತ್ತು ಬೇರೆ ಬೇರೆ ವಿಧವಾಗಿ ಸಂಗ್ರಹಿಸಲ್ಪಡುವ, ಜೈವಿಕವಾಗಿ ವಿಘಟಿತವಾಗಬಲ್ಲ ತ್ಯಾಜ್ಯವನ್ನು ಆವರಣದಲ್ಲೇ ಕಾಂಪೋಸ್ಟಿಂಗ್ ಅಥವಾ ಬಯೋಮಿಥನೈಸೇಶನ್ ಪ್ರಕ್ರಿಯೆ ಮೂಲಕ ಸಂಸ್ಕರಿಸುವುದು ಮತ್ತು ವಿಲೇಗೊಳಿಸುವುದು, ಪುನರ್ ಬಳಕೆ ಮಾಡಬಲ್ಲ ತ್ಯಾಜ್ಯವನ್ನು ಅಧಿಕೃತ ತ್ಯಾಜ್ಯ ಆಯುವವರ ಮತ್ತು ಪುನರ್‌ಉತ್ಪಾದನೆ ಮಾಡುವವರಿಗೆ ಮತ್ತು ಉಳಿಕೆ ತ್ಯಾಜ್ಯವನ್ನು ತ್ಯಾಜ್ಯ ಸಂಗ್ರಹ ಏಜೆನ್ಸಿಗಳಿಗೆ ಅಥವಾ ನಿಯೋಜಿತ ಏಜೆನ್ಸಿಗಳಿಗೆ ನೀಡುವ, ಶ್ರೇಣೀಕೃತ ತ್ಯಾಜ್ಯ ವ್ಯವಸ್ಥೆಗೆ ಹೊಂದಿಕೊಳ್ಳುವ ಪ್ರಯತ್ನ ಮಾಡುವ ಮತ್ತು ಸಂಪೂರ್ಣ ಏಕ ಬಳಕೆಯ ತ್ಯಾಜ್ಯವಾಗುವ ವಸ್ತುಗಳ ಬಳಕೆಯನ್ನು ಹಂತ ಹಂತವಾಗಿ ನಿಲ್ಲಿಸುವ ಮೂಲಕ ಸಂಪೂರ್ಣವಾಗಿ ಬಳಕೆ ನಿಲ್ಲಿಸುವುದಕ್ಕೂ ಕ್ರಮ ವಹಿಸುವ ವಸತಿ/ ವಸತಿಯೇತರ/ ವಾಣಿಜ್ಯ/ಶೈಕ್ಷಣಿಕ/ ಸರ್ಕಾರಿ/ ಅಧಿಕಾರಿಗಳ ಕಾಲೊನಿ ಅಥವಾ ಕ್ಯಾಂಪಸ್/ಗೇಟೆಡ್ ಸಮುದಾಯ.

## ಅಧ್ಯಾಯ II

### ವಿಂಗಡಿಸುವಿಕೆ ಮತ್ತು ಪ್ರಾಥಮಿಕ ಸಂಗ್ರಹ

**4. ಘನತ್ಯಾಜ್ಯವನ್ನು ವಿವಿಧ ವರ್ಗಗಳಾಗಿ ಮೂಲದಲ್ಲೇ ವಿಂಗಡಿಸುವಿಕೆ ಮತ್ತು ಸಂಗ್ರಹಣೆ**-(1) ಬೃಹತ್‌ತ್ಯಾಜ್ಯ ಉತ್ಪಾದಕರು ಸೇರಿದಂತೆ ಎಲ್ಲಾ ತ್ಯಾಜ್ಯ ಉತ್ಪಾದಕರು ಕಸ ಉತ್ಪತ್ತಿ ಆಗುವ ಮೂಲದಲ್ಲೇ ಘನತ್ಯಾಜ್ಯವನ್ನು ಈ ಕೆಳಗಿನ ವಿಭಾಗಗಳಲ್ಲಿ ಅನ್ವಯವಾಗುವಂತೆ ವಿಂಗಡಿಸತಕ್ಕದ್ದು.

(ಎ) ಜೈವಿಕವಾಗಿ ವಿಘಟಿಸಬಲ್ಲ (ಕೊಳೆತು ಹೋಗುವಂತಹ) ತ್ಯಾಜ್ಯ, ಹಸಿಕಸ ಎಂದು ಸಂಬೋಧಿಸಲಾಗುವುದು ಉದ್ಯಾನ ಮತ್ತು ತೋಟಗಾರಿಕೆ ತ್ಯಾಜ್ಯದೊಂದಿಗೆ.

(ಬಿ) ಜೈವಿಕವಾಗಿ ವಿಘಟನೆ ಆಗದೇ ಇರುವ ತ್ಯಾಜ್ಯ, ಅಂದರೆ ಒಣ ಕಸ ಬೃಹತ್ ತ್ಯಾಜ್ಯ ಮತ್ತು ಇ-ತ್ಯಾಜ್ಯ ಸೇರಿದಂತೆ,

(ಸಿ) ಅಪಾಯಕಾರಿ ಗೃಹ ತ್ಯಾಜ್ಯ ನೈರ್ಮಲ್ಯ ತ್ಯಾಜ್ಯ (ಸ್ಯಾನಿಟರಿ ವೇಸ್ಟ್) ವನ್ನು ಒಳಗೊಂಡು,

(ಡಿ) ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ (ಸಿ& ಡಿ) ತ್ಯಾಜ್ಯ.

ನಗರದ ಹೆಚ್ಚುತ್ತಿರುವ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಘನತ್ಯಾಜ್ಯ ನಿರ್ವಹಣೆ ನಿಯಮಾವಳಿಗಳು 2016ರ ಅಧಿಸೂಚನೆಯಂತೆ ಬಿಬಿಎಂಪಿ ಈ ಉಪನಿಯಮಗಳು ಜಾರಿಗೆ ಬಂದ ಒಂದು ವರ್ಷದೊಳಗೆ ಎಲ್ಲಾ ತ್ಯಾಜ್ಯ ಉತ್ಪಾದಕಗಳಿಗೆ ಮೂಲದಲ್ಲಿ ಪ್ರತ್ಯೇಕತೆಯ ಅನುಸರಣೆಗಾಗಿ ಜಾರಿಗೆ ತರಲು ಪ್ರಯತ್ನಿಸುತ್ತದೆ.

(2) ಘನತ್ಯಾಜ್ಯ ನಿರ್ವಹಣೆ ನಿಯಮಾವಳಿಗಳು 2016ರ ನಿಯಮ 4(1)(ಎ) ಅನುಸಾರವಾಗಿ ಮೂರು ಪ್ರತ್ಯೇಕ ತ್ಯಾಜ್ಯದ ವಿಧವಾಗಿ ಜೈವಿಕ-ವಿಘಟನೀಯ (ಹಸಿ) ತ್ಯಾಜ್ಯ, ಜೈವಿಕ ವಿಘಟನೆಯಾಗದ(ಒಣ) ತ್ಯಾಜ್ಯ ಮತ್ತು ಅಪಾಯಕಾರಿ ಗೃಹತ್ಯಾಜ್ಯಗಳನ್ನು ಸ್ಯಾನಿಟರಿ ತ್ಯಾಜ್ಯಗಳೊಂದಿಗೆ ಅವುಗಳನ್ನು ಒಟ್ಟು ಮಾಡದೇ ಮೂಲದಲ್ಲಿಯೇ ವಿಂಗಡಿಸಿ, ಪ್ರತ್ಯೇಕವಾಗಿ ಸಂಗ್ರಹಿಸಿ ಬಿಬಿಎಂಪಿ ಮತ್ತು/ಅಥವಾ ನೋಂದಾಯಿತ ಏಜೆನ್ಸಿ/ಸೇವಾದಾರರು ಯಾರೇ ಆಗಲಿ ಅವರಿಗೆ ನೀಡಲು ಪ್ರತ್ಯೇಕವಾಗಿ ನಿಗದಿತಧಾರಕಗಳಲ್ಲಿ (ಯಾವುದೇ ಪ್ಲಾಸ್ಟಿಕ್ ಅಥವಾ ಕಸದ ಚೀಲಗಳನ್ನು ಬಳಸದೇ) ನೀಡಬೇಕು. ಪ್ಯಾಕೆಟ್‌ಗಳು, ಆಹಾರದ ಪೊಟ್ಟಣಗಳು(ಕಂಟೇನರ್), ಪೆಟ್ಟಿಗೆಗಳು, ಬಾಟಲ್‌ಗಳು, ಟೆಟ್ರಾ ಪ್ಯಾಕ್ ಕಾರ್ಟನ್‌ಗಳು(ಡಬ್ಬಗಳು) ಹಾಗೂ ಇನ್ನಿತರ ಎಸೆಯುವ ವಸ್ತುಗಳನ್ನು ಸ್ವಚ್ಛಗೊಳಿಸಿ ಒಣಗಿಸಿ ಇವುಗಳನ್ನು ಪರಿಣಾಮಕಾರಿಯಾಗಿ ಮರು ಬಳಸಲು ಪರಿವರ್ತಿಸುವಂತೆ ಮಾಡುವುದನ್ನು ತ್ಯಾಜ್ಯ ಉತ್ಪಾದಕರು ಖಚಿತಪಡಿಸಿಕೊಳ್ಳಬೇಕು. ಜೈವಿಕವಾಗಿ ವಿಘಟನೆಯಾಗಬಲ್ಲ ತ್ಯಾಜ್ಯಗಳೂ ಸೇರಿದಂತೆ ಎಲ್ಲಾ ಘನತ್ಯಾಜ್ಯಗಳನ್ನು ಬಿಬಿಎಂಪಿ ಮತ್ತು/ಅಥವಾ ನೋಂದಾಯಿತ ಏಜೆನ್ಸಿ / ಸೇವಾದಾರರಿಗೆ ನೀಡಲು ಇದನ್ನು ಪ್ಲಾಸ್ಟಿಕ್ ಚೀಲದೊಳಕ್ಕೆ ಸುತ್ತಬಾರದು. ಇಂತಹ ತ್ಯಾಜ್ಯವನ್ನು ವರ್ಗಾವಣೆ ಮಾಡಲು ಡಬ್ಬದಿಂದ ಡಬ್ಬಕ್ಕೆ ಮಾತ್ರ ಇರುತ್ತದೆ. ಅಂದರೆ, ತ್ಯಾಜ್ಯ ಸಂಗ್ರಹಣಾ ಡಬ್ಬದಿಂದ ಆಟೋವಿನ ಡಬ್ಬ (ಶೇಖರಣಾ ಜಾಗ) ಕ್ಕೆ ಮಾತ್ರ ಮೂಲದಲ್ಲೇ ಬೇರ್ಪಡಿಸಿ ನೇರವಾಗಿ ವರ್ಗಾಯಿಸತಕ್ಕದ್ದು.

(3) ಬಿಬಿಎಂಪಿ ಮತ್ತು/ಅಥವಾ ನೋಂದಾಯಿತ ಏಜೆನ್ಸಿ/ಸೇವಾದಾರರಲ್ಲಿ ಯಾರಿಗಾದರೂ ವಿಂಗಡಿಸಿದ ಘನತ್ಯಾಜ್ಯವನ್ನು ಅಂತಿಮವಾಗಿ ಹಸ್ತಾಂತರಿಸುವ ಮುನ್ನ ವಿಂಗಡಿಸಿದ ತ್ಯಾಜ್ಯವನ್ನು ಸಂಗ್ರಹಿಸುವ ಬಿನ್ ಈ ಕೆಳಗಿನ ಬಣ್ಣದಲ್ಲಿರಬೇಕು.

(ಎ) ಹಸಿರು-ಜೈವಿಕ ವಿಘಟನೀಯ ತ್ಯಾಜ್ಯ/ಹಸಿ ಕಸ

(ಬಿ) ನೀಲಿ-ಜೈವಿಕ ವಿಘಟನೆ ಆಗದ ತ್ಯಾಜ್ಯ/ಒಣ ಕಸ ಹಾಗೂ

(ಸಿ)ಕೆಂಪು-ಅಪಾಯಕಾರಿ ಗೃಹ ತ್ಯಾಜ್ಯ/ಸ್ಯಾನಿಟರಿ ಕಸ ಸೇರಿದಂತೆ.

(4) ಸ್ಯಾನಿಟರಿ ನ್ಯಾಪ್ಕಿನ್, ಡಯಾಪರ್ ಗಳು, ಟ್ಯಾಂಪನ್ಸ್ ಸ್ವಚ್ಛಗೊಳಿಸಲು ಬಳಕೆ ಮಾಡಿದ ವಸ್ತು ಹಾಗೂ ಅದಕ್ಕೆ ಸಮನಾದ ವಸ್ತುಗಳನ್ನು ಉತ್ಪಾದಕರು ಅಥವಾ ಆ ಬ್ರಾಂಡ್‌ನ ಮಾಲಿಕರು ಒದಗಿಸಿದ ಚೀಲಗಳಲ್ಲಿ ಅಥವಾ ಹಳೆಯ ಪತ್ರಿಕೆಗಳಲ್ಲಿ ಭದ್ರವಾಗಿ ಸುತ್ತಬೇಕು ಎಲ್ಲಾ ಸ್ಯಾನಿಟರಿ ತ್ಯಾಜ್ಯಗಳನ್ನು ಅಪಾಯಕಾರಿ ಗೃಹ ತ್ಯಾಜ್ಯದೊಂದಿಗೆ ಸಂಗ್ರಹಿಸಬೇಕು. ಬೃಹತ್ ತ್ಯಾಜ್ಯ ಉತ್ಪಾದಕರಾದಂತಹವರು, ಶೈಕ್ಷಣಿಕ ಸಂಸ್ಥೆಗಳು, ಮಹಿಳಾ ವಸತಿ ನಿಲಯಗಳು ಮತ್ತು ಪೇಯಿಂಗ್ ಗೆಸ್ಟ್ ವಸತಿಗೃಹಗಳು ಇಂತಹ ಸ್ಯಾನಿಟರಿ ತ್ಯಾಜ್ಯಗಳನ್ನು ಚರಂಡಿಗಳಲ್ಲಿ ಅಥವಾ ಮೋರಿಗಳಲ್ಲಿ ವಿಸರ್ಜಿಸದೇ ಈ ಉಪನಿಯಮಗಳ ಎಲ್ಲ ನಿಯಮ (ಕರಾರು)ಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಈ ಕರಾರುಗಳನ್ನು ಪಾಲಿಸದೇ ಇದ್ದಲ್ಲಿ ಅನುಸೂಚಿ VII ರಲ್ಲಿ ಪಟ್ಟಿ ಮಾಡಿರುವ ದಂಡದ ಪ್ರಕಾರ ದಂಡ ವಿಧಿಸಲಾಗುವುದು.

(5) ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ (ಸಿ & ಡಿ) ತ್ಯಾಜ್ಯ, ಜೈವಿಕ ವೈದ್ಯಕೀಯ (ಬಯೋ ಮೆಡಿಕಲ್) ತ್ಯಾಜ್ಯ, ಇ-ತ್ಯಾಜ್ಯ, ಅಪಾಯಕಾರಿ ಗೃಹ ತ್ಯಾಜ್ಯ ಹಾಗೂ ಕೈಗಾರಿಕಾ ತ್ಯಾಜ್ಯಗಳನ್ನು ಹೊರತುಪಡಿಸಿ ಅಪಾಯಕಾರಿ ತ್ಯಾಜ್ಯವನ್ನು ಘನತ್ಯಾಜ್ಯದೊಂದಿಗೆ ಬೆರೆಸುವಂತಿಲ್ಲ. ಇವುಗಳನ್ನು ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ (ಸಿ & ಡಿ) ತ್ಯಾಜ್ಯ ನಿರ್ವಹಣಾ ನಿಯಮಗಳು 2016, ಇ-ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಮತ್ತು ಅಪಾಯಕಾರಿ ಮತ್ತು ಇತರೆ ತ್ಯಾಜ್ಯ (ನಿರ್ವಹಣೆ ಮತ್ತು ಟ್ರಾನ್ಸ್ ಬೌಂಡರಿ ಚಲನವಲನ) ನಿಯಮಾವಳಿಗಳು 2016 ಪ್ರಕಾರವಾಗಿ ನಿರ್ವಹಿಸಬೇಕಿರುತ್ತದೆ.

**5. ನಿರ್ದಿಷ್ಟ ವರ್ಗಕ್ಕೆ ಸೇರಿದ ತ್ಯಾಜ್ಯ ಉತ್ಪಾದಕರ ಜವಾಬ್ದಾರಿಗಳು**-(1) ಅಂಗಡಿಗಳು ಮತ್ತು ವಾಣಿಜ್ಯ ಉದ್ದಿಮೆಗಳು ಹಾಗೂ ರಸ್ತೆ ಬದಿಯ ವ್ಯಾಪಾರಿಗಳು ತಮ್ಮ ಚಟುವಟಿಕೆಗಳ ವೇಳೆ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ವಿಂಗಡಿಸಬೇಕು. ಆಹಾರ ತ್ಯಾಜ್ಯ, ಅನುಮತಿಸಿದ ವಿಸರ್ಜಿಸಬಹುದಾದ ಪ್ಲೇಟ್‌ಗಳು, ಕಪ್‌ಗಳು, ಕ್ಯಾನ್‌ಗಳು, ರಾಪರ್ ಗಳು, ತೆಂಗಿನಕಾಯಿ ಚಿಪ್ಪುಗಳು, ಉಳಿದ ಆಹಾರ, ತರಕಾರಿ, ಹಣ್ಣು ಹಾಗೂ ಉಪನಿಯಮದಲ್ಲಿ 4(1)ರಲ್ಲಿ ನಿಗದಿಪಡಿಸಲಾದ ವಿಭಾಗಗಳ ಅನ್ವಯ ಸಂಗ್ರಹಕ್ಕಾಗಿ ಪ್ರತ್ಯೇಕ ಬಿನ್ಸ್ ಗಳನ್ನು ಹೊಂದಿರಬೇಕು

ಹಾಗೂ ಇದು ಎಲ್ಲೂ ಕೂಡ ನೆಲದ ಮೇಲೆ ಗಲೀಜು ಮಾಡದಂತೆ ಹಾಗೂ ಚೆಲ್ಲದಂತಿರಬೇಕು. ಎಲ್ಲಾದರೂ ಆವರಣದಲ್ಲಿ ಗಲೀಜು ಮಾಡಿರುವ/ಚೆಲ್ಲಿರುವುದು ಕಂಡು ಬಂದರೆ ಅಥವಾ ವಿಂಗಡಿಸದೇ ಇರುವ ತ್ಯಾಜ್ಯ (ಒಟ್ಟು ಸೇರಿಸಿದ) ಇದ್ದರೆ ಇದು ಉಪನಿಯಮದಂತೆ ಉಲ್ಲಂಘನೆ ಆಗಲಿದ್ದು ಅನುಸೂಚಿ VII ರಲ್ಲಿ ಪಟ್ಟಿ ಮಾಡಿರುವ ಪ್ರಕಾರ ದಂಡ ವಿಧಿಸಬೇಕು.

(2) ಯಾವುದೇ ನಿಗದಿತ ವಾಣಿಜ್ಯ ಪ್ರದೇಶ ಅಥವಾ ವಾಣಿಜ್ಯ ಸಂಸ್ಥೆಗಳಿರುವ ಪ್ರದೇಶಗಳಲ್ಲಿ ಮಾರುಕಟ್ಟೆ ಸಂಘಗಳು ಅಥವಾ ಅಂಗಡಿ ಮಾಲಿಕರ ವರ್ಗವು ವಿಂಗಡಿಸತಕ್ಕ ಕಸದ ಡಬ್ಬಗಳನ್ನು (ಉತ್ಪತ್ತಿ ಆಗುವ ತ್ಯಾಜ್ಯ/ಕಸಕ್ಕೆ ಅನುಸಾರವಾಗಿ) ಇಡುವುದು, ಹಾಗೂ ಯಾವುದೇ ರೀತಿಯ ಘನತ್ಯಾಜ್ಯವು ರಸ್ತೆಗಳು, ಪಾದಚಾರಿ ಮಾರ್ಗಗಳು, ಚರಂಡಿ ಅಥವಾ ಇನ್ನಿತರ ಅಂತಹ ಸಾರ್ವಜನಿಕ ಸ್ಥಳಗಳಲ್ಲಿ ಗಲೀಜು ಮಾಡದಂತೆ, ಚೆಲ್ಲದಂತೆ ಅಥವಾ ಎಸೆಯದಂತೆ ಖಾತರಿಪಡಿಸುವ ಜವಾಬ್ದಾರಿ ಹೊಂದಿರುತ್ತಾರೆ. ಇಂತಹ ಯಾವುದೇ ಆವರಣಗಳ ಮುಂಭಾಗ ಅಥವಾ ಇಂತಹ ಸಂಸ್ಥೆಗಳ ಸುತ್ತಮುತ್ತ ಅಥವಾ ವಾಣಿಜ್ಯ ಪ್ರದೇಶಗಳಲ್ಲಿ ವಿಂಗಡಿಸದೇ ಇರುವ/ ಮಿಶ್ರ ಕಸ/ತ್ಯಾಜ್ಯವನ್ನು ಹಾಕುವುದು/ಚೆಲ್ಲುವುದನ್ನು ಈ ಉಪನಿಯಮದ ಉಲ್ಲಂಘನೆ ಎಂದು ಪರಿಗಣಿಸಲಾಗುವುದು ಮತ್ತು ಅನುಸೂಚಿ VII ರಲ್ಲಿ ಪಟ್ಟಿ ಮಾಡಿರುವ ದಂಡದ ಪ್ರಕಾರ ದಂಡ ವಿಧಿಸಲಾಗುವುದು.

(3) ವಾಣಿಜ್ಯ ಚಟುವಟಿಕೆಗಳಿಂದಾಗಿ ಕೋಳಿ ಮಾಂಸ, ಮೀನು, ಮಾಂಸ ಹಾಗೂ ವಧಾಗಾರಗಳ ತ್ಯಾಜ್ಯ ಉತ್ಪಾದನೆಯಾಗುವ ಆವರಣಗಳ ಪ್ರತಿಯೊಬ್ಬ ಅನುಭೋಗದಾರರು ಇಂತಹ ತ್ಯಾಜ್ಯಗಳನ್ನು ಪ್ರತ್ಯೇಕವಾಗಿ ಸಂಪೂರ್ಣವಾಗಿ ಮುಚ್ಚಿರುವ ವಿಧದಲ್ಲಿ ಮತ್ತು ನಿರ್ಮಲವಾದ ವಿಧಾನದಲ್ಲಿ ಸಂಗ್ರಹಿಸಿಡಬೇಕು. ಇಂತಹ ತ್ಯಾಜ್ಯವನ್ನು ಯಾವ ಸಂದರ್ಭಗಳಲ್ಲೂ ಬೇರೆ ಘನ ತ್ಯಾಜ್ಯದೊಂದಿಗೆ ಮಿಶ್ರಣ ಮಾಡಕೂಡದು. ಈ ತ್ಯಾಜ್ಯವನ್ನು ಯಾವುದೇ ತ್ಯಾಜ್ಯ ದಾರಿ ಅಥವಾ ಸಮುದಾಯ ಬಿನ್ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಶೇಖರಣೆ ಮಾಡುವುದನ್ನು ನಿಷೇಧಿಸಲಾಗಿದ್ದು ಅನುಸೂಚಿ VII ರಲ್ಲಿ ಪಟ್ಟಿ ಮಾಡಿರುವಂತೆ ದಂಡ ತೆರಬೇಕಾಗುತ್ತದೆ. ಬಿಬಿಎಂಪಿಯು ನೇರವಾಗಿ ಅಥವಾ ತನ್ನ ನೋಂದಾಯಿತ ಸೇವೆ ಒದಗಿಸುವವರ ಮೂಲಕ ವಧಾಗಾರಗಳ ತ್ಯಾಜ್ಯವನ್ನು ಪ್ರತಿದಿನ ಸಂಗ್ರಹಿಸುತ್ತಿದ್ದು ಬಿಬಿಎಂಪಿ ನಿಗದಿ ಮಾಡಿದ ಸಮಯದಲ್ಲಿ ಈ ತ್ಯಾಜ್ಯವನ್ನು ಹಸ್ತಾಂತರಿಸಲು ಸಿದ್ಧವಾಗಿರುವುದನ್ನು ಅನುಭೋಗದಾರರು ಖಾತರಿಪಡಿಸಬೇಕು. ಕೋಳಿ ಮಾಂಸ, ಮೀನು, ಮಾಂಸ ಸೇರಿದಂತೆ ವಧಾಗಾರಗಳ ಇನ್ನಿತರ ತ್ಯಾಜ್ಯಗಳ ಪ್ರಾಥಮಿಕ ಸಂಗ್ರಹಣೆ ಮತ್ತು ದ್ವಿತೀಯ ಹಂತದ ಸಾಗಣೆಗಾಗಿ ಬಿಬಿಎಂಪಿಯು ಸೂಕ್ತವಾದ ಮುಚ್ಚಿದ ಕಂಟೇನರ್ ಡಬ್ಬಿ (ಮುಚ್ಚಿದ ಪಾತ್ರೆ/ಕಸದ ಬುಟ್ಟಿ/ಡಬ್ಬಿ) ಗಳನ್ನು ಹಾಗೂ ವಾಹನಗಳನ್ನು ಬಳಕೆದಾರರ ಶುಲ್ಕ ವಿಧಿಸುವ ಕ್ರಮದ ಮೇಲೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪನ್ನವಾಗುವ ವಧಾಗಾರದ ತ್ಯಾಜ್ಯದ ಪ್ರಮಾಣದ ಆಧಾರದ ಮೇಲೆ ನಿರ್ಧರಿಸಬೇಕು. ಇಂತಹ ಬಳಕೆದಾರರ ಶುಲ್ಕವನ್ನು ಬಿಬಿಎಂಪಿಯು ಪ್ರಕಟಿಸಿರುತ್ತದೆ ಮತ್ತು ಈ ವರ್ಗದ ತ್ಯಾಜ್ಯ ಉತ್ಪಾದಕರು ಈ ಸಂಗ್ರಹ / ಸಾಗಣಿಕೆ / ವೈಜ್ಞಾನಿಕ ವಿಲೇವಾರಿ ಸೇವೆ ಒದಗಿಸಿದುದಕ್ಕಾಗಿ ಶುಲ್ಕವನ್ನು ತೆರುವುದು ಅವರ ಕರ್ತವ್ಯವಾಗಿರುತ್ತದೆ.

(4) ಸಮುದಾಯದ ಕಸ / ತ್ಯಾಜ್ಯದ ಸಂಗ್ರಹಣಾ ಬಿನ್/ ಪಾತ್ರೆ/ ಧಾರಕವನ್ನು ತಮ್ಮ ಆವರಣದಲ್ಲಿ ಹೊಂದಿರುವ ಪ್ರತಿಯೊಬ್ಬ ಬೃಹತ್ ತ್ಯಾಜ್ಯ ಉತ್ಪಾದಕರು ಅಥವಾ ಒಟ್ಟುಗೂಡಿಸುವವರು ಪ್ರತಿಯೊಬ್ಬ ತ್ಯಾಜ್ಯ ಉತ್ಪಾದಕರಿಂದ ವಿಂಗಡಿಸಿದ ಕಸವನ್ನು / ಘನತ್ಯಾಜ್ಯವನ್ನು ತಮ್ಮ ಆವರಣದಲ್ಲೇ ಮುಚ್ಚಿದ ಸಂಗ್ರಹಣಾ ಡಬ್ಬದಲ್ಲಿ ಉಪನಿಯಮ (4) ರಂತೆ

ಸಂಗ್ರಹಿಸಿ ಪ್ರವೇಶದ್ವಾರ ಅಥವಾ ಕೆಳಮಹಡಿಯ ನಿಗದಿಪಡಿಸಿದ ಸ್ಥಳದಲ್ಲಿ ಇರಿಸುವ ಮೂಲಕ ಇಂತಹ ವಿಂಗಡಿತ ತ್ಯಾಜ್ಯವನ್ನು ತ್ವರಿತವಾಗಿ ಮತ್ತು ಕ್ಲಪ್ತ ಸಮಯಕ್ಕೆ ಸಂಗ್ರಹಿಸಲು ಅನುವು ಮಾಡಿಕೊಡಬೇಕು.

(5) ಯಾವುದೇ ಸ್ಥಳದ ಮಾಲಿಕರು ಅಥವಾ ಅನುಭೋಗದಾರರು ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಹಾಗೂ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯಗಳನ್ನು (ಸಿ &ಡಿ) ತಮ್ಮ ಆವರಣದೊಳಗೆ ಇರಿಸತಕ್ಕದ್ದು ಮತ್ತು ಪಾದಚಾರಿ ಮಾರ್ಗ, ರಸ್ತೆ ಇನ್ನಿತರ ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸುವುದು ಅಥವಾ ಅಡ್ಡಗಟ್ಟುವಂತಿರಬಾರದು. ಸಿ & ಡಿ ತ್ಯಾಜ್ಯದ ಸಂಗ್ರಹ, ನಿರ್ವಹಣೆ ಹಾಗೂ ಉಸ್ತುವಾರಿಯನ್ನು ಸಿ & ಡಿ ತ್ಯಾಜ್ಯ ನಿರ್ವಹಣಾ ನಿಯಮಾವಳಿ 2016 ಮತ್ತು ಬಿಬಿಎಂಪಿಯ ಕಟ್ಟಡ ಉಪನಿಯಮದ ಅನ್ವಯವೇ ನಿರ್ವಹಿಸಬೇಕು.

(6) ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯಗಳನ್ನು (ಸಿ & ಡಿ) ತ್ಯಾಜ್ಯವನ್ನು ಬಿಬಿಎಂಪಿಯು ಅಧಿಕೃತಗೊಳಿಸಿದಂತೆ ಸಂಗ್ರಹ ಮತ್ತು ಸಾಗಣೆ ವ್ಯವಸ್ಥೆಗೆ ಅನುಸಾರವಾಗಿ ವಿಲೇವಾರಿ ಮಾಡುವುದು ಮಾಲೀಕರ ಅಥವಾ ಆವರಣದ ಅನುಭೋಗದಾರರ ಜವಾಬ್ಧಾರಿ ಆಗಿರುತ್ತದೆ.

## ಅಧ್ಯಾಯ III

## ಘನ ತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿ

### 6. ನೋಂದಾಯಿತ ಸೇವಾದಾರರಿಂದ ವಿಂಗಡಿಸಲ್ಪಟ್ಟ (ಪ್ರತ್ಯೇಕಿಸಲ್ಪಟ್ಟ) ಘನ ತ್ಯಾಜ್ಯದ ಸಂಗ್ರಹ

ಎ. ನೋಂದಾಯಿತ ಸೇವಾದಾರರಿಂದ ಮನೆ ಬಾಗಿಲಿನಿಂದ ವಿಂಗಡಿಸಿದ ಘನತ್ಯಾಜ್ಯ ಸಂಗ್ರಹಣೆ:-(1)ಉಪವಿಧಿ 8ರ ಉಪಬಂಧ (ಅವಕಾಶ)ಗಳ ಅನ್ವಯ ಬಿಬಿಎಂಪಿಯ ಎಲ್ಲಾ ವಾರ್ಡ್‌ಗಳಲ್ಲೂ ಕೂಡ ಎಲ್ಲಾ ಮತ್ತು/ಅಥವಾ ಕೆಲವು ವಿಧದ ವಿಂಗಡಿಸಿದ ಘನತ್ಯಾಜ್ಯವನ್ನು ಮನೆ ಬಾಗಿಲಿನಿಂದ ಸಂಗ್ರಹಿಸುವುದನ್ನು ಅನುಷ್ಠಾನಗೊಳಿಸತಕ್ಕದ್ದು.

(ಎ) ಮನೆಗಳ ಬಾಗಿಲಿನಿಂದ, ಅಂಗಡಿಗಳು, ಸಣ್ಣ ವಾಣಿಜ್ಯ ಸಂಸ್ಥೆಗಳು ಹಾಗೂ ಕಚೇರಿಗಳ ಬಾಗಿಲಿನಿಂದ;

(ಬಿ) ಉಪವಿಧಿ 6(1)(ಎ)ರಲ್ಲಿ ನಿರ್ದಿಷ್ಟಪಡಿಸಿದ ಆವರಣದ ಅಡಿಯಲ್ಲಿ ಬಾರದ ವಸತಿ ಸಂಘಗಳು, ಬಹುಮಹಡಿ ಕಟ್ಟಡಗಳು / ಸಮುಚ್ಚಯಗಳು, ವಸತಿ, ವಾಣಿಜ್ಯ, ಸಾಂಸ್ಥಿಕ-ಸಂಕೀರ್ಣಗಳು / ಆವರಣಗಳು ಹಾಗೂ ಬೃಹತ್ ತ್ಯಾಜ್ಯ ಉತ್ಪಾದಕರಲ್ಲದವರ ಪ್ರವೇಶದ್ವಾರ ಅಥವಾ ನೆಲಮಹಡಿಯಲ್ಲಿ ನಿಗದಿಪಡಿಸಿದ ಸ್ಥಳ;

(ಸಿ) ಕೊಳಗೇರಿ ಮತ್ತು ಅನೌಪಚಾರಿಕ ವಾಸ ಸ್ಥಳಗಳಲ್ಲಿನ ಪ್ರವೇಶದ್ವಾರ ಅಥವಾ ನಿರ್ದಿಷ್ಟಪಡಿಸಿದ ಸ್ಥಳ.

(2) (ಎ) ಬಿಬಿಎಂಪಿಯು ನೋಂದಾಯಿತ ಸೇವಾದಾರರಿಂದ ಪ್ರತೀ ವಿಧದ ಘನ ತ್ಯಾಜ್ಯ ಸಂಗ್ರಹವನ್ನು ಖಾತರಿಪಡಿಸಿಕೊಳ್ಳತಕ್ಕದ್ದು, ಜೈವಿಕ ವಿಘಟನೀಯ ತ್ಯಾಜ್ಯ ಮತ್ತು ನೈರ್ಮಲ್ಯ ತ್ಯಾಜ್ಯವನ್ನು ಪ್ರತಿದಿನ ಸಂಗ್ರಹಿಸತಕ್ಕದ್ದು ಮತ್ತು ಜೈವಿಕವಾಗಿ ವಿಘಟನೆಗೊಳ್ಳದ ತ್ಯಾಜ್ಯವನ್ನು ಅವಶ್ಯಕತೆಗೆ ಅನುಗುಣವಾಗಿ ವಾರದಲ್ಲಿ ಎರಡು ಅಥವಾ ಮೂರು ಬಾರಿ

ಅಥವಾ ಬಿಬಿಎಂಪಿ ಸೂಚಿಸಿದಂತೆ ಬಿಬಿಎಂಪಿಯ ಒಣ ತ್ಯಾಜ್ಯ ಸಂಗ್ರಹ ವ್ಯವಸ್ಥೆಗೆ ಸಂಯೋಜನೆಗೊಂಡಿರುವ ಅನೌಪಚಾರಿಕ ಚಿಂದಿ ಆಯುವವರು ಮತ್ತು ಸ್ವಸಹಾಯ ಗುಂಪುಗಳ ಮೂಲಕ ಘನ ತ್ಯಾಜ್ಯ ಸಂಗ್ರಹವನ್ನು ಆದ್ಯತೆಯ ಮೇರೆಗೆ ಕಾಲ ಕಾಲಕ್ಕೆ ಸಂಗ್ರಹಿಸತಕ್ಕದ್ದು.

(ಬಿ) ಆದಾಗ್ಯೂ, ಬಿಬಿಎಂಪಿ ಪರ್ಯಾಯವಾಗಿ ಒಣ, ಹಸಿ ಮತ್ತು ಅಪಾಯಕಾರಿ ಗೃಹ ತ್ಯಾಜ್ಯವನ್ನು ಪ್ರತ್ಯೇಕವಾದ ಸೂಕ್ತ ರೀತಿಯಲ್ಲಿ ಮುಚ್ಚಿದ ವಾಹನಗಳಲ್ಲಿ ಅಥವಾ ಪ್ರತ್ಯೇಕ ಶೇಖರಣೆಗಾಗಿ ವಿಭಾಗಗಳನ್ನು ಹೊಂದಿರುವ ಒಂದೇ ವಾಹನದಲ್ಲಿ ಮೂರು ವಿಧದ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸೂಕ್ತ ರೀತಿಯಲ್ಲಿ ಮುಚ್ಚಿ ಸಂಗ್ರಹಿಸಬಹುದು.

(3) ಉಪವಿಧಿ 6(1)ರಲ್ಲಿ ನಿರ್ದಿಷ್ಟಪಡಿಸಿರುವಂತೆ ಮನೆ ಮನೆ ಸಂಗ್ರಹಣೆಯನ್ನು ನಿರ್ವಹಿಸಲು ಪ್ರದೇಶವಾರು ವಿವಿಧ ರೀತಿಯ ಘನ ತ್ಯಾಜ್ಯಗಳ ಸಂಗ್ರಹಣೆಗೆ ವಾರದ ಪ್ರಸಕ್ತ ದಿನ ಮತ್ತು ನಿರ್ದಿಷ್ಟ ಸಮಯವನ್ನು ಬಿಬಿಎಂಪಿ ಸೂಚಿಸಿ ಆಯಾ ಪ್ರದೇಶದಲ್ಲಿ ಪ್ರಮುಖವಾಗಿ ಕಾಣುವಂತೆ ಬಿಬಿಎಂಪಿ ವಾರ್ಡ್ ಕಚೇರಿಗಳಲ್ಲಿ ಮತ್ತು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (ಜಾಲತಾಣ) ಪ್ರಕಟಿಸತಕ್ಕದ್ದು. ಇದಲ್ಲದೆ ಸಂಗ್ರಹಣೆಗಾಗಿ ನಿಲುಗಡೆ ಪ್ರಾರಂಭಿಕ ಮತ್ತು ಮುಕ್ತಾಯಗೊಳ್ಳುವ ಸಮಯಗಳು ಸೇರಿದಂತೆ ಮಾರ್ಗ ನಕ್ಷೆಗಳನ್ನು ಮತ್ತಿತರ ವಿವರಗಳೊಂದಿಗೆ ನಿಗದಿತ ವೇಳೆಯ ವಿವರಗಳನ್ನು ಒದಗಿಸತಕ್ಕದ್ದು.

(4) ಬಿಬಿಎಂಪಿಯು ಗೃಹ ಮತ್ತು ವಾಣಿಜ್ಯ ತ್ಯಾಜ್ಯ ಉತ್ಪಾದಕರಿಂದ ಮನೆ ಮನೆ ಸಂಗ್ರಹಕ್ಕೆ ಪ್ರಸ್ತುತ ಇರುವ ಮಾನದಂಡಗಳ ಮೈಕ್ರೋ ಪ್ಲಾನ್ ಬ್ಲಾಕ್‌ಗಳ ಆಧಾರದ ಮೇಲೆ ಪ್ರಾಥಮಿಕ ಸಂಗ್ರಹಣೆ ವಾಹನಗಳು, ದ್ವಿತೀಯ ಹಂತದ ಸಾಗಾಣೆ ವಾಹನಗಳು ಮತ್ತು ಪ್ರತೀ ವಾರ್ಡ್‌ಗೆ ಒದಗಿಸಬೇಕಾದ ಪ್ರತಿಯೊಂದು ರೀತಿಯ ಘನತ್ಯಾಜ್ಯಗಳ ಜೊತೆಗೆ ಮಾನವ ಸಂಪನ್ಮೂಲಗಳು ಮತ್ತು ತಳ್ಳುವ ಗಾಡಿಗಳು (ಕೊಳಗೇರಿ ಮನೆಗಳಿಂದ ಸಂಗ್ರಹಿಸಲು) ಅವಶ್ಯಕತೆಯನ್ನು ನಿಗದಿ ಮಾಡತಕ್ಕದ್ದು. ಸಮರ್ಥವಾದ ಪ್ರಾಥಮಿಕ ಸಂಗ್ರಹಣೆ ಮತ್ತು ವಿಂಗಡಿತ ತ್ಯಾಜ್ಯದ ಸಾಗಣೆ ಮತ್ತುವಿಂಗಡಿತ ಘನ ತ್ಯಾಜ್ಯ ಎಲ್ಲೂ ಮಿಶ್ರಣಗೊಳ್ಳದಂತೆ ಖಾತರಿಪಡಿಸಿಕೊಳ್ಳಬೇಕು. ಅಗತ್ಯ ಮಾನವ ಸಂಪನ್ಮೂಲದ ಸಂಖ್ಯೆ ಮತ್ತು ವಾಹನಗಳ ಸರಾಸರಿ ಅಗತ್ಯತೆಯನ್ನು ತ್ಯಾಜ್ಯ ಉತ್ಪಾದಕರನ್ನು (ಬೃಹತ್ ತ್ಯಾಜ್ಯ ಉತ್ಪಾದಕರನ್ನು ಹೊರೆತುಪಡಿಸಿ) ಸಂಬಂಧಿಸಿದಂತೆ ಮೈಕ್ರೋ ಪ್ಲಾನ್ ಪ್ರಕಾರ ಕಾಲಕಾಲಕ್ಕೆ ಲೆಕ್ಕಾಚಾರ ಮಾಡಬೇಕು.

(5) ಬಿಬಿಎಂಪಿಯು ವಾರದಲ್ಲಿ ಒಂದು ದಿನವನ್ನು ಮನೆ ಮನೆಯಿಂದ ತೋಟಗಾರಿಕೆ ಮತ್ತು ಉದ್ಯಾನ ತ್ಯಾಜ್ಯ ಸಂಗ್ರಹಣೆಗಾಗಿ ನಿಗದಿ ಮಾಡಬೇಕು ಮತ್ತು ಇದನ್ನು ನೋಂದಾಯಿತ ಸೇವಾದಾರರ ಮೂಲಕ ಪ್ರತಿದಿನದ ಮನೆ ಮನೆ ಸಂಗ್ರಣೆ ವ್ಯವಸ್ಥೆಯೊಂದಿಗೆ ಸಂಗ್ರಹಿಸಬೇಕು. ಯಾವುದೇ ಕಸ ಉತ್ಪಾದಕರು ತಮ್ಮ ಬೃಹತ್ ಗಾತ್ರದ ತ್ಯಾಜ್ಯಗಳಾದ ಪೀಠೋಪಕರಣಗಳು ಮತ್ತು ವಾರ್ಡ್ ರೋಬ್‌ಗಳು, ಟೇಬಲ್‌ಗಳು, ಕುರ್ಚಿಗಳು, ಶೂ ರ್ಯಾಕ್ ಗಳು, ಕಂಪ್ಯೂಟರ್ ಟೇಬಲ್‌ಗಳು, ಹಾಸಿಗೆಗಳು, ಮಂಚ, ಕುರ್ಚಿ, ಊಟದ

ಟೇಬಲ್‌ಗಳು, ಸೋಫಾಗಳು ಇನ್ನಿತರ., ಅಡುಗೆ ಮನೆ ಪಾತ್ರೆಗಳು ಇತ್ಯಾದಿಗಳನ್ನು ಬಿಬಿಎಂಪಿಯು ನಿಗದಿ ಮಾಡಿದ ಅಥವಾ ಬಿಬಿಎಂಪಿ ನೋಂದಾಯಿತ ಸೇವಾದಾರರ ನಿಯಮಿತ ಮನೆ ಮನೆ ಸಂಗ್ರಹ ವ್ಯವಸ್ಥೆಯ ಭಾಗವಾಗಿ ನೀಡಬಹುದು.

(6) ಮೇಲಿನ ವಿಷಯಗಳ ಹೊರತಾಗಿಯೂ, ಬಿಬಿಎಂಪಿ ಎಲ್ಲಾ ಅಥವಾ ಕೆಲವು ತ್ಯಾಜ್ಯ ಉತ್ಪಾದಕರುಗಳಿಂದ ದಿನಕ್ಕೆ ಎರಡು ಅಥವಾ ಮೂರು ಬಾರಿ (ದಿನ/ಸಂಜೆ/ರಾತ್ರಿ ಸಂಗ್ರಹಣೆ) ತ್ಯಾಜ್ಯವನ್ನು ಸಂಗ್ರಹಿಸಲು ಮತ್ತು ಸಾಗಿಸಲು ವಿಸ್ತರಿಸಬಹುದು, ನಿರ್ದಿಷ್ಟ ತ್ಯಾಜ್ಯವನ್ನು ನಿರ್ದಿಷ್ಟ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸಲು ಹೆಚ್ಚುವರಿ ಶುಲ್ಕವನ್ನು ನಿಯಮಿತವಾಗಿ ಸಂಪೂರ್ಣವಾಗಿ ಅಥವಾ ಭಾಗಶಃ ಪಡೆದು ಸರಿದೂಗಿಸಲಾಗುತ್ತದೆ.

**ಬಿ. ನೋಂದಾಯಿತ ಸೇವಾದಾರರ/ಏಜನ್ಸಿ ಮುಖಾಂತರ ಇತರೇ ಸಂಗ್ರಹ**

**(1)** ಉಪವಿಧಿ 6ರ ಅಡಿಯಲ್ಲಿ ಘನತ್ಯಾಜ್ಯವನ್ನು ಮನೆ ಮನೆ ಸಂಗ್ರಹಣೆ ಹೊರತಾಗಿಯೂ ಬಿಬಿಎಂಪಿ ಮತ್ತು / ಅಥವಾ ನೋಂದಾಯಿತ ಸೇವಾದಾರರ ಒದಗಿಸುವವರು ಯಾರೇ ಆಗಲಿ ಘನತ್ಯಾಜ್ಯವನ್ನು ಸಾರ್ವಜನಿಕ ಸ್ಥಳಗಳಾದ ಉದ್ಯಾನವನಗಳು, ಮಾರುಕಟ್ಟೆಗಳು, ರಸ್ತೆಗಳು, ಬೀದಿಗಳು, ಹೂ ತೋಟಗಳು, ಸಂಗ್ರಹ ತಾಣಗಳು (ಕಿಯಾಸ್ಕ್) ವರ್ಗಾವಣೆ ಕೇಂದ್ರಗಳು ಹಾಗೂ ಅದೇ ಮಾದರಿಯ ಪ್ರದೇಶಗಳಿಂದ ನಿರ್ದಿಷ್ಟಪಡಿಸಿದ ಸಮಯ ಮತ್ತು ದಿನಗಳಲ್ಲಿ ಸಂಗ್ರಹಿಸತಕ್ಕದ್ದು.

**(2)** ಉತ್ಪಾದಕರ ವಿಸ್ತ್ರತ ಜವಾಬ್ದಾರಿಯನ್ನು ಇ-ತ್ಯಾಜ್ಯ (ನಿರ್ವಹಣೆ) ನಿಯಮಾವಳಿ,2016ರ ಅನ್ವಯ ಅನುಷ್ಠಾನಗೊಳಿಸುವವರೆಗೆ. ಬಿಬಿಎಂಪಿಯು ಇ-ತ್ಯಾಜ್ಯ ಸಂಗ್ರಹ ಅಥವಾ ಇ-ತ್ಯಾಜ್ಯವನ್ನು ಹಾಕುವ ವ್ಯವಸ್ಥೆಯನ್ನು ಅಗತ್ಯವೆಂದು ಕಂಡು ಬಂದಲ್ಲಿ ಇ-ತ್ಯಾಜ್ಯ ಪುನರ್ ಬಳಕೆದಾರರ ಮೂಲಕ ಪಾವತಿ ಆಧಾರದ ಮೇಲೆ ಅನುವು ಮಾಡಬೇಕು. ನಾಗರಿಕರು ತಮ್ಮ ಇ-ತ್ಯಾಜ್ಯಗಳನ್ನು ನೀಡಲು ಅಥವಾ ತಂದು ಹಾಕಲು ಬಿಬಿಎಂಪಿಯು ಡಿಡಬ್ಲ್ಯುಸಿಸಿಗಳನ್ನು ಅಥವಾ ಇನ್ನಾವುದೋ ಸ್ಥಳಗಳನ್ನು ಅಧಿಸೂಚಿತಗೊಳಿಸಬಹುದು ಮತ್ತು ಇ-ತ್ಯಾಜ್ಯ ಪುನರ್ ಬಳಕೆದಾರರು ಇವುಗಳನ್ನು ಸಂಗ್ರಹಿಸಿಕೊಂಡು ಹೋಗುತ್ತಾರೆ.

**(3)** ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯಗಳ ಸಂಗ್ರಹಕ್ಕಾಗಿ ತ್ಯಾಜ್ಯ ಉತ್ಪಾದಕರು ಬಿಬಿಎಂಪಿಯನ್ನು ಅಥವಾ ನೋಂದಾಯಿತ ಸೇವಾದಾರರ (ಸೇವೆ ಒದಗಿಸುವವರನ್ನು) ಸಂಪರ್ಕಿಸಬಹುದು, ಇವರ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಅಥವಾ ಅದರ ಕಚೇರಿಯಲ್ಲಿ ಪಡೆದುಕೊಳ್ಳಬಹುದು. ಬಿಬಿಎಂಪಿ ಅಧಿಸೂಚಿಸಿದ ಪ್ರಕಾರ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡಿದ ಬಳಿಕ ವಿಂಗಡಿಸಿದ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯವನ್ನು ಉತ್ಪಾದಕರಿಂದ ನಿಗದಿತ ಕಾಲಾವಧಿಯಲ್ಲಿ ನೋಂದಾಯಿತ ಸೇವಾದಾರರ ಸಂಗ್ರಹಿಸುತ್ತಾರೆ. ಈ ತ್ಯಾಜ್ಯವನ್ನು ಅಧಿಕೃತ ಸಂಸ್ಕರಣ ಕೇಂದ್ರಕ್ಕೆ ಅಥವಾ ಬಿಬಿಎಂಪಿ ಅಧಿಸೂಚಿಸಿದ ಸಿ & ಡಿ ನಿಯಮಾವಳಿ ಪ್ರಕಾರ ನಿಗದಿಪಡಿಸಿದ ಸ್ಥಳಕ್ಕೆ ಸಾಗಣೆ ಮಾಡಬೇಕು. ಬಿಬಿಎಂಪಿಯು ಕಟ್ಟಡ

ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯದ ನಿರ್ವಹಣೆ ಕುರಿತು ಮಾರ್ಗದರ್ಶಿಗಳನ್ನು ಹೊರಡಿಸಬೇಕು ಮತ್ತು ಈ ಷರತ್ತುಗಳನ್ನು ಅಂತಹ ಮಾರ್ಗದರ್ಶಿಗಳೊಂದಿಗೆ ಭಿನ್ನಾಭಿಪ್ರಾಯಗಳಿಲ್ಲದೇ ಓದಬೇಕು.

**ಸಿ. ಮನೆ ಮನೆ ಸಂಗ್ರಹ-** ನೋಂದಾಯಿತ ಸೇವಾದಾರರ (ಸೇವೆ ಒದಗಿಸುವವರು) / ಏಜನ್ಸಿ ಮತ್ತು ಕಸ ಉತ್ಪಾದಕರ ಜವಾಬ್ಧಾರಿಗಳು

(1) ಬಿಬಿಎಂಪಿ ಮತ್ತು/ಅಥವಾ ನೋಂದಾಯಿತ ಸೇವಾದಾರರ / ಏಜೆನ್ಸಿಒದಗಿಸುವವರು ಘನ ತ್ಯಾಜ್ಯದ ಸಂಗ್ರಹಕ್ಕೆ ತಾವು ಬರುತ್ತಿರುವುದನ್ನು ಸೀಟಿ (ವಿಷಲ್) ಊದುವ ಮುಖಾಂತರ ಮತ್ತು ಮೊದಲೇ ಧ್ವನಿ ಮುದ್ರಿಸಿದ ಸಂದೇಶವನ್ನು ಧ್ವನಿವರ್ಧಕದ ಮೂಲಕ ಪ್ರಸಾರ ಮಾಡುವ ಮೂಲಕ ಅಥವಾ ಇನ್ನಾವುದೇ ಅಂತಹ ವಿಧಾನದ ಮೂಲಕ ಆ ಅವಧಿಯಲ್ಲಿ ಘೋಷಿಸುವ ಮೂಲಕ ಕಸ/ತ್ಯಾಜ್ಯ ಉತ್ಪತ್ತಿದಾರನು ವಿಂಗಡಿಸಿದ ತ್ಯಾಜ್ಯವನ್ನು ನೀಡಲು ಸಿದ್ಧರಾಗಿರುವಂತೆ ಮಾಡಬೇಕು. ಒಂದೊಮ್ಮೆ ಕಸ ಉತ್ಪಾದಕನು ಘನತ್ಯಾಜ್ಯವನ್ನು ನೀಡಲು ಹಾಜರಿಲ್ಲದೇ ಹೋದಲ್ಲಿ, ಅಂತಹ ಕಸ ಉತ್ಪತ್ತಿದಾರನು ಘನತ್ಯಾಜ್ಯವನ್ನು ವಿಂಗಡಿಸಿದ ಮಾದರಿಯಲ್ಲಿ ಪ್ರಮುಖವಾಗಿ ಕಾಣುವ ರೀತಿಯಲ್ಲಿ ಸುಲಭವಾಗಿ ಬಿಬಿಎಂಪಿ ಮತ್ತು/ಅಥವಾ ನೋಂದಾಯಿತ ಸೇವಾದಾರರಿಗೆ ಘನತ್ಯಾಜ್ಯದ ಸಂಗ್ರಹಕ್ಕೆ ಕೈಗೆಟಕುವ ಸ್ಥಳದಲ್ಲಿ ಇರಿಸಬೇಕು. ಘನತ್ಯಾಜ್ಯವನ್ನು ನಾಯಿ, ದನಗಳು, ಹಂದಿಗಳು ಅಥವಾ ಇತರ ಪ್ರಾಣಿಗಳು ದಾಳಿ ನಡೆಸುವಂತೆ ತೆರದಿಡಬಾರದು, ಅದನ್ನು ಮುಚ್ಚಿದ ರೀತಿಯಲ್ಲಿಇರಿಸಬೇಕು. ಅದೇ ರೀತಿಯಾಗಿ ಇಂತಹ ಘನತ್ಯಾಜ್ಯವನ್ನು ನಿಷೇಧಿತ ಒಂದೇ ಬಾರಿ ಬಳಕೆ ಮಾಡುವಂತಹ ಪ್ಲಾಸ್ಟಿಕ್‌ನಲ್ಲಾಗಲೀ ಅಥವಾ ಪ್ಲಾಸ್ಟಿಕ್ ಲೈನರ್ ಯುಕ್ತ ತ್ಯಾಜ್ಯ ಬುಟ್ಟಿಗಳಲ್ಲಿ (ಗಾರ್ಬೇಜ್ ಬಿನ್ ಲೈನರ್) ಇಡಬಾರದು.

(2) ವಿಂಗಡಣೆ ಮಾಡಿದ ಘನತ್ಯಾಜ್ಯ ಸಂಗ್ರಹಣೆಗೆ ಬಿಬಿಎಂಪಿಯೊಂದಿಗೆ ಅನುಪಾಲನೆ ಮಾಡುವುದು ಪ್ರತಿಯೊಬ್ಬ ಕಸ ಉತ್ಪಾದಕರ ಕರ್ತವ್ಯವಾಗಿದೆ. ಈ ತ್ಯಾಜ್ಯವನ್ನು ಸಮರ್ಪಕವಾದ ಧಾರಕದಲ್ಲಿ (ಪಾತ್ರೆ/ಡಬ್ಬಿ/ಬುಟ್ಟಿ) ತ್ಯಾಜ್ಯವನ್ನು ಸಂಗ್ರಹಿಸಿ ಬಿಬಿಎಂಪಿ ಮತ್ತು/ಅಥವಾ ನೋಂದಾಯಿತ ಸೇವಾದಾರರ ಪ್ರಕಟಿಸಿದ ವೇಳಾಪಟ್ಟಿಯಂತೆ / ನಿಗದಿತ ಸಮಯದಲ್ಲಿ ಸಂಗ್ರಹಕ್ಕೆ ಸಿದ್ಧವಾಗಿಟ್ಟುಕೊಳ್ಳುವುದನ್ನು ಖಾತರಿಪಡಿಸತಕ್ಕದ್ದು. ಈ ಅಧ್ಯಾಯದ ನಿಬಂಧನೆಗಳನ್ನು ಪಾಲಿಸದ ಕಸ ಉತ್ಪಾದಕರ ಕುರಿತು ಮೇಲ್ವಿಚಾರಣೆ ನಡೆಸಿ ವರದಿ ನೀಡುವುದು ಬಿಬಿಎಂಪಿ ಮತ್ತು/ಅಥವಾ ನೇಮಕ ಮಾಡಿದ ವ್ಯಕ್ತಿಯ ಜವಾಬ್ಧಾರಿಯಾಗಿದೆ. ನಿಯಮಗಳನ್ನು ಪಾಲಿಸದ ಕಸ ಉತ್ಪಾದಕರನ್ನು ಈ ಉಪವಿಧಿಯ ಅನುಸೂಚಿ VII ರ ಅನ್ವಯ ದಂಡ ವಿಧಿಸಲಾಗುವುದು.

(3) ಸಂಗ್ರಹಿಸಿದ ಮತ್ತು ವಿಂಗಡಿಸಿದ ಘನತ್ಯಾಜ್ಯವನ್ನು ದ್ವಿತೀಯ ಹಂತದ ಸಂಗ್ರಹಣಾ ಕೇಂದ್ರಗಳಾದ ತ್ಯಾಜ್ಯ ಶೇಖರಣೆ / ಸಂಗ್ರಹಣೆ ಉಗ್ರಾಣ (ಡಿಪೋ)ಗಳು, ವರ್ಗಾವಣೆ ಕೇಂದ್ರಗಳು, ಅಥವಾ ವಸ್ತುಗಳನ್ನು ಮರಳಿ ಪಡೆಯುವ ಕೇಂದ್ರಗಳಿಗೆ ಅಥವಾ ಅನುಕ್ರಮವಾದ ಸಂಸ್ಕರಣೆಗಾಗಿ ಕಾಂಪೋಸ್ಟ್ (ಗೊಬ್ಬರ) ಘಟಕಗಳು, ಬಯೋಮಿಥೇನೇಶನ್ ಘಟಕಗಳು, ಪುನರ್ ಬಳಕೆಯಾಗಿ ಪರಿವರ್ತಿಸುವ ಘಟಕಗಳು, ತ್ಯಾಜ್ಯದಿಂದ ಇಂಧನ ಘಟಕಗಳು ಅಥವಾ ಬಿಬಿಎಂಪಿ ನಿಗದಿಪಡಿಸಿದ ಯಾವುದೇ ನಿವೇಶನ/ಘಟಕಕ್ಕೆ ಸಾಗಣೆ ಮಾಡಬಹುದು.

(4) ಬೇರೆ ಬೇರೆ ಕಸ ಉತ್ಪಾದಕರಿಂದ ಸಂಗ್ರಹಿಸಿದ ವಿಂಗಡಣೆ ಮಾಡಿದ ಘನ ತ್ಯಾಜ್ಯದ ಸಾಗಾಣಿಕೆ, ವರ್ಗಾವಣೆ ಹಾಗೂ ಅಂತಹ ತ್ಯಾಜ್ಯದ ಸಂಸ್ಕರಣೆ ವೇಳೆ ಅವುಗಳು ಒಂದಕ್ಕೊಂದು ಮಿಶ್ರಣಗೊಳ್ಳಬಾರದು. ಇಂತಹ ಮಿಶ್ರಣ ಆಗಿರುವುದು ಕಂಡು ಬಂದರೆ ತ್ಯಾಜ್ಯ ಸಂಗ್ರಾಹಕರಿಗೆ ಮತ್ತು ಸಾಗಣಿಕೆದಾರರಿಗೆ ಮತ್ತು ಸಂಬಂಧಿಸಿದ ಅಧಿಕಾರಿಗಳಿಗೆ ಬಿಬಿಎಂಪಿಯು ದಂಡ ವಿಧಿಸಬೇಕು.

(5) ನೋಂದಾಯಿತ ಸೇವಾದಾರರ ಎಲ್ಲ ವಾಹನಗಳನ್ನು ಜಿಪಿಎಸ್ ಮತ್ತು ಆರ್‌ಎಫ್‌ಐಡಿ ಟ್ಯಾಗ್‌ನೊಂದಿಗೆ ಸಂಯೋಜಿಸುವುದು ಮತ್ತು ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಾಣಿಕೆ, ವಾಹನಗಳನ್ನು ಮತ್ತು ಅದರ ತ್ಯಾಜ್ಯ ಸಂಗ್ರಾಹಕರು / ಕೆಲಸಗಾರರು ತ್ಯಾಜ್ಯ ನಿರ್ವಹಣೆಯಲ್ಲಿ ಒಳಗೊಂಡ ಎಲ್ಲ ಕೆಲಸಗಾರರಿಗೂ ಬಯೋಮೆಟ್ರಿಕ್ ಹಾಜರಾತಿಯನ್ನು ಅಳವಡಿಸುವ ಮೂಲಕ ಮೇಲ್ವಿಚಾರಣೆಯನ್ನು ದೂರದಿಂದಲೇ ನಡೆಸುವುದನ್ನು (ರಿಮೋಟ್ ಮಾನಿಟರಿಂಗ್) ಸಾಧ್ಯವಾಗಿಸಬೇಕು.

**7. ನೆರವುದಾಣ (ಕಿಯಾಸ್ಕ್) ಗಳಿಂದ ಸಂಗ್ರಹ**

ಬಿಬಿಎಂಪಿಯು ತನ್ನ ವ್ಯಾಪ್ತಿಯಲ್ಲಿ ಸಂಗ್ರಹ ವಾಹನಗಳಿಗೆ / ತಳ್ಳುಗಾಡಿಗಳಿಗೆ ಅಥವಾ ಸೂಕ್ತವಾದ ಇನ್ನಾವುದೇ ಕಾರಣಗಳಿಗಾಗಿ ಕೆಲವೊಂದು ಪ್ರದೇಶಗಳನ್ನು ಬಿಬಿಎಂಪಿ ಕಿಯಾಸ್ಕ್ ಸಂಗ್ರಹಕ್ಕಾಗಿ ಅಧಿಸೂಚಿಸಬಹುದು. ಸಂಗ್ರಹದ ಅನುಷ್ಠಾನಕ್ಕಾಗಿ ಬಿಬಿಎಂಪಿಯು ನೆರವುದಾಣಗಳನ್ನು / ನಿಗದಿ ಮಾಡಬೇಕು ಮತ್ತು ಕಸ ಉತ್ಪಾದಕರು ವಿಂಗಡಿಸಿದ ಕಸವನ್ನು ಇಲ್ಲಿ ನೀಡಬೇಕು. ಈ ಅಧಿಸೂಚಿತ ಸಂಗ್ರಹ ನೆರವುದಾಣಗಳಿಂದ ವಿಂಗಡಣೆ ಮಾಡಿದ ಕಸವನ್ನು ಈ ಉಪವಿಧಿಗಳ ಅಡಿಯಲ್ಲಿ ಸಂಸ್ಕರಣೆಗಾಗಿ ಮತ್ತು ವಿಲೇವಾರಿಗಾಗಿ ಸಾಗಾಟ ಮಾಡಲು ಬಿಬಿಎಂಪಿ ಮತ್ತು / ಅಥವಾ ನೋಂದಾಯಿತ ಸೇವಾದಾರರ ವ್ಯವಸ್ಥೆ ಕಲ್ಪಿಸಬೇಕು.

**8. ಕೆಲವು ಸಂದರ್ಭಗಳಲ್ಲಿ ತ್ಯಾಜ್ಯ ಉತ್ಪಾದಕರಿಂದಲೇ ಘನತ್ಯಾಜ್ಯ ಬಟವಾಡೆ ಮತ್ತು ಸಾಗಾಣಿಕೆ-**

(1) ಅಧಿಕೃತ ಕಸ ಸಂಸ್ಕರಣೆದಾರರನ್ನು ಬೃಹತ್ ಪ್ರಮಾಣದ ಕಸ ಉತ್ಪಾದಕರು ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಾಗಿ ಈ ಉಪವಿಧಿಯಂತೆ ಗೊತ್ತು ಮಾಡಿದ್ದಲ್ಲಿ ಅಂತಹ ಅಧಿಕೃತ ತ್ಯಾಜ್ಯ ಸಂಸ್ಕರಣೆಗಾರರು ಘನ ತ್ಯಾಜ್ಯವನ್ನುಅಂತಹ ಕಸ ಉತ್ಪಾದಕರ ಆವರಣದಿಂದ ಸಂಸ್ಕರಣಾ ಘಟಕಗಳಿಗೆ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರು ಬಿಬಿಎಂಪಿಗೆ ಘೋಷಿಸಿದ ದರದಂತೆ ಸಂಗ್ರಹಿಸಬೇಕು ಮತ್ತು ಸಾಗಣಿಕೆ ಮಾಡಬೇಕು.

(2) ಬೀದಿ ಬದಿ ಮಾರಾಟಗಾರರು ಸರಿಯಾಗಿ ವಿಂಗಡಿಸಿದ ಕಸವನ್ನು ಕಸ ಸಂಗ್ರಹಣಾ ವ್ಯವಸ್ಥೆಗೆ ನೀಡಬೇಕು. ಯಾವುದೇ ಮಿಶ್ರಿತ ತ್ಯಾಜ್ಯವನ್ನು ನೀಡಬಾರದು ತಪ್ಪಿದ್ದಲ್ಲಿ ಅನುಸೂಚಿ VII ರ ಪ್ರಕಾರ ದಂಡ ವಿಧಿಸಲಾಗುವುದು.

(3) ಯಾವುದೇ ಕಸ ಉತ್ಪಾದಕರು ತಮ್ಮ ಪುನರ್ ಬಳಕೆ ಮಾಡಲು ಪರಿವರ್ತಿಸಬಹುದಾದ ಜೈವಿಕವಾಗಿ ವಿಘಟಿಸಲಾಗದೇ ಇರುವ ತ್ಯಾಜ್ಯವನ್ನು ನೇರವಾಗಿ ನೋಂದಾಯಿತ ಸೇವಾದಾರರ, ನೋಂದಾಯಿತ ಚಿಂದಿ ಆಯುವವರು ಹಾಗೂ ತ್ಯಾಜ್ಯ ವ್ಯಾಪಾರಿಗಳಲ್ಲಿ ಇರಿಸಬಹುದು ಅಥವಾ ಮಾರಾಟ ಮಾಡಬಹುದು.

(4) ಬಿಬಿಎಂಪಿಯು ಘನತ್ಯಾಜ್ಯದ ಕೆಲ ವರ್ಗಗಳು / ಬಗೆಗಳು, ವಿವಿಧ ರೀತಿಯ ತ್ಯಾಜ್ಯ ಉತ್ಪಾದಕರ ಮತ್ತು ತನ್ನ ವ್ಯಾಪ್ತಿಯ ಪ್ರದೇಶಗಳನ್ನು ಕಾಲಕಾಲಕ್ಕೆ ಅಧಿಸೂಚಿಸಬಹುದು. ಇಲ್ಲಿ ಕಸ ಉತ್ಪಾದಕರು ವಿಂಗಡಿಸಿದ ಘನ ತ್ಯಾಜ್ಯವನ್ನು ನೇರವಾಗಿ ನೀಡಲು ಮತ್ತು ದ್ವಿತೀಯ ಹಂತದ ಸಂಗ್ರಹಣಾ ಕೇಂದ್ರಗಳಿಗೆ ಮತ್ತು/ಅಥವಾ ಸಂಸ್ಕರಣಾ ವ್ಯವಸ್ಥೆಗೆ ನೇರವಾಗಿ ಇರಿಸಲು ಜವಾಬ್ದಾರರಾಗಿರುತ್ತಾರೆ.

**9. ಸಿ ಮತ್ತು ಡಿ ತ್ಯಾಜ್ಯ ಮತ್ತು ಜಡ (ನಿಷ್ಕ್ರಿಯ) ತ್ಯಾಜ್ಯ ಸಂಗ್ರಹಣೆ ಹಾಗೂ ಸಾಗಾಣಿಕೆ**:

(1) ರಸ್ತೆ ಗುಡಿಸಿದಾಗ ಸಿಗುವ ಕಸ (ಯಾಂತ್ರಿಕವಾಗಿ ಸ್ವಚ್ಛಗೊಳಿಸಿದಾಗ ಸಿಗುವ ಕಸವೂ ಸೇರಿದಂತೆ) ಬಿಬಿಎಂಪಿಯು ನಿರ್ದಿಷ್ಟ ಪ್ರದೇಶವನ್ನು ಸಿ ಮತ್ತು ಡಿ ತ್ಯಾಜ್ಯ ಹಾಗೂ ಇತರೆ ಜಡ ತ್ಯಾಜ್ಯ ವಿಲೇವಾರಿಗೆ ಬಿಬಿಎಂಪಿಯು ನಿಗದಿತ ಸ್ಥಳವನ್ನು ನಿಗದಿಮಾಡಬೇಕು.

(2) ಬಿಬಿಎಂಪಿಯು ತನ್ನದೇ ಚಟುಚಟಿಕೆಗಳಿಂದ ಮತ್ತು ತನ್ನ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೇ ಸರ್ಕಾರಿ ಇಲಾಖೆಗಳಿಂದ ಸಿ ಮತ್ತು ಡಿ ತ್ಯಾಜ್ಯವನ್ನು ಸಂಗ್ರಹಿಸುವುದು ಮತ್ತು ವಿಲೇ ಮಾಡುವ ಜವಾಬ್ಧಾರಿಯನ್ನು ಹೊಂದಬೇಕು.

(3) ರಸ್ತೆಗಳನ್ನು ಗುಡಿಸುವುದು, ಚರಂಡಿಗಳ ಹೂಳೆತ್ತುವುದು, ರಸ್ತೆಗಳನ್ನು ಮತ್ತು ಸಾರ್ವಜನಿಕ ಸ್ಥಳಗಳನ್ನು ವಿವಿಧ ಚಟುವಟಿಕೆಗಳಿಗೆ ಅಗೆಯುವುದು ಇತ್ಯಾದಿ., ಕಡೆಗಳಿಂದ ಸಂಗ್ರಹಿಸಿದ ಜಡ ತ್ಯಾಜ್ಯವನ್ನು ನಿಗದಿತ ಕಾಲ ಕ್ರಮದಲ್ಲಿಅಧಿಸೂಚಿತ ಪ್ರದೇಶದಲ್ಲಿ ಸಂಗ್ರಹಿಸಿ ವಿಲೇ ಮಾಡುವುದನ್ನು ಬಿಬಿಎಂಪಿ ಖಾತರಿ ಮಾಡಬೇಕು. ಸಮರ್ಪಕವೆಂದು ಕಂಡು ಬಂದಲ್ಲಿ ತಗ್ಗು ಪ್ರದೇಶಗಳನ್ನು ತುಂಬಲು ಈ ತ್ಯಾಜ್ಯವನ್ನು ಬಳಸಬಹುದು.

(4) ಸಿ ಮತ್ತು ಡಿ ತ್ಯಾಜ್ಯವನ್ನು ಲಾಭದಾಯಕ ಉಪಯೋಗಕ್ಕೆ ಬಳಸಿಕೊಳ್ಳುವ ಎಲ್ಲಾ ಅವಕಾಶಗಳನ್ನು ಬಿಬಿಎಂಪಿಯು ಕಂಡುಕೊಳ್ಳಬೇಕು.

(5) ಮೇಲ್ಕಂಡ ಎಲ್ಲ ಅಂಶಗಳನ್ನು ಸಿ ಮತ್ತು ಡಿ ತ್ಯಾಜ್ಯ ನಿರ್ವಹಣೆ ನಿಯಮಾವಳಿ, 2016ರ ಅನ್ವಯವೇ ನಡೆಸಬೇಕು.

**10. ಘನತ್ಯಾಜ್ಯದ ಸಂಗ್ರಹಣೆ ಮತ್ತು ಸಾಗಾಣಿಕೆಗೆ ವಾಹನಗಳು-**

(1) ವಿಂಗಡಿತ ಪ್ರತೀ ವಿಧದ ಘನತ್ಯಾಜ್ಯಗಳ ಸಂಗ್ರಹಕ್ಕಾಗಿ ಬೇರೆ ಬೇರೆ ವರ್ಣದ ಸೂಕ್ತ ವಾಹನಗಳನ್ನು ನೋಂದಾಯಿತ ಸೇವಾದಾರರಿಂದ ಬಿಬಿಎಂಪಿಯು ನಿಯೋಜಿಸಬೇಕು.

(ಎ) ಹಸಿರು: ಜೈವಿಕವಾಗಿ ವಿಘಟಿಸಬಲ್ಲ (ಹಸಿ) ತ್ಯಾಜ್ಯ

(ಬಿ) ನೀಲಿ: ಜೈವಿಕವಾಗಿ ವಿಘಟಿಸಲಾಗದ (ಒಣ) ತ್ಯಾಜ್ಯ

(ಸಿ) ಹಳದಿ: ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರಿಂದ ಬೃಹತ್ ಪ್ರಮಾಣದ ತ್ಯಾಜ್ಯ ಸಂಗ್ರಹಕ್ಕಾಗಿ.

ಒಂದು ವೇಳೆ ಅದೇ ವಾಹನವನ್ನು ಒಣ, ಹಸಿ ಮತ್ತು ಅಪಾಯಕಾರಿ ಗೃಹ ತ್ಯಾಜ್ಯವನ್ನು ಬೃಹತ್ ತ್ಯಾಜ್ಯ ಉತ್ಪಾದಕರಲ್ಲದವರಿಂದ ಸಂಗ್ರಹಿಸಲು ಬಳಸಿದರೇ, ಆಗ ಅದೇ ವಾಹನ ವಿವಿಧ ವರ್ಣದ ಮುಚ್ಚಳವಿರುವ ವಿಭಾಗಗಳನ್ನು ಹೊಂದಿರಬೇಕು

(2) ಬಿಬಿಎಂಪಿಯು ವಿಭಿನ್ನ ಸೂಕ್ತ ವಾಹನಗಳನ್ನು ಆಟೋ ಟಿಪ್ಪರ್ ಗಳೂ ಸೇರಿದಂತೆ ಮನೆ ಮನೆಗಳಿಂದ ಘನತ್ಯಾಜ್ಯದ ಸಂಗ್ರಹಣೆಗಾಗಿ ಅಥವಾ ಸೂಕ್ತವಾದ ದೊಡ್ಡದಾದ ಮತ್ತು ನಿರ್ದಿಷ್ಟವಾಗಿ ವಿನ್ಯಾಸಗೊಳಿಸಿದ ವಾಹನಗಳನ್ನು ವಾಣಿಜ್ಯ ಮಳಿಗೆಗಳ ವಿಂಗಡಿಸಿದ ತ್ಯಾಜ್ಯದ ಸಂಗ್ರಹಣೆಗಾಗಿ ನಿಯೋಜಿಸಬೇಕು. ಅಂತಹ ವಾಹನವು ಮುಚ್ಚುವಂತಹ ವ್ಯವಸೆ ಇರುವಂತಹ ಮತ್ತು ಅದು ಆಗಮಿಸುತ್ತಿರುವುದನ್ನು ಸಾರ್ವಜನಿಕರಿಗೆ ಸೂಚಿಸಲು ಅನುವಾಗುವಂತಹ ಸೂಕ್ತ ಧ್ವನಿವರ್ಧಕ ವ್ಯವಸ್ಥೆ ಮತ್ತು ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದ ಸಂದೇಶಗಳನ್ನು ಸಾರಲು ಅಂತಹ ವಾಹನಗಳಲ್ಲಿ ಅವಕಾಶವಿರಬೇಕು. ಎಲ್ಲಿ ಆಟೋ ಟಿಪ್ಪರ್ ಅಥವಾ ವಾಹನಗಳ ಮೂಲಕ ಸೇವೆ ಒದಗಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಸಂದುಗಳಲ್ಲಿ ತಳ್ಳುಗಾಡಿಗಳನ್ನು ನಿಯೋಜಿಸಬೇಕು.

(3) ಮನೆ ಮನೆ ಕಸ ಸಂಗ್ರಹ ಮತ್ತು ಘನ ತ್ಯಾಜ್ಯಗಳ ಸಾಗಣಿಕೆಗಾಗಿ ಬಿಬಿಎಂಪಿಯು ಪರಿಸರ ಸ್ನೇಹಿ ವಾಹನಗಳ ನಿಯೋಜನೆ ಸಾಧ್ಯತೆಗಳನ್ನು ಕುರಿತು ಯೋಚಿಸಬೇಕು. ಬ್ಯಾಟರಿಚಾಲಿತ ಮತ್ತು/ ಅಥವಾ ವಿದ್ಯುತ್‌ಚಾಲಿತ ಅಥವಾ ಸಿಎನ್‌ಜಿ ವಾಹನಗಳನ್ನು ಪರಿಚಯಿಸಬೇಕು. ಪಳೆಯುಳಿಕೆ ಇಂಧನಗಳ ವಾಹನಗಳನ್ನು ನ್ಯಾಯಬದ್ಧವಾಗಿ ಪರಿಚಯಿಸಬೇಕು ಹಾಗೂ ಅದನ್ನು ಅತ್ಯುತ್ತಮವಾಗಿ ಬಳಕೆ ಮಾಡಬೇಕು ಹಾಗೂ ಕಾಲಕ್ರಮೇಣವಾಗಿ ಅವುಗಳನ್ನು ಹಂತಹಂತವಾಗಿ ಸಂಪೂರ್ಣ ರದ್ದು ಮಾಡಲು ಬಿಬಿಎಂಪಿಯು ಪ್ರಯತ್ನಿಸಬೇಕು. ಬಿಬಿಎಂಪಿಯು ಕನಿಷ್ಠ ಒಂದು ಬ್ಯಾಟರಿಚಾಲಿತ ಮತ್ತು/ಅಥವಾ ವಿದ್ಯುತ್‌ಚಾಲಿತ ಅಥವಾ ಸಿಎನ್‌ಜಿ ವಾಹನವನ್ನು ಪ್ರಾಥಮಿಕ ಕಸ ಸಂಗ್ರಹ ವಾಹನವನ್ನು ಪ್ರತೀ ವಾರ್ಡ್/ವಿಭಾಗಕ್ಕೆ

ಪರಿಚಯಿಸಬೇಕು. ಈ ಮೂಲಕ ಪಳೆಯುಳಿಕೆ ಇಂಧನರಹಿತ ವಾಹನ ಬಳಕೆಯನ್ನು ಅಲ್ಪಾವಧಿಯಲ್ಲೇ ಪ್ರೋತ್ಸಾಹಿಸಿದಂತಾಗುವುದು ಹಾಗೂ ಕ್ರಮೇಣ ಇದರ ಬಳಕೆಯನ್ನು ಪೂರ್ಣ ವಾರ್ಡ್‌ಗೆ ವಿಸ್ತರಿಸಬೇಕು.

(4) ಬಿಬಿಎಂಪಿಯು ವ್ಯವಸ್ಥೆಗೊಳಿಸಿದ ಮೂಲಸೌಕರ್ಯಕ್ಕೆ ಅನುಗುಣವಾಗಿ ಘನತ್ಯಾಜ್ಯವನ್ನು ಕಾಂಪಾಕ್ಟರ್ ನಂತಹ ದ್ವಿತೀಯ ಹಂತದ ವರ್ಗಾವಣೆ / ಸಾಗಣಿಕೆ ವಾಹನಗಳಿಗೆ ದ್ವಿತೀಯ ಹಂತದ ವರ್ಗಾವಣೆ ಸ್ಥಳಗಳಿಂದ ಸಾಗಣೆ ಮಾಡಬೇಕು. ಪ್ರತಿಯೊಂದು ಪ್ರಾಥಮಿಕ ಸಂಗ್ರಹ ವಾಹನಕ್ಕೂ ದ್ವಿತೀಯ ಹಂತದ ವರ್ಗಾವಣೆಯ / ಸಂಗ್ರಹಣೆ ವಾಹನವನ್ನು ನಿಗದಿ ಮಾಡಬೇಕು ಹಾಗೂ ಯಾವುದೇ ರೀತಿಯಲ್ಲೂ ಕೈಗಳನ್ನು ಬಳಸಿ (ಹಸ್ತಚಾಲಿತವಾಗಿ) ನಿರ್ವಹಣೆ ಮಾಡದೇ ಕಸವನ್ನು ನೇರವಾಗಿ ದ್ವಿತೀಯ ಹಂತದ ಸಾಗಣಿಕಾ ವಾಹನಕ್ಕೆ ಅಥವಾ ದ್ವಿತೀಯ ಹಂತದ ಸಂಗ್ರಹಣಾ ವ್ಯವಸ್ಥೆಗೆ ವರ್ಗಾವಣೆ ಮಾಡಬೇಕು. ವಾರ್ಡ್ ಮೈಕ್ರೋ ಪ್ಲಾನ್‌ನಲ್ಲಿಅಂತಹ ವರ್ಗಾವಣೆ / ಸಂಗ್ರಹಣೆ ಸ್ಥಳವನ್ನು ಗುರುತಿಸಿರಬೇಕು ಮತ್ತು ಆ ಸ್ಥಳವು ಮನೆ ಮನೆಗಳಿಂದ ಕಸ ಸಂಗ್ರಹಿಸುವ ಪ್ರಾಥಮಿಕ ಸಂಗ್ರಹಣೆ ಪ್ರದೇಶಗಳಿಂದ ಹತ್ತಿರದಲ್ಲಿ ಮತ್ತು ಅನುಕೂಲಕರವಾದ ಜಾಗದಲ್ಲಿರಬೇಕು. ಪ್ರತಿಯೊಂದು ದ್ವಿತೀಯ ಹಂತದ ವಾಹನಕ್ಕೆ ಸ್ವೀಕೃತವಾಗುವ ಘನತ್ಯಾಜ್ಯದ ವರ್ಗಕ್ಕೆ ಅನುಗುಣವಾಗಿ ಸಂಸ್ಕರಣೆ ವ್ಯವಸ್ಥೆ / ಸೌಕರ್ಯ, ವಸ್ತುಗಳನ್ನು ಮರಳಿ ಪಡೆಯುವ ವ್ಯವಸ್ಥೆ / ಸೌಕರ್ಯ, ಅಥವಾ ವಿಲೇವಾರಿ ಸ್ಥಳ ತಲುಪುವುದರ ವ್ಯವಸ್ಥೆ / ಸೌಕರ್ಯ, ಆಧರಿಸಿ ನಿಗದಿ ಮಾಡಿರಬೇಕು.

(5) ಘನತ್ಯಾಜ್ಯ ಸಾಗಣೆಗೆ ಬಳಕೆ ಮಾಡುವ ವಾಹನಗಳನ್ನು ಈ ಮಾದರಿಯಲ್ಲಿ ಮುಚ್ಚಿರಬೇಕಾಗಿದ್ದು ಸಂಗ್ರಹಿಸಿದ ತ್ಯಾಜ್ಯವು,

(i) ಬಾಹ್ಯ ಪರಿಸರಕ್ಕೆ ತೆರೆದುಕೊಳ್ಳದಂತೆ

(ii) ಸಾರ್ವಜನಿವಾಗಿ ಕಾಣದಂತೆ ಮತ್ತು

(iii) ಸಾಗಣಿಕೆ ವೇಳೆ ರಸ್ತೆಗಳಲ್ಲಿ ಮತ್ತು/ಅಥವಾ ಪಾದಚಾರಿ ಸ್ಥಳಗಳಲ್ಲಿ ಚೆಲ್ಲದಂತೆ ಇರಬೇಕು.

(6) ಘನತ್ಯಾಜ್ಯವು ಸಂಸ್ಕರಣಾ / ವಿಲೇವಾರಿ ಸ್ಥಳ ತಲುಪುವವರೆಗೂ ಮತ್ತು ಅಂತಹ ತ್ಯಾಜ್ಯವನ್ನು ಪದೇ ಪದೇ ಕೈಗಳನ್ನು ಬಳಸಿ (ಹಸ್ತ ಚಾಲಿತವಾಗಿ) ನಿರ್ವಹಿಸಲು ಅವಕಾಶ ಇಲ್ಲದಂತೆ ಪ್ರಾಥಮಿಕ ಮತ್ತು ದ್ವಿತೀಯ ಹಂತದ ಸಾಗಣಿಕ ವಾಹನಗಳನ್ನು ವಿನ್ಯಾಸಗೊಳಿಸಿರಬೇಕು. ಹೀಗಾಗಿ ವಿಂಗಡಿತ ಘನ ತ್ಯಾಜ್ಯದ ವರ್ಗಾವಣೆಯು ಡಬ್ಬದಿಂದ ಡಬ್ಬಕ್ಕೆ (ಬಿನ್ ಟು ಬಿನ್) ಮತ್ತು ವಾಹನದಿಂದ ವಾಹನಕ್ಕೆ ನಡೆಯಬೇಕು. ಬಿಬಿಎಂಪಿಯು ಹಸಿ ತ್ಯಾಜ್ಯದ ನಿರ್ವಹಣೆ ವೇಳೆ ಪ್ರಾಥಮಿಕ ಸಂಗ್ರಹಣೆ ವಾಹನಗಳಿಂದ ಮತ್ತು ದ್ವಿತೀಯ ಹಂತದ ಸಾಗಣಿಕಾ ವಾಹನಗಳಿಂದ ಯಾವುದೇ ಲೀಚೆಟ್ ಸೋರಿಕೆ ಆಗದೇ ಇರುವುದನ್ನು ಖಾತರಿಪಡಿಸಿಕೊಳ್ಳಲು ಅವಶ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡಬೇಕು. ಪ್ರಾಥಮಿಕ ಸಂಗ್ರಹಣೆ ವಾಹನಗಳು

ಮತ್ತು ಎರಡನೇ ಹಂತದ ಸಾಗಣೆ ವಾಹನಗಳಲ್ಲಿ ಸಂಗ್ರಹವಾಗುವ ಲೀಚೆಟ್‌ನ್ನು ಯಾವುದೇ ಮಳೆ ನೀರು ಚರಂಡಿಗಳಿಗೆ ಅಥವಾ ಒಳಚರಂಡಿಗಳಿಗೆ ವಿಸರ್ಜಿಸದ ರೀತಿಯಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು.

(7) ಪ್ರಾಥಮಿಕ ಸಂಗ್ರಹಣೆ ವಾಹನಗಳು ಮತ್ತು ದ್ವಿತೀಯ ಹಂತದ ಸಾಗಣಿಕಾ ವಾಹನಗಳೂ ಸೇರಿದಂತೆ ಬಿಬಿಎಂಪಿಯು ಎಲ್ಲಾ ಘನತ್ಯಾಜ್ಯ ನಿರ್ವಹಣಾ ವಾಹನಗಳನ್ನು ಐ.ಸಿ.ಟಿ. ಸಕ್ರಿಯಗೊಳಿಸಿದ ವ್ಯವಸ್ಥೆಯುಳ್ಳ ನೇರ ಜಿ.ಪಿ.ಎಸ್. ಮೂಲಕ ಘನತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣಿಕೆಯ ಮೇಲ್ವಿಚಾರಣೆಯನ್ನು ಖಚಿತಪಡಿಸಬೇಕು. ಅಂತಹ ವಾಹನಗಳ ಮೇಲ್ವಿಚಾರಣೆಯನ್ನು ಬಿಬಿಎಂಪಿಯು ದೂರದಿಂದಲೇ ಮೇಲ್ವಿಚಾರಣೆ ನಡೆಸುವಂತಹ ಕೇಂದ್ರೀಕೃತ ಸ್ಮಾರ್ಟ್ ಡಾಟಾ ವ್ಯವಸ್ಥೆ ಮುಖೇನ ನಡೆಸಬೇಕು. ಪಾರದರ್ಶಕತೆ ಮತ್ತು ಹೊಣೆಗಾರಿಕೆ ಉದ್ದೇಶದಿಂದ (ಉತ್ತರಧಾಯಿತ್ವ) ಈ ವ್ಯವಸ್ಥೆಗೆ ಸಾರ್ವಜನಿಕ ಪ್ರವೇಶ ಅವಕಾಶವನ್ನು ಕಲ್ಪಿಸಬೇಕು.

(8) ನಿಗದಿತ ಪ್ರದೇಶದಲ್ಲಿ ಸಂಗ್ರಹವಾಗುವ ಘನತ್ಯಾಜ್ಯದ ಪ್ರಮಾಣ ಮತ್ತು ಜನಸಂಖ್ಯೆಯ ಸಾಂದ್ರತೆಗೆ / ದಟ್ಟಣೆಗೆ ಅನುಗುಣವಾಗಿ ಘನತ್ಯಾಜ್ಯದ ಎರಡನೇ ಹಂತದ ಸಾಗಣಿಕಾ ವ್ಯವಸ್ಥೆಯನ್ನು ರೂಪಿಸಬೇಕು ಈ ವ್ಯವಸ್ಥೆಯು ಮೊದಲೇ ನಿಗದಿ ಮಾಡಿದ ನಿರ್ವಹಣಾ ಮಾನದಂಡದಂತೆ ಸಾರ್ವಜನಿಕರಿಗೆ ಕನಿಷ್ಟ ಕಿರಿಕಿರಿ ಆಗುವ ಕಾರ್ಯವಿಧಾನ ಅಳವಡಿಸಬೇಕು. ಎಲ್ಲ ದ್ವಿತೀಯ ಹಂತದ ವರ್ಗಾವಣೆ ಸ್ಥಳವು ನೋಟಕ್ಕೆ ಸಿಗದಂತೆ ಸ್ವಚ್ಛ ನೋಟ ಮತ್ತು ಸೌಂದರ್ಯದ ದೃಷ್ಟಿಯಿಂದ ಆವೃತವಾಗಿರಬೇಕು.

(9) ಬಿಬಿಎಂಪಿಯು ಸುಧಾರಿತ, ಸ್ವತಂತ್ರ ಘನತ್ಯಾಜ್ಯ ನಿರ್ವಹಣೆ (ಎಸ್‌ಡಬ್ಲ್ಯುಎಮ್) ಸೇವೆ ಮತ್ತು ತನ್ನ ಪುನರಾವರ್ತಿತವಾಗುವ ವೆಚ್ಚಗಳನ್ನು ಕಡಿಮೆ ಮಾಡುವುದನ್ನು ಖಾತರಿಪಡಿಸಲು ತನ್ನದೇ ಆದ ಘನತ್ಯಾಜ್ಯ ಸಂಗ್ರಹ ಮತ್ತು ಸಾಗಾಟ ವ್ಯವಸ್ಥೆ (ಸಾಗಾಟ ವಾಹನ) ಮೂಲಸೌಕರ್ಯವನ್ನು ಮಧ್ಯಮ ಹಂತದಲ್ಲಿ ಹೊಂದುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು.

## ಅಧ್ಯಾಯ IV

## ಘನತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿ

**11.ಬಿಬಿಎಂಪಿ ಕಲ್ಪಿಸಬೇಕಾದ ಸೌಕರ್ಯಗಳು-**

**(1) ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳು ಹಾಗೂ ಒಣ ತ್ಯಾಜ್ಯದಿಂದ ವಸ್ತುಗಳನ್ನು ಮರಳಿ ಪಡೆಯುವ ವ್ಯವಸ್ಥೆ:** (ಎ) ಬಿಬಿಎಂಪಿಯು ತನ್ನ ವಾರ್ಡ್‌ಗಳಲ್ಲಿ ಒಣ ತ್ಯಾಜ್ಯ ಸಂಗ್ರಹಣೆಗೆ ಅವುಗಳು ಮತ್ತು/ಅಥವಾ ವಸ್ತುಗಳನ್ನು ಮರಳಿ ಪಡೆಯುವ ವ್ಯವಸ್ಥೆಗಳನ್ನು ಸ್ಥಾಪಿಸಬೇಕು. ಬಿಬಿಎಂಪಿಯು ಅನೌಪಚಾರಿಕ ಚಿಂದಿ ಆಯುವವರ ಸಂಘಟನೆಗಳು / ಚಿಂದಿ ಆಯುವವರು ಮತ್ತು ಮಹಿಳಾ ಸ್ವಸಹಾಯ ಗುಂಪುಗಳನ್ನು ಬಿಬಿಎಂಪಿಯ ಒಣ ಕಸ ಸಂಗ್ರಹಣಾ ವ್ಯವಸ್ಥೆಗೆ ಸಂಯೋಜಿಸಿ ವಿಘಟಿಸಲಾಗದ ಒಣ ತ್ಯಾಜ್ಯದ ಸಂಗ್ರಹಣೆ ಮತ್ತು ವಿಂಗಡಣೆಗೆ ಬಳಸಿಕೊಳ್ಳುವ ಮೂಲಕ ಈ ಕೇಂದ್ರಗಳನ್ನು ನಿರ್ವಹಿಸಬೇಕು.

(ಬಿ) ಡಿಡಬ್ಲ್ಯುಸಿಸಿ ಮತ್ತು/ಅಥವಾ ವಸ್ತುಗಳನ್ನು ಮರಳಿ ಪಡೆಯುವ ಸೌಕರ್ಯಗಳು ಬೇರೆ ಬೇರೆ ವರ್ಗದ ಘನತ್ಯಾಜ್ಯದ ಸಮರ್ಥ ವಿಂಗಡಣೆ ಮತ್ತು ಸಂಗ್ರಹವನ್ನು ಖಾತರಿಪಡಿಸಲು ಯಾಂತ್ರೀಕೃತವಾಗಿರಬೇಕು ಹಾಗೂ ವಿದ್ಯುತ್, ಕುಡಿಯುವ ನೀರು, ಶೌಚಾಲಯ ಮೊದಲಾದ ಅಗತ್ಯ ಮೂಲಸೌಕರ್ಯಗಳನ್ನು ಹೊಂದಿರಬೇಕು ಮತ್ತು ಸುಸ್ಥಿರವಾದ ಹಸಿರು ಕಟ್ಟಡಗಳಾಗಿ ವಿನ್ಯಾಸಗೊಳಿಸರಬೇಕು.

**(2) ಅಪಾಯಕಾರಿ ಗೃಹ ತ್ಯಾಜ್ಯಗಳ ಠೇವಣಿ ಕೇಂದ್ರ:** (ಎ) ಸೂಕ್ತ ಸ್ಥಳಗಳಲ್ಲಿ ಸಾಕಷ್ಟು ಸಂಖ್ಯೆಯ ಅಪಾಯಕಾರಿ ಗೃಹ ತ್ಯಾಜ್ಯಗಳ ಠೇವಣಿ ಕೇಂದ್ರಗಳನ್ನು ತನ್ನ ಸರಹದ್ದಿನಲ್ಲಿ ಬಿಬಿಎಂಪಿ ಅಥವಾ ನೋಂದಾಯಿತ ಸೇವಾದಾರರು ಸ್ಥಾಪಿಸಬೇಕು. ಕೆಎಸ್‌ಪಿಸಿಬಿ/ಸಿಪಿಸಿಬಿ ಅಥವಾ ಇನ್ನಾವುದೇ ಸೂಕ್ತ ಸರ್ಕಾರಿ ಏಜೆನ್ಸಿಗಳು ರೂಪಿಸಿದ ಮಾರ್ಗದರ್ಶಿ ಅನ್ವಯ ಇಂತಹ ವ್ಯವಸ್ಥೆಗಳನ್ನು ಸ್ಥಾಪಿಸಬೇಕು. ಡಿಡಬ್ಲ್ಯುಸಿಸಿಗಳನ್ನು ಈಗಾಗಲೇ ಸ್ಥಾಪಿಸಿರುವ ವಾರ್ಡ್‌ಗಳಲ್ಲಿ ಡಿಡಬ್ಲ್ಯುಸಿಸಿಯ ಭಾಗವೊಂದನ್ನು ನಿಗದಿಪಡಿಸಿ ಅನ್ವಯವಾಗುವ ನಿಬಂಧನೆಗಳ ಪ್ರಕಾರ ಅಪಾಯಕಾರಿ ಗೃಹತ್ಯಾಜ್ಯ ಸಂಗ್ರಹ ಕೇಂದ್ರವಾಗಿ ಅಭಿವೃದ್ಧಿಗೊಳಿಸಬಹುದು.

(ಬಿ) ಉಪವಿಧಿಯ 12ನೆಯ ಕಲಮಿನ ಅನ್ವಯ ಅಪಾಯಕಾರಿ ಗೃಹ ತ್ಯಾಜ್ಯ / ನೈರ್ಮಲ್ಯ ತ್ಯಾಜ್ಯಗಳನ್ನು ಎರಡನೇ ಹಂತದ ಸಂಗ್ರಹಣೆ / ವರ್ಗಾವಣೆ ಕೇಂದ್ರಗಳು ಮತ್ತು/ಅಥವಾ ಸಂಗ್ರಹಣೆ ಕೇಂದ್ರಗಳಲ್ಲಿ ಸಂಸ್ಕರಿಸಬೇಕು.

**12.ವಿವಿಧ ವರ್ಗದ ಘನತ್ಯಾಜ್ಯದ ಸಂಸ್ಕರಣೆ-**ಸಾಕಷ್ಟು ಸಂಸ್ಕರಣಾ ಸೌಲಭ್ಯಗಳನ್ನು ಸ್ವತಃ ಅಥವಾ ತ್ಯಾಜ್ಯ ಉತ್ಪಾದಕರು, ಬಿಬಿಎಂಪಿ, ನೋಂದಾಯಿತ ಸೇವಾದಾರರ, ಅಧಿಕೃತ ತ್ಯಾಜ್ಯ ಸಂಸ್ಕರಣಾಗಾರ ಮತ್ತು/ಅಥವಾ ಘನತ್ಯಾಜ್ಯದ ನಿರ್ವಹಣೆಯಲ್ಲಿ ತೊಡಗಿರುವ ಇನ್ನಾವುದೇ ವ್ಯಕ್ತಿ ಮಾಡುವುದನ್ನು ಖಾತರಿಪಡಿಸಿಕೊಳ್ಳಬೇಕು. ಈ ಕೆಳಗಿನ ಮಾದರಿಯಲ್ಲಿ ವಿವಿಧ ವರ್ಗಗಳ ಘನತ್ಯಾಜ್ಯದ ಸಂಸ್ಕರಣೆಯನ್ನು ಖಚಿತಪಡಿಸಿಕೊಳಬೇಕು, ಅವುಗಳೆಂದರೆ:-

**(ಅ)ಜೈವಿಕವಾಗಿ ವಿಘಟನೆಗೊಳ್ಳಬಲ್ಲ (ಕೊಳೆತು ಹೋಗಬಲ್ಲ) ಘನತ್ಯಾಜ್ಯ (ಹಸಿ ಕಸ)-**ಜೈವಿಕವಾಗಿ ವಿಘಟನೆಯಾಗಬಲ್ಲ ತ್ಯಾಜ್ಯವನ್ನು ಕಾಂಪೋಸ್ಟಿಂಗ್, ಎರೆಹುಳ ಗೊಬ್ಬರ ತಯಾರಿ, ಸೂಕ್ಷ್ಮ ಜೀವಿಗಳಿಂದ ಗೊಬ್ಬರ ತಯಾರಿ, ಏರೋಬಿಕ್ ಕಾಂಪೋಸ್ಟಿಂಗ್, ಅನ್‌ಏರೋಬಿಕ್ ಡೈಜೆಷನ್, ಬಯೋ ಮಿಥೇನೇಷನ್ ಅಥವಾ ಕೆಎಸ್‌ಪಿಸಿಬಿ/ಸಿಪಿಸಿಬಿ ಅನುಮೋದಿಸಿದ ಇನ್ನಾವುದೇ ಸಂಸ್ಕರಣಾ ವಿಧಾನಗಳ ಮೂಲಕ ಜೈವಿಕವಾಗಿ ವಿಘಟನೆಗೊಳ್ಳಬಲ್ಲ ತ್ಯಾಜ್ಯದ ಜೈವಿಕ ಸ್ಥಿರೀಕರಣವನ್ನು ವಿಕೇಂದ್ರೀಕೃತ ಮತ್ತು/ಅಥವಾ ಕೇಂದ್ರೀಕೃತ ಸಂಸ್ಕರಣೆ ಮುಖಾಂತರ ಮಾಡಬೇಕು. ಜಾನುವಾರುಗಳಿಗೆ ತಿನ್ನಲು ಸುರಕ್ಷಿತವಾಗಿದ್ದಲ್ಲಿ ಮತ್ತು ಅದು ಪ್ರಸ್ತುತ ಬಳಕೆಯಲ್ಲಿದ್ದಲ್ಲಿ ತಾಜಾ ಜೈವಿಕವಾಗಿ ವಿಘಟನೆಗೊಳ್ಳಬಲ್ಲ ತ್ಯಾಜ್ಯವನ್ನು ಕೆಎಸ್‌ಪಿಸಿಬಿಯೊಂದಿಗೆ ಸಮಾಲೋಚನೆಯೊಂದಿಗೆ ಜಾನುವಾರುಗಳ ಆಹಾರವಾಗಿಯೂ ಬಳಸಬಹುದು, ಇದು ಕೂಡ ಹಸಿತ್ಯಾಜ್ಯ ವಿಲೇ ಮಾಡುವ ಒಂದು ವಿಧಾನವಾಗಿಯೂ ಇದನ್ನು ಪರಿಗಣಿಸಬಹುದು.

**(ಆ) ಪುನರ್ ಬಳಕೆಗೆ ಪರಿವರ್ತಿಸಬಹುದಾದ ಜೈವಿಕವಾಗಿ ವಿಘಟನೆಗೊಳ್ಳದ ತ್ಯಾಜ್ಯ (ಒಣತ್ಯಾಜ್ಯ)ದ ಸಂಸ್ಕರಣೆ**-ಪುನರ್ ಬಳಕೆಗೆ ಪರಿವರ್ತಿಸಬಹುದಾದ ಜೈವಿಕವಾಗಿ ವಿಘಟನೆಗೊಳ್ಳದೇ ಇರುವ ತ್ಯಾಜ್ಯವನ್ನು ಇಲ್ಲಿಗೆ ಕಳುಹಿಸಬೇಕು-

(i) ಒಣ ಕಸ ಸಂಗ್ರಹ ಕೇಂದ್ರಗಳು, ವಸ್ತುಗಳನ್ನು ಮರಳಿ ಪಡೆಯುವ ವ್ಯವಸ್ಥಿತ ಕೇಂದ್ರಗಳಿಗೆ ವಿಂಗಡಣೆ ಮತ್ತು ಒಣ ಕಸದ ಉಂಡೆಗಳನ್ನು ಮಾಡಿ ಬಳಿಕ ಅಧಿಕೃತ ಪುನರ್ ಬಳಕೆಗೆ ಪರಿವರ್ತಿಸುವ ಘಟಕಗಳಿಗೆ; ಅಥವಾ

(ii) ಹೊಸ ಉತ್ಪನ್ನಗಳ ತಯಾರಿಕೆಗಾಗಿ ಕಚ್ಚಾ ವಸ್ತುವಾಗಿ ಮಾರ್ಪಡಿಸಲು ನೇರವಾಗಿ ಅಧಿಕೃತ ಪುನರ್ ಬಳಕೆ ಪರಿವರ್ತನಾ ಘಟಕಗಳಿಗೆ

**(ಇ) ನೈರ್ಮಲ್ಯ ತ್ಯಾಜ್ಯ ಸೇರಿದಂತೆ ಅಪಾಯಕಾರಿ ಗೃಹ ತ್ಯಾಜ್ಯಗಳ ಸಂಸ್ಕರಣೆ–**(ನೈರ್ಮಲ್ಯ ತ್ಯಾಜ್ಯ ಸೇರಿದಂತೆ) ಅಪಾಯಕಾರಿ ಗೃಹ ತ್ಯಾಜ್ಯಗಳನ್ನು ಕೆಎಸ್‌ಪಿಸಿಬಿಯ ಅಧಿಕೃತ ಟಿಎಸ್‌ಡಿಎಫ್ (ಸಂಸ್ಕರಣೆ, ಸಂಗ್ರಹಣೆ, ವಿಲೇ ವ್ಯವಸ್ಥೆ) ಮೂಲಕ ಸಂಸ್ಕರಣೆ ಮಾಡಬೇಕು. ಕೆಎಸ್‌ಪಿಸಿಬಿ/ಸಿಪಿಸಿಬಿ ನಿಗದಿ ಮಾಡಿದ ದಹನ ಪ್ರಕ್ರಿಯೆ ಅಥವಾ ಇನ್ನಾವುದೇ ಸೂಕ್ತ ವಿಧಾನಗಳಿಂದ ಸಂಸ್ಕರಣೆ ಮಾಡಬೇಕು. ನೈರ್ಮಲ್ಯ ತ್ಯಾಜ್ಯಗಳನ್ನು ಸಮೀಪದಲ್ಲಿರುವ ಸಾಮಾನ್ಯ ಬಯೋ ಮೆಡಿಕಲ್ ಸಂಸ್ಕರಣಾ ಘಟಕದಲ್ಲಿ ಮತ್ತು/ಅಥವಾ ಬಿಬಿಎಂಪಿಯ ದಹನಾಗಾರಗಳಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾದ ಇತರೇ ಬಯೋಮೆಡಿಕಲ್ ತ್ಯಾಜ್ಯಗಳೊಂದಿಗೆ ಸಂಸ್ಕರಿಸಬಹುದು. ಕೇವಲ ಸಂಸ್ಕರಣ ಪ್ರಕ್ರಿಯೆಯಲ್ಲಿ ತಿರಸ್ಕೃತಗೊಂಡ ಮತ್ತು ಜಡ ಉಳಿಕೆಯನ್ನು ಮಾತ್ರ ಅಂತಿಮವಾಗಿ ವಿಲೇವಾರಿ ಮಾಡಲು ನೈರ್ಮಲ್ಯ ಭೂಭರ್ತಿ ಜಾಗಕ್ಕೆ ಸಾಗಿಸಬೇಕು. ದೀರ್ಘಾವಧಿಯಲ್ಲಿ ಬಿಬಿಎಂಪಿಯು ತನ್ನದೇ ಆದ ಟಿಎಸ್‌ಡಿಎಫ್‌ಗಳನ್ನು ತೆರೆಯಲು ಕ್ರಮ ಕೈಗೊಳ್ಳಬೇಕು.

**(ಈ) ಪುನರ್ ಬಳಕೆಗೆ ಪರಿವರ್ತಿಸಲಾಗದ ಜೈವಿಕವಾಗಿ ವಿಘಟನೆಗೊಳ್ಳದ ತ್ಯಾಜ್ಯದ ಸಂಸ್ಕರಣೆ-** ಈ ಉಪವಿಧಿಯ (10)ನೇ ಕಲಮಿನ ಪ್ರಕಾರ ಪುನರ್ ಬಳಕೆಗಾಗಿ ಪರಿವರ್ತಿಸಲಾಗದ ಜೈವಿಕವಾಗಿ ವಿಘಟನೆಗೊಳ್ಳದ ಮತ್ತು 1500 ಕಿ.ಕ್ಯಾಲೊರಿ / ಕೆಜಿ ಕ್ಯಾಲೊರಿಫಿಕ್ ಮೌಲ್ಯಕ್ಕಿಂತ ಹೆಚ್ಚು ಮೌಲ್ಯ ಹೊಂದಿರುವ ತ್ಯಾಜ್ಯಗಳನ್ನು ಸಹ-ಸಂಸ್ಕರಣೆಗೆ ಅಥವಾ ತ್ಯಾಜ್ಯದಿಂದ ತಿರಸ್ಕೃತ ಉತ್ಪಾದಿತ ಇಂಧನ (ಆರ್.ಡಿ.ಎಫ್) ಉತ್ಪಾದನೆಗೆ ಬಳಕೆ ಮಾಡಬೇಕು ಅಥವಾ ಘನತ್ಯಾಜ್ಯ ಆಧರಿತ ವಿದ್ಯುತ್ ಘಟಕಗಳಿಗೆ ಅಥವಾ ಸಿಮೆಂಟ್ ಕುಲುಮೆಗಳಿಗೆ ಕಚ್ಚಾವಸ್ತುವಾಗಿ ಉಪಯೋಗಿಸಲಾಗುವುದು. 1500 ಕಿ.ಕ್ಯಾಲೊರಿ/ಕೆಜಿಗಿಂತ ಕಡಿಮೆ ದಹನಕಾರಿ ಅಂಶ ಇರುವ ತ್ಯಾಜ್ಯವನ್ನು ಸಿಪಿಸಿಬಿ ಮತ್ತು/ಅಥವಾ ಕೆಎಸ್‌ಪಿಸಿಬಿಯ ಮಾರ್ಗದರ್ಶಿಯಂತೆ ಸಂಸ್ಕರಣೆ ಮಾಡಬೇಕು.

**(ಉ) ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷಗಳ ತ್ಯಾಜ್ಯದ ಸಂಸ್ಕರಣೆ:-** ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷಗಳ ತ್ಯಾಜ್ಯಗಳನ್ನು ಸಿ ಅಂಡ್ ಡಿ ನಿಯಮಾವಳಿಗಳ ಪ್ರಕಾರವೇ (ಬಿಬಿಎಂಪಿಯು ನೀಡಿದ ಪ್ರತ್ಯೇಕ ನಿರ್ದೇಶನಗಳೂ ಸೇರಿದಂತೆ) ಸಂಸ್ಕರಿಸಬೇಕು ಮತ್ತು ಸೂಕ್ತ ಸಂಸ್ಕರಣ ಕೇಂದ್ರಗಳು, ಭೂಭರ್ತಿ ಮತ್ತು/ಅಥವಾ ಇತರೇ ನಿಗದಿ ಮಾಡಿದ ಸ್ಥಳಗಳಿಗೆ ಸಾಗಿಸಬೇಕು.

**(ಊ) ವಧಾಗಾರದ ತ್ಯಾಜ್ಯ ಸಂಸ್ಕರಣೆ:-** ವಧಾಗಾರಗಳಿಂದ ಉತ್ಪಾದನೆಯಾದ ತ್ಯಾಜ್ಯವನ್ನು, ಕೋಳಿ ಮತ್ತು ಮೀನಿನ ಮಾರುಕಟ್ಟೆ ತ್ಯಾಜ್ಯಗಳನ್ನು ಸಂಸ್ಕರಿಸಬೇಕು ಅಥವಾ ಅವುಗಳು ಮರುಬಳಕೆ ಆಗುವಂತಹ ವಸ್ತುಗಳಾಗಿ ಪರಿವರ್ತಿಸಬೇಕು, ಗೊಬ್ಬರ ಮಾಡಬೇಕು ಅಥವಾ ಜೈವಿಕ ಅನಿಲ (ಬಯೋಗ್ಯಾಸ್) ಆಗಿ (ಬಯೋಮೆಥನೇಶನ್) ಪರಿವರ್ತಿಸಬೇಕು. ಅಥವಾ ನಿಯಂತ್ರಿತ ದಹನ ಅಥವಾ ಭಾರೀ ಆಳದಲ್ಲಿ ಹೂಳಬೇಕು. ಇಲ್ಲಿ ಮೊದಲೇ ವಿಧಿಸಲಾದ ವೈಜ್ಞಾನಿಕ ಮಾನದಂಡಗಳನ್ನು ಅನುಸರಿಸಬೇಕು ಮತ್ತು/ಅಥವಾ ಸಿಪಿಸಿಬಿ ಮತ್ತು/ಅಥವಾ ಕೆಎಸ್‌ಪಿಸಿಬಿ ಸೂಚಿಸಿದ ಇನ್ನಿತರ ಯಾವುದೇ ವಿಧಾನವನ್ನು ಅನುಸರಿಸಬೇಕು.

**(ಋ) ವಿಶೇಷ ತ್ಯಾಜ್ಯಗಳ ಸಂಸ್ಕರಣೆ:-** ಎಲೆಗಳ ಕಸ, ಎಳನೀರು ಚಿಪ್ಪು ಮತ್ತು ಕಬ್ಬಿನ ಸಿಪ್ಪೆ, ಸಗಣಿ, ಥರ್ಮಾಕೋಲ್‌ನಂತಹ ನಿರ್ದಿಷ್ಟ ಘನತ್ಯಾಜ್ಯಗಳನ್ನು ಸಂಸ್ಕರಣೆಗಾಗಿ ಎಲೆ ತ್ಯಾಜ್ಯ ಸಂಸ್ಕರಣೆ ಘಟಕಗಳು, ಎಳನೀರು ಚಿಪ್ಪು ಸಂಸ್ಕರಣೆ ಘಟಕಗಳು ಮತ್ತು ಇನ್ನಿತರ ಸೂಕ್ತ ಸಂಸ್ಕರಣಾ ಘಟಕಗಳಿಗೆ ಎಲ್ಲೆಲ್ಲಿ ಲಭ್ಯವಿದೆಯೋ ಅಲ್ಲಿ ಮತ್ತು ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಸಿಪಿಸಿಬಿ ಮತ್ತು/ಅಥವಾ ಕೆಎಸ್‌ಪಿಸಿಬಿ ಅನುಮತಿಸಿರುವಂತೆ ಸಂಸ್ಕರಿಸಬೇಕು.

**(ಎ) ನೈರ್ಮಲ್ಯ ಭೂಭರ್ತಿಗಳಲ್ಲಿನ ವಿಲೇವಾರಿ ಮತ್ತು ಶೂನ್ಯ ಭೂಭರ್ತಿಯ ಗುರಿ** - ಉಳಿಕೆಯ ಘನತ್ಯಾಜ್ಯ ಮತ್ತು ಸಂಸ್ಕರಿಸಲಾಗದ ಜಡ ವಸ್ತುಗಳನ್ನು ಸೆಕ್ಷನ್ 12ರ (ಅ) ರಿಂದ (ಋ) ರಲ್ಲಿ ನಮೂದಿಸಲಾದ ಯಾವುದೇ ವಿಧಾನಗಳಿಂದ ಸಂಸ್ಕರಿಸಲು ಸಾಧ್ಯವಾಗದೇ ಇದ್ದಲ್ಲಿ ಅವುಗಳನ್ನು ನೈರ್ಮಲ್ಯ (ಸ್ಯಾನಿಟರಿ) ಭೂಭರ್ತಿ ಸ್ಥಳಗಳಲ್ಲಿ ವೈಜ್ಞಾನಿಕವಾಗಿ ವಿಲೇ ಮಾಡಬೇಕು. ವಿವಿಧ ಸಂಸ್ಕರಣಾ ವ್ಯವಸ್ಥೆಯ ಉಳಿಕೆಯು ಸಿಪಿಸಿಬಿ ಮತ್ತು/ಅಥವಾ ಕೆಎಸ್‌ಪಿಸಿಬಿ ಸೂಚಿಸಿದ ನಿಯಮಗಳನ್ನು ಮೀರಬಾರದು. ಮೂಲದಲ್ಲಿ ಶೇ.100ರಷ್ಟು ತ್ಯಾಜ್ಯ ಬೇರ್ಪಡಿಸುವಿಕೆಯನ್ನು ಸಾಧಿಸುವವರೆಗೆ, ಘನತ್ಯಾಜ್ಯ ನಿರ್ವಹಣೆ ನಿಯಮಾವಳಿಗಳು 2016ರಂತೆ ನೈರ್ಮಲ್ಯ ಭೂಭರ್ತಿಗಳನ್ನು ನಿರ್ವಹಿಸಲು ಬಿಬಿಎಂಪಿಯು ದ್ವಿತೀಯ ಹಂತದಲ್ಲಿ ಘನತ್ಯಾಜ್ಯ ಸಂಸ್ಕರಣಾ ಔಯವಸ್ಥೆಗಳು/ಘಟಕಗಳು ಮತ್ತು ಭೂಭರ್ತಿ ಜಾಗಗಳಲ್ಲಿ ವಿಂಗಡಿಸಬೇಕು. ಸ್ಯಾನಿಟರಿ ಭೂಭರ್ತಿಗಳಲ್ಲಿ ಕೇವಲ ಕನಿಷ್ಟ ಪ್ರಮಾಣದ ತ್ಯಾಜ್ಯವನ್ನು ಮತ್ತು ಜಡತ್ಯಾಜ್ಯವನ್ನು ನೈರ್ಮಲ್ಯ ಭೂಭರ್ತಿ (ಶೂನ್ಯ ಭೂಭರ್ತಿ) ಗಳಲ್ಲಿ ವಿಲೇ ಮಾಡುವ ಗುರಿಯನ್ನು ಬಿಬಿಎಂಪಿ ಹೊಂದಿರಬೇಕು ಮತ್ತು ಇದನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಶ್ರಮವಹಿಸಬೇಕು.

**(ಏ) ವಿಕೇಂದ್ರೀಕೃತ ತ್ಯಾಜ್ಯ ಸಂಸ್ಕರಣೆ:** ವಾಣಿಜ್ಯ ಮತ್ತು ಸಾಂಸ್ಥಿಕ ಕ್ಯಾಂಪಸ್ ಗಳಲ್ಲಿ ಜೈವಿಕ ವಿಘಟನೀಯ ತ್ಯಾಜ್ಯವನ್ನು ಸ್ಥಳದಲ್ಲೇ ಸಂಸ್ಕರಿಸಲು ಮತ್ತು ಮನೆ ಬಾಗಿಲಿಗೆ ಸಂಗ್ರಹಿಸಿದ ತ್ಯಾಜ್ಯಕ್ಕಾಗಿ ವಿಕೇಂದ್ರಿಕೃತ ಬ್ಲಾಕ್ ಮಟ್ಟ ಮತ್ತು ವಾರ್ಡ್ ಮಟ್ಟದ ಸಂಸ್ಕರಣೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಅದೇ ರೀತಿ ಮನೆಯ ಮಟ್ಟದಲ್ಲಿ ಹಸಿ ತ್ಯಾಜ್ಯವನ್ನು ಮನೆಯ ಮಟ್ಟದಲ್ಲಿ ಕಾಂಪೋಸ್ಟಿಂಗ್ ಮಾಡಲು ಪ್ರೋತ್ಸಾಹಿಸಬೇಕು. ವಾರ್ಡ್ ಮಟ್ಟದಲ್ಲಿ ವಿಕೇಂದ್ರೀಕೃತ ಒಣತ್ಯಾಜ್ಯ ಸಂಗ್ರಹ ಕೇಂದ್ರಗಳ ಮೂಲಕ, ಜೈವಿಕ ವಿಘಟನೀಯವಲ್ಲದ ತ್ಯಾಜ್ಯವನ್ನು ಸಹ ವಿಕೇಂದ್ರೀಕೃತ ರೀತಿಯಲ್ಲಿ ಸಂಗ್ರಹಿಸಿ, ವಿಂಗಡಿಸಿ, ವಿಂಗಡಿಸಿ ಮರು ಬಳಕೆ ಮಾಡಬೇಕು.

**13. ಸಂಸ್ಕರಣಾ ವ್ಯವಸ್ಥೆಗಳು ಮತ್ತು ನೈರ್ಮಲ್ಯ ಭೂಭರ್ತಿಗಳ ಅಗತ್ಯತೆಗಳು-** (1) ಸಂಸ್ಕರಣಾ ವ್ಯವಸ್ಥೆಗಳು ಮತ್ತು ನೈರ್ಮಲ್ಯ ಭೂಭರ್ತಿಗಳು ಶಾಸನಬದ್ಧ ಪ್ರಾಧಿಕಾರಗಳು ನಿಗದಿಪಡಿಸಿದ ಮಟ್ಟವನ್ನು ಖಾತರಿಪಡಿಸಿಕೊಳ್ಳಬೇಕು. ತ್ಯಾಜ್ಯದ ಪ್ರಮಾಣವನ್ನು ತೂಕ ಮಾಡಲು ಮತ್ತು ದಾಖಲಿಸಲು ತೂಕದ ಸೇತುವೆ (ವೇಬ್ರಿಡ್ಜ್)/ತೂಕದ ಮಾಪಕಗಳು ಇರಬೇಕು. ಸಾಗಣಿಕಾ ವಾಹನಗಳ ಪ್ರವೇಶವನ್ನು ದಾಖಲಿಸಲು ಬೂಮ್ ಬ್ಯಾರಿಯರ್ ಗಳು, ಆರ್ಎಫ್ಐಡಿ ರೆಕಾರ್ಡರ್ ಗಳು, ಸಿಸಿಟಿವಿ ಮೊದಲಾದ ಸಾಧನಗಳನ್ನೂ ಅಳವಡಿಸಿರಬೇಕು.

(2) ಎಲ್ಲಾ ತಿರಸ್ಕೃತ, ಉಳಿಕೆ ಹಾಗೂ ಸಂಸ್ಕರಣೆಗೊಳ್ಳದ ಹೆಚ್ಚುವರಿ ತ್ಯಾಜ್ಯಗಳನ್ನು ಅಧಿಸೂಚಿತ ಸಂಗ್ರಹ ವ್ಯವಸ್ಥೆಗೆ ನೀಡಲು ಅನುಕೂಲವಾಗುವಂತೆ ತಾತ್ಕಾಲಿಕವಾಗಿ ಸಂಗ್ರಹಿಸಬೇಕು. ಇವುಗಳನ್ನು ಮುಚ್ಚಿದ ಧಾರಕಗಳಲ್ಲಿ ಹೊರಗೆ ಚೆಲ್ಲದಂತೆ, ಸಾರ್ವಜನಿಕರಿಗೆ ತೊಂದರೆ ಆಗದಂತೆ, ಕೊಳೆತ, ವಾಸನೆ ಬರದಂತೆ ಸುರಕ್ಷತಾ ಕ್ರಮಗಳೊಂದಿಗೆ ಸಂಗ್ರಹಣೆ ಮಾಡಬೇಕು. ವ್ಯವಸ್ಥಿತ ಕೇಂದ್ರಗಳು ನೀರು, ಶೌಚಾಲಯ, ವಿದ್ಯುಚ್ಛಕ್ತಿ ಸೇರಿದಂತೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು, ಸಾರ್ವಜನಿಕರಿಗೆ ಮತ್ತು ವ್ಯವಸ್ಥೆಯಲ್ಲಿ ನಿರ್ವಹಿಸುವ ಕಾರ್ಮಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು.

(3) ಕೆಎಸ್‌ಪಿಸಿಬಿ, ಸಿಪಿಸಿಬಿ, ಬಿಬಿಎಂಪಿ ಮತ್ತು/ಅಥವಾ ಸಂಬಂಧಿಸಿದ ಪ್ರಾಧಿಕಾರಗಳು ಸೂಚಿಸಿದಂತೆ ಅಥವಾ ಜಾರಿಯಲ್ಲಿರುವ ಯಾವುದೇ ಕಾನೂನುಗಳಿಗೆ ಅನುಗುಣವಾಗಿ ಎಲ್ಲಾ ಸಂಸ್ಕರಣಾ ವ್ಯವಸ್ಥೆಗಳು ಯಾವುದೇ ಹೆಚ್ಚುವರಿ ಮಾನದಂಡಗಳನ್ನು, ಸೂಚನೆಗಳನ್ನು ಮತ್ತು ನಿರ್ದೇಶನಗಳನ್ನು ಪಾಲಿಸಬೇಕು.

**14. ಘನತ್ಯಾಜ್ಯ ಸಂಸ್ಕರಣೆಗೆ ಸಂಬಂಧಿಸಿದಂತೆ ಮತ್ತು ಕೆಲ ತ್ಯಾಜ್ಯ ಉತ್ಪಾದಕರಿಗೆ ಇನ್ನಿತರ ಷರತ್ತುಗಳು** -(1) ಘನ ತ್ಯಾಜ್ಯ ನಿರ್ವಹಣೆ (ಎಸ್‌ಡಬ್ಲ್ಯೂಎಮ್) ಉಪವಿಧಿ 2016ರ ನಿಯಮ 4, ಉಪನಿಯಮ (6) (7) ಹಾಗೂ (8) ರ ಅನ್ವಯ ವಸತಿ ಸಂಘಟನೆಗಳು ಮತ್ತು ಮಾರುಕಟ್ಟೆ ಸಂಘಟನೆಗಳು 100ಕ್ಕೂ ಹೆಚ್ಚು ವಸತಿ ಘಟಕಗಳಿರುವ ಎಲ್ಲಾ ಗೇಟೆಡ್ ಸಮುದಾಯಗಳು, ಅಥವಾ ವಾಣಿಜ್ಯ ಸಂಸ್ಥೆಗಳು ಮತ್ತು 5000 ಚದರ ಮೀಟರ್ ಗೂ ಹೆಚ್ಚು ವಿಸ್ತೀರ್ಣದ ನಿವೇಶನಗಳು ಅಥವಾ 100 ಕೆಜಿಗೂ ಹೆಚ್ಚು ಜೈವಿಕ ವಿಘಟನೀಯ ತ್ಯಾಜ್ಯವನ್ನು ಪ್ರತಿದಿನ ಉತ್ಪಾದಿಸುವಂತಹವುಗಳು ತಮ್ಮ ನಿವೇಶನದ ಆವರಣದಲ್ಲೇ ಲಭ್ಯವಿರುವ ಸ್ಥಳಕ್ಕೆ ಅನುಗುಣವಾಗಿ ತಮ್ಮ ಜೈವಿಕವಾಗಿ ವಿಘಟಿಸಬಲ್ಲ ತ್ಯಾಜ್ಯವನ್ನು ಸಂಸ್ಕರಿಸಿ, ಮತ್ತುಗೊಬ್ಬರ (ಕಾಂಪೋಸ್ಟಿಂಗ್) ಅಥವಾ ಬಯೋಮಿಥೇನೇಷನ್ ಪ್ರಕ್ರಿಯೆಗೊಳಪಡಿಸಬೇಕು. ಆವರಣದೊಳಗೆ ಸ್ಥಳಾವಕಾಶವೇ ಇಲ್ಲದ ಸಂದರ್ಭಗಳಲ್ಲಿ ಮಾತ್ರ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರ

ಸೇವೆಗಳನ್ನು ಬಳಸಲು ಅವಕಾಶ ನೀಡಲಾಗುವುದು. ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಬೇಕು ಮತ್ತು ಪುನರ್ ಬಳಕೆಗೆ ಪರಿವರ್ತಿಸಬಹುದಾದ ವಸ್ತುಗಳನ್ನು ಅಧಿಕೃತ ಚಿಂದಿ ಆಯುವವರು ಹಾಗೂ ಪುನರ್ ಬಳಕೆ ಪರಿವರ್ತಕರಿಗೆ ಹಸ್ತಾಂತರಿಸಬೇಕು.

(2) ಈ ಉಪವಿಧಿಗಳ ಅಧಿಸೂಚನೆ ಬಳಿಕ ನಿರ್ಮಾಣವಾಗುವ ಎಲ್ಲಾ ಹೊಸ ಕಟ್ಟಡಗಳು, ವಿನ್ಯಾಸಗಳು, ಗೇಟೆಡ್ ಸಮುದಾಯಗಳು, 100ಕ್ಕೂ ಹೆಚ್ಚು ವಸತಿ ಘಟಕಗಳಿರುವ ಗುಂಪು ಮನೆಗಳು; ಕಾರ್ಪೊರೇಟ್ ಅಥವಾ ವಾಣಿಜ್ಯ ಸಂಕೀರ್ಣಗಳು, ಸಂಸ್ಥೆಗಳು ಮತ್ತು/ಅಥವಾ ಈ ಅಧಿಸೂಚನೆ ಬಳಿಕ ನಿರ್ಮಾಣಗೊಳ್ಳುವ 100 ಘಟಕಗಳಿಗೂ ಹೆಚ್ಚಿರುವ ಕಟ್ಟಡಗಳು ಅಥವಾ ಪ್ರತಿದಿನ 100 ಕೆಜಿಗೂ ಹೆಚ್ಚು ತ್ಯಾಜ್ಯ ಉತ್ಪಾದಿಸುವ ಅಥವಾ 5000ಚದರ ಮೀಟರ್ ಗಿಂತ ಹೆಚ್ಚು ನಿವೇಶನ ವಿಸ್ತೀರ್ಣವುಳ್ಳವುಗಳು; (i) ಉತ್ಪಾದನೆ ಆಗುವ ಮತ್ತು ಸಂಗ್ರಹಿಸಬೇಕಾದ ಅಂದಾಜು ಪ್ರಮಾಣದ ಘನತ್ಯಾಜ್ಯದ ಪ್ರಮಾಣಕ್ಕೆ ಅನುಗುಣವಾಗಿ ನಿವೇಶನದೊಳಗೆ ಸೂಕ್ತ ಸ್ಥಳವನ್ನು ನಿಗದಿಪಡಿಸಬೇಕು; ಮತ್ತು

(ii) ಗೊಬ್ಬರ ತಯಾರಿ, ಜೈವಿಕ-ಅನಿಲ ತಯಾರಿ (ಬಯೋಮಿಥನೇಶನ್) ಮತ್ತು/ಅಥವಾ ಕೆಎಸ್‌ಪಿಸಿಬಿ/ಸಿಪಿಸಿಬಿ ಅಥವಾ ಇನ್ನಾವುದೇ ಸೂಕ್ತ ಸರ್ಕಾರಿ ಪ್ರಾಧಿಕಾರಗಳು ಅನುಮೋದಿಸಿದ ತಂತ್ರಜ್ಞಾನಗಳಿಂದ ಜೈವಿಕವಾಗಿ ವಿಘಟನೆಗೊಳ್ಳಬಲ್ಲ (ಕೊಳೆತು ಹೋಗಬಲ್ಲ) ತ್ಯಾಜ್ಯವನ್ನು ಸ್ಥಳದಲ್ಲೇ ಸಂಸ್ಕರಿಸಲು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಬೇಕು.

(iii) ಪುನರ್ ಬಳಕೆಗೆ ಪರಿವರ್ತಿಸುವುದಕ್ಕಾಗಿ ಪುನರ್ ಬಳಕೆ ಉತ್ಪಾದಕರಿಗೆ / ಅನೌಪಚಾರಿಕವಾಗಿ ಚಿಂದಿ ಆಯುವವರ ಸಂಸ್ಥೆಗಳಿಗೆ ಕಳುಹಿಸುವುದಕ್ಕೂ ಮುನ್ನ ಸಂಗ್ರಹಿಸಲಾದ ಒಣ ತ್ಯಾಜ್ಯವನ್ನು ವಿಂಗಡಣೆ ಮತ್ತು ತಾತ್ಕಾಲಿಕವಾಗಿ ಸಂಗ್ರಹಿಸಿಡುವ ಸ್ಥಳವನ್ನು ನಿರ್ಮಾಣ ಮಾಡಬೇಕು.

(3) ಕೃಷಿ ಉತ್ಪಾದಕರ ಮಾರುಕಟ್ಟೆ ಸಮಿತಿ (ಎಪಿಎಂಸಿ) ನಿರ್ವಹಿಸುವ ಅಥವಾ ಅವರಿದಂದಲೇ ಸ್ಥಾಪನೆಗೊಂಡಿರುವ ಮಾರುಕಟ್ಟೆಗಳಲ್ಲಿ-

(i) ಇಲ್ಲಿನ ಜೈವಿಕವಾಗಿ ವಿಘಟಿಸಬಲ್ಲ ತ್ಯಾಜ್ಯಗಳನ್ನು ಗೊಬ್ಬರ ಮಾಡುವ ಮೂಲಕ, ಜೈವಿಕ ಅನಿಲ ಉತ್ಪಾದನೆ (ಬಯೋಮಿಥನೇಶನ್) ಅಥವಾ ಕೆಎಸ್‌ಪಿಸಿಬಿ / ಸಿಪಿಸಿಬಿ ಅನುಮೋದಿಸಿರುವ ಯಾವುದೇ ವಿಧಾನಗಳ ಮೂಲಕ ಅವರ ಆವರಣದಲ್ಲೇ (ಮೂಲ ಸ್ಥಾನದಲ್ಲೇ) ಕಡ್ಡಾಯವಾಗಿ ಸಂಸ್ಕರಿಸಬೇಕು.

(ii) ಜಾನುವಾರುಗಳ ಸೇವನೆಗೆ ಸುರಕ್ಷಿತವಾಗಿದ್ದಲ್ಲಿ ಅಂತಹ ಜೈವಿಕವಾಗಿ ವಿಘಟನೆಗೊಳ್ಳಬಲ್ಲ ತಾಜಾ ತ್ಯಾಜ್ಯಗಳನ್ನು ಪ್ರಾಣಿಗಳ ಆಹಾರವಾಗಿ ಬಳಕೆ ಮಾಡುವುದು, ಆರೋಗ್ಯಕರ ಮತ್ತು ನೋಡಲು ಸ್ವಚ್ಛವಾದ ರೀತಿಯಲ್ಲಿಇರಬೇಕು; ಮತ್ತು

(iii) ಇಲ್ಲಿನ ಜೈವಿಕವಾಗಿ ವಿಘಟನೆಗೊಳ್ಳದ ತ್ಯಾಜ್ಯವನ್ನು ಬಿಬಿಎಂಪಿ ಒದಗಿಸಿದ ವಾಹನಗಳಿಗೆ ನಿಗದಿ ಮಾಡಿದ ದಿನಾಂಕ ಮತ್ತು ಸಮಯದಲ್ಲಿ ಹಸ್ತಾಂತರಿಸುವುದು. ಜೈವಿಕವಾಗಿ ವಿಘಟನೆಗೊಳ್ಳದ ತ್ಯಾಜ್ಯವನ್ನು ಸಂಗ್ರಹಿಸಿದ್ದಕ್ಕಾಗಿ ಮತ್ತು ಸಂಸ್ಕರಣೆಗಾಗಿ ಇಂತಹ ಮಾರುಕಟ್ಟೆಗಳು ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕವನ್ನು ಅನುಸೂಚಿ VI ರಲ್ಲಿ ಪ್ರಕಟಿಸಿರುವಂತೆ ಪಾವತಿಸಬೇಕು.

(4) ಬೃಹತ್ ಪ್ರಮಾಣದ ತೋಟಗಾರಿಕೆ ಮತ್ತು ಉದ್ಯಾನಗಳ ತ್ಯಾಜ್ಯವನ್ನು ಉದ್ಯಾನಗಳಲ್ಲಿ, ತೋಟಗಳಲ್ಲಿ ಮತ್ತು ಅದೇ ತೆರನಾದ ಸೂಕ್ತ ಸ್ಥಳಗಳಲ್ಲಿ ಸಾಧ್ಯವಾದಷ್ಟು ಮೂಲ ಸ್ಥಳದಲ್ಲೇ ತ್ಯಾಜ್ಯ ಸಂಸ್ಕರಣೆಯನ್ನು ಬಿಬಿಎಂಪಿ ಅನುಷ್ಠಾನಗೊಳಿಸಬೇಕು. ಬಿಬಿಎಂಪಿ ಸ್ವಯಂ ಅಥವಾ/ಮತ್ತು ನೋಂದಾಯಿತ ಸೇವಾದಾರರು ಒದಗಿಸುವವರ ಮೂಲಕ ಸಣ್ಣ ಪ್ರಮಾಣದ ಗೊಬ್ಬರ ತಯಾರಿಕಾ ಘಟಕ, ಜೈವಿಕ ಅನಿಲ ಉತ್ಪಾದನಾ (ಬಯೋಮಿಥನೇಷನ್) ಘಟಕಗಳನ್ನು ಸಾರ್ವಜನಿಕ ಉದ್ಯಾನಗಳು, ಆಟದ ಮೈದಾನಗಳು, ಮನರಂಜನಾ ಮೈದಾನಗಳು, ಹೂದೋಟಗಳು, ಮಾರುಕಟ್ಟೆಗಳು, ಬಿಬಿಎಂಪಿ ಅಥವಾ ಇನ್ನಾವುದೇ ಸಾರ್ವಜನಿಕ ಪ್ರಾಧಿಕಾರ ಅಥವಾ ಸರ್ಕಾರಿ ಇಲಾಖೆ ಮಾಲಿಕತ್ವ ಹೊಂದಿರುವ ಮತ್ತು ನಿರ್ವಹಿಸುತ್ತಿರುವ ವಿಸ್ತಾರವಾದ ಬಯಲು ಪ್ರದೇಶಗಳಲ್ಲಿ ಸ್ಥಾಪಿಸಬೇಕು.

(5) ಘನತ್ಯಾಜ್ಯ ಸಂಸ್ಕರಣಾ ಕೇಂದ್ರಗಳು ಮತ್ತು ಸಂಬಂಧಿತ ಮೂಲಸೌಕರ್ಯಗಳ ನಿರ್ಮಾಣ, ಕಾರ್ಯಾಚರಣೆ ಹಾಗೂ ನಿರ್ವಹಣೆಯನ್ನು ಬಿಬಿಎಂಪಿಯು ಸ್ವಯಂ ಅಥವಾ ಇನ್ನಾವುದೇ ಏಜೆನ್ಸಿಗಳ ಮೂಲಕ ಅನುವು ಮಾಡಬೇಕು. ಈ ಮೂಲಕ ಸೂಕ್ತ ತಂತ್ರಜ್ಞಾನ ಅಳವಡಿಸುವುದರೊಂದಿಗೆ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಕಾಲಕಾಲಕ್ಕೆ ನೀಡಿದ ಮಾರ್ಗಸೂಚಿಗಳ ಮೂಲಕ ಮತ್ತು ಪರಿಸರ ಮತ್ತು ಅರಣ್ಯ ಸಚಿವಾಲಯವು ನಿಗದಿಪಡಿಸಿದ ಮಾನದಂಡಗಳ ಪ್ರಕಾರ ಘನತ್ಯಾಜ್ಯದ ವಿವಿಧ ಭಾಗಗಳ ಗರಿಷ್ಟ ಬಳಕೆ ಮಾಡುವುದರೊಂದಿಗೆ (ನಿರ್ಮಲ) ಸ್ಯಾನಿಟರಿ ಭೂಭರ್ತಿಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡುವ ಅವಲಂಭನೆಯನ್ನು ಗರಿಷ್ಟ ಪ್ರಮಾಣದಲ್ಲಿ ಕಡಿಮೆ ಮಾಡಬಹುದು.

(6) ನೋಂದಾಯಿತ ಸೇವಾದಾರರು/ಏಜೆನ್ಸಿಗಳು ಮತ್ತು/ಅಥವಾ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರು ಅನ್ವಯವಾಗುವಂತೆ ಜೈವಿಕವಾಗಿ ವಿಘಟಿಸಲಾಗದ ಮರುಬಳಕೆ ಮಾಡಬಹುದಾದ ತ್ಯಾಜ್ಯಗಳನ್ನು ವಿಲೇ ಮಾಡಲು ಅಥವಾ ಮಾರಾಟ ಮಾಡಲು ತ್ಯಾಜ್ಯ ವ್ಯಾಪಾರಿಗಳು ಅಥವಾ ಉಪವಿಧಿಗಳ ನಿಬಂಧನೆಗಳ ಅನ್ವಯ ಅಧಿಕೃತ ಪುನರ್ ಬಳಕೆಗೆ ಪರಿವರ್ತಿಸುವ ಘಟಕಗಳಿಗೆ ಅನುಮತಿ ನೀಡಬೇಕು ಮತ್ತು ಈ ಮಾರಾಟದಿಂದ ಬಂದ ಹಣವನ್ನು ಅವರೇ ಇಟ್ಟುಕೊಳ್ಳಲು ಹಕ್ಕು ನೀಡಬೇಕು.

(7) ಬಿಬಿಎಂಪಿಯ (ಅಥವಾ ಇವರಿಂದ ನೇಮಕಗೊಂಡ ನೋಂದಾಯಿತ ಸೇವಾದಾರರ) ಸೇವೆಯನ್ನು ಬಳಸದ ತ್ಯಾಜ್ಯ ಉತ್ಪಾದಕರುಗಳು ಈ ಉಪವಿಧಿಯ ಅನುಸೂಚಿ IIರ ಅನ್ವಯ ವಾರ್ಷಿಕ ಲೆಕ್ಕಪತ್ರವನ್ನು ಸಲ್ಲಿಸಬೇಕು. ತಮ್ಮ ಆವರಣದಲ್ಲಿ ಉತ್ಪತ್ತಿಯಾದ ತ್ಯಾಜ್ಯದ ಪ್ರಮಾಣ, ಇದರ ಸಂಗ್ರಹ, ಸಂಸ್ಕರಣೆ ಮತ್ತು ನಮೂನೆಯಲ್ಲಿ ವಿಲೇ ಮಾಡಿದ ವಿವರಗಳನ್ನು ಅನುಸೂಚಿ IIರಲ್ಲಿ ಸೂಚಿಸಿದಂತೆ ನಮೂನೆಯಲ್ಲಿ ಒದಗಿಸಬೇಕು.

(8) ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರು ಕೆಎಸ್‌ಪಿಸಿಬಿ ನೀಡಿದ ಅನುಮತಿ ದಾಖಲೆಯನ್ನು ಒದಗಿಸಿ ಸೇವೆ ಒದಗಿಸುವ ಮುನ್ನ ಬಿಬಿಎಂಪಿಯೊಂದಿಗೆ ನೋಂದಣಿ ಮಾಡಿಕೊಳ್ಳಬೇಕು ಮತ್ತು ಸೇವೆ ಒದಗಿಸುವವರು ಹಾಗೂ ನೋಂದಾಯಿತ / ಆಯ್ಕೆಯಾದ ಸೇವಾದಾರರು ಕೂಡಾ ತಮ್ಮ ಕಾರ್ಯಾಚರಣೆಗೆ ಸಂಬಂಧಪಟ್ಟಂತೆ ಅಂದರೆ ತಮ್ಮ ಕಾರ್ಯಾಚರಣೆಯ

ಪ್ರದೇಶ, ಸೇವೆ ನೀಡುತ್ತಿರುವ ಕಸ ಉತ್ಪಾದಕರು, ಸಂಗ್ರಹಿಸಿದ ತ್ಯಾಜ್ಯ ಮತ್ತು ಸಂಸ್ಕರಿಸಿದ ತ್ಯಾಜ್ಯ, ಸಂಗ್ರಹಿಸಿದ ಶುಲ್ಕ ಇತ್ಯಾದಿಗಳ ಕುರಿತು ಕಾಲಕಾಲಕ್ಕೆ ಲೆಕ್ಕಪತ್ರ ಸಲ್ಲಿಸಬೇಕು ಬಿಬಿಎಂಪಿಯು ಕಾಲಕಾಲಕ್ಕೆ ನೀಡಿದ ನಿರ್ದೇಶನವನ್ನು ಪಾಲಿಸಬೇಕು.

**15. ಘನತ್ಯಾಜ್ಯದ ವಿಲೇವಾರಿ ಮತ್ತು ಪರಂಪರಾಗತ ತ್ಯಾಜ್ಯ ನಿರ್ವಹಣೆ** (1) ಬಯೋಮೆಡಿಕಲ್ ತ್ಯಾಜ್ಯ, ಇ-ತ್ಯಾಜ್ಯ, ಅಪಾಯಕಾರಿ ರಾಸಾಯನಿಕಗಳು ಮತ್ತು ಕೈಗಾರಿಕಾ ತ್ಯಾಜ್ಯಗಳನ್ನು ಸಂಗ್ರಹಿಸಿ, ಸಂಸ್ಕರಿಸಿ ಪರಿಸರ ಸಂರಕ್ಷಣಾ ಕಾಯ್ದೆ, 1986ರಲ್ಲಿ ರಚನೆ ಮಾಡಲಾಗಿರುವ ನಿಯಮಾವಳಿಗಳಂತೆ ವಿಲೇವಾರಿ ಮಾಡಬೇಕು. ಬಿಬಿಎಂಪಿಯು ಈ ನಿರ್ದಿಷ್ಟ ವಿಭಾಗಗಳ ತ್ಯಾಜ್ಯಗಳ ನಿರ್ವಹಣೆಗೆ ಸಂಬಂಧಿಸಿದ ನಿಯಮಾವಳಿಗಳಿಗೆ ಅನ್ವಯವಾಗುವಂತೆ ಜವಾಬ್ದಾರರಾಗಿರುತ್ತಾರೆ.

(2) ಯಾವುದೇ ರೀತಿಯ ಘನತ್ಯಾಜ್ಯವನ್ನು ಯಾವುದೇ ಆವರಣಗಳಲ್ಲಿ, ಖಾಸಗಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆ ಬದಿಗಳೂ ಸೇರಿದಂತೆ ಖಾಲಿ ಜಾಗಗಳಲ್ಲಿ ಸುಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಈ ಉಪವಿಧಿಯ ಅನುಸೂಚಿಗೆ IIರ ಪ್ರಕಾರ ದಂಡ ವಿಧಿಸಲಾಗುವುದು. ಅದೇ ರೀತಿಯಾಗಿ ಯಾವುದೇ ತ್ಯಾಜ್ಯ ಉತ್ಪಾದಕರು ಘನತ್ಯಾಜ್ಯವನ್ನು ರಸ್ತೆಗಳಲ್ಲಿ, ಸಾರ್ವಜನಿಕ ಬಯಲು ಪ್ರದೇಶದಲ್ಲಾಗಲೀ ಅಥವಾ ಚರಂಡಿ ಅಥವಾ ಜಲರಾಶಿಗಳಲ್ಲಾಗಲೀ ಬಿಸಾಡುವುದಾಗಲೀ ಅಥವಾ ಹೂಳುವುದಾಗಲೀ ಮಾಡಕೂಡದು.

(3) ಬಿಬಿಎಂಪಿಯು ಸ್ವಯಂ ಅಥವಾ ಇನ್ನಾವುದೇ ಏಜೆನ್ಸಿಗಳ ಮೂಲಕ ನೈರ್ಮಲ್ಯ ಭೂ ಭರ್ತಿ ಸ್ಥಳವನ್ನು ಎಸ್‌ಡಬ್ಲ್ಯು.ಎಂ ನಿಯಮಾವಳಿ 2016ರ ಮಾನದಂಡಗಳ ಪ್ರಕಾರ ನಿರ್ಮಾಣ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡಬೇಕು ಮತ್ತು ಉಳಿಕೆ ತ್ಯಾಜ್ಯದ ವಿಲೇವಾರಿಗೆ ಸಹಾಯಕ ಮೂಲಸೌಕರ್ಯವನ್ನು ಕಲ್ಪಿಸಿ ಉಳಿಕೆ ತ್ಯಾಜ್ಯವನ್ನು (ಯಾವ ಘನತ್ಯಾಜ್ಯವನ್ನು ಉಪವಿಧಿ 12ರ (ಎ) ರಿಂದ (ಜಿ) ರಂತೆ ಸಂಸ್ಕರಿಸಲು ಸಾಧ್ಯವಿಲ್ಲವೋ) ಮತ್ತು ಜಡ ತ್ಯಾಜ್ಯಗಳನ್ನು ವಿಲೇಗೊಳಿಸಬೇಕು.

(4) ಬಿಬಿಎಂಪಿಯು ಎಲ್ಲಾ ಹಳೆಯ ತ್ಯಾಜ್ಯ ಸುರಿಯುವ / ವಿಲೇ ಮಾಡುವ ಬಯಲು ಪ್ರದೇಶ / ಸ್ಥಳಗಳನ್ನು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಇಂತಹ ತ್ಯಾಜ್ಯ ಸುರಿಯುವ ಸ್ಥಳಗಳ ತನಿಖೆ ನಡೆಸಿ ವಿಶ್ಲೇಷಿಸಬೇಕು. ಅವುಗಳ ಸಂಭಾವ್ಯ ಜೈವಿಕ ಗಣಿಗಾರಿಕೆ (ಬಯೋಮೈನಿಂಗ್), ಮತ್ತು ಜೈವಿಕ ಪರಿಹಾರ ಹಾಗೂ ಯಾವುದು ಕಾರ್ಯಸಾಧ್ಯವೋ ಈ ಪ್ರದೇಶಗಳಲ್ಲಿ ಜೈವಿಕ ಗಣಿಗಾರಿಕೆ ಅಥವಾ ಜೈವಿಕ ಪರಿಹಾರಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಮೂಲಕ ಎಸ್‌ಡಬ್ಲ್ಯು.ಎಮ್ ನಿಯಮಾವಳಿ 2016ರ ನಿಯಮ 15 (ಝಡ್‌ಜೆ)ಲ್ಲಿ ಸೂಚಿಸಿರುವಂತೆ ಪರಂಪರಾಗತ ತ್ಯಾಜ್ಯದ ನಿರ್ವಹಣೆಯ ಬದ್ಧತೆಯ ಭಾಗವಾಗಿ ಈ ಕ್ರಮ ಅಗತ್ಯವಾಗಿದೆ.

(5) ಕಸ ಸುರಿಯುವ ಪ್ರದೇಶದಲ್ಲಿ ಜೈವಿಕ ಗಣಿಗಾರಿಕೆ ಅಥವಾ ಜೈವಿಕ ಪರಿಹಾರ ಸಾಧ್ಯವಾಗದೇ ಹೋದಲ್ಲಿ ಇವುಗಳನ್ನು ಪರಿಸರಕ್ಕೆ ಮತ್ತಷ್ಟು ಹಾನಿಯಾಗದಂತೆ ತಡೆಯಲು ಎಸ್‌ಡಬ್ಲ್ಯು.ಎಮ್ ನಿಯಮಾವಳಿ 2016ರ ನಿಯಮ15 (ಝಡ್‌ಕೆ)ನಂತೆ ವೈಜ್ಞಾನಿಕವಾಗಿ ಮುಚ್ಚಬೇಕು (ಕ್ಯಾಪಿಂಗ್). ಈ ಉಪವಿಧಿ ಅಧಿಸೂಚನೆಗೊಂಡ ಮೂರು ವರ್ಷಗಳ ಕಾಲಾವಧಿಯೊಳಗೆ ಎಲ್ಲ ಹಳೆಯ ಮತ್ತು ವರ್ಜಿತ ತ್ಯಾಜ್ಯ ಸುರಿಯುವ ಪ್ರದೇಶಗಳ ಜೈವಿಕ ಪರಿಹಾರ ಅಥವಾ ಮುಚ್ಚುವುದನ್ನು ಕಾರ್ಯಗತಗೊಳಿಸಬೇಕು.

## ಅಧ್ಯಾಯ V

## ಪೌರ ಕಾರ್ಮಿಕರ ಕಲ್ಯಾಣ ಮತ್ತುಅನೌಪಚಾರಿಕ ವಲಯದ ಸಮನ್ವಯತೆ

**16. ಕಲ್ಯಾಣ, ಔದ್ಯೋಗಿಕ ಸುರಕ್ಷತೆ ಮತ್ತು ಪೌರಕಾರ್ಮಿಕರು ಮತ್ತು ಇತರ ಸಿಬ್ಬಂದಿಗೆ ತರಬೇತಿ-**

**(1) ಕಲ್ಯಾಣ ಕ್ರಮಗಳು:-**

(i) ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಎಲ್ಲ ಪೌರಕಾರ್ಮಿಕರು ಮತ್ತು ಇತರೇ ಅರ್ಹ ಕೆಲಸಗಾರರಿಗೆ ಬಿಬಿಎಂಪಿಯು ಗುರುತಿನ ಚೀಟಿ ನೀಡಬೇಕು.

(ii) ತ್ಯಾಜ್ಯ ನಿರ್ವಹಣಾ ವಲಯದಲ್ಲಿ ಕೆಲಸ ಮಾಡುವ ಬೀದಿ ಗುಡಿಸುವವರು ಅಥವಾ ಪೌರಕಾರ್ಮಿಕರು ಮತ್ತು ಇತರ ಅರ್ಹ ತ್ಯಾಜ್ಯ ನಿರ್ವಹಣಾ ಕಾರ್ಮಿಕರಿಗೆ ವೇತನ, ಕೆಲಸದ ಅವಧಿ, ರಜೆಗಳು, ಶಾಸನಾತ್ಮಕ ಸೌಲಭ್ಯಗಳಾದ ಭವಿಷ್ಯ ನಿಧಿ, ಕಾರ್ಮಿಕರ ರಾಜ್ಯ ವಿಮೆ ಮತ್ತು ಹೆರಿಗೆ ಭತ್ಯೆಗಳಿಗೆ ಸಂಬಂಧಿಸಿದಂತೆ ಅನ್ವಯವಾಗುವ ಎಲ್ಲಾ ಕಾರ್ಮಿಕ ಮತ್ತು ಕಲ್ಯಾಣ ನಿಬಂಧನೆಗಳು ಮತ್ತು ಯೋಜನೆಗಳನ್ನು ನೀಡುವುದನ್ನು ಬಿಬಿಎಂಪಿ ಖಾತರಿಪಡಿಸಬೇಕು. ಬೀದಿ ಗುಡಿಸುವವರು ಅಥವಾ ಪೌರಕಾರ್ಮಿಕರಿಗೆ ಬಿಬಿಎಂಪಿಯು ನೇರವಾಗಿ ವೇತನ ಪಾವತಿ ಮಾಡಬೇಕು.

(iii) ತ್ಯಾಜ್ಯ ನಿರ್ವಹಣಾ ವಲಯದಲ್ಲಿ ಕೆಲಸ ಮಾಡುವ ಅರ್ಹ ತ್ಯಾಜ್ಯ ನಿರ್ವಹಣಾ ಕಾರ್ಮಿಕರು ಮತ್ತು ಪೌರಕಾರ್ಮಿಕರ ಉದ್ಯೋಗ ಸಂಬಂಧಿ ರೋಗಗಳಿಗೆ ಚಿಕಿತ್ಸೆ ನೀಡಲು ವೈದ್ಯಕೀಯ ತಪಾಸಣೆಯನ್ನು ಕಾಲಕಾಲಕ್ಕೆ ಮಾಡುತ್ತಿರಬೇಕು. ಇದರಲ್ಲಿ ಶ್ವಾಸಕೋಶ ಸಂಬಂಧಿ ಅಂಗಾಂಗಗಳ ತಪಾಸಣೆ ಮತ್ತು ಚರ್ಮದ ಗಾಯಗಳಿಗೆ ಚಿಕಿತ್ಸೆ ಮತ್ತುಇತರ ಉದ್ಯೋಗ ಹಾಗೂ ಜೀವನ ಕ್ರಮದಿಂದ ಬರುವ ರೋಗಗಳಿಗೆ ಚಿಕಿತ್ಸೆಕೂಡ ಸೇರಿರಬೇಕು.

(iv) ಸೇವಾ ಅವಧಿಯಲ್ಲಿ ಯಾವುದೇ ರೀತಿಯ ಗಾಯ ಅಥವಾ ಸಾವು ಸಂಭವಿಸಿದರೆ ಬಿಬಿಎಂಪಿ ನಿರ್ಧರಿಸಿದಂತೆ ಪೌರಕಾರ್ಮಿಕರು ಸೂಕ್ತ ಹಣಕಾಸಿನ ಪರಿಹಾರಕ್ಕೆ ಅರ್ಹರಾಗಿರುತ್ತಾರೆ. ಆದರೆ ಯಾವುದೇ ಸೇವಾ ಗುತ್ತಿಗೆ ಅಡಿಯಲ್ಲಿ ಕೆಲಸ ಮಾಡುತ್ತಿರುವ ತ್ಯಾಜ್ಯ ನಿರ್ವಹಣಾ ಕಾರ್ಮಿಕರಿಗೆ ಸೇವಾ ಪೂರೈಕೆದಾರರು ಬಿಬಿಎಂಪಿ ಪ್ರಸ್ತಾವನೆಯಂತೆ ಸಮರ್ಪಕವಾದ ಪರಿಹಾರ ಒದಗಿಸಲು ಬದ್ಧವಿರಬೇಕು.

**(2) ಸುರಕ್ಷಾ ಸಾಧನಗಳು ಹಾಗೂ ಇನ್ನಿತರ ಸೌಲಭ್ಯಗಳು:**

(i) ತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರಿಗೆ, ಇತರೆ ಅರ್ಹ ಕಾರ್ಮಿಕರನ್ನು ಒಳಗೊಂಡಂತೆ ಪೌರಕಾರ್ಮಿಕರಿಗೆ ಎರಡು ಜೊತೆ ಸಮವಸ್ತ್ರ, ಸುರಕ್ಷಾ ಪಾದರಕ್ಷೆ, ಪ್ರತಿಫಲನವುಳ್ಳ ಮೇಲಂಗಿ (ಜಾಕೆಟ್) ಹಾಗೂ ರೈನ್ ಕೋಟ್‌ಗಳನ್ನು ವರ್ಷಕ್ಕೊಂದು ಬಾರಿ ಮತ್ತು ಕೈಗವಸು, ಮುಖವಾಡ (ಮಾಸ್ಕ್) ಹಾಗೂ ಇತರ ಸೂಕ್ತ ವೈಯಕ್ತಿಕ ಸುರಕ್ಷಾ

ಸಾಧನಗಳನ್ನು ಕನಿಷ್ಟ ಎರಡು ತಿಂಗಳಿಗೊಂದು ಬಾರಿ ನೀಡುವ ಸೌಲಭ್ಯವನ್ನು ಬಿಬಿಎಂಪಿ ಖಾತರಿ ಮಾಡಬೇಕು. ತ್ಯಾಜ್ಯ ನಿರ್ವಹಣೆಗಾಗಿ ಕೆಲಸಗಾರರನ್ನು ತೊಡಗಿಸಿಕೊಳ್ಳುವ ಎಲ್ಲ ನೋಂದಾಯಿತ ಸೇವಾದಾರರು ಕೂಡ ಇಂತಹ ಅನುಪಾಲನೆ ಮಾಡುವುದನ್ನು ಬಿಬಿಎಂಪಿ ಜಾರಿಗೊಳಿಸಬೇಕು.

(ii) ಬಿಬಿಎಂಪಿಯು ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಎಲ್ಲ ಪೌರಕಾರ್ಮಿಕರು ಮತ್ತು ಇತರೇ ಅರ್ಹ ಕೆಲಸಗಾರರಿಗೆ ಕುಡಿಯುವ ನೀರು, ಶೌಚಾಲಯ, ಬದಲಾಯಿಸಲು ಕೊಠಡಿ ಮತ್ತು ಪ್ರಾಥಮಿಕ ಚಿಕಿತ್ಸಾ ವ್ಯವಸ್ಥೆಗಳನ್ನು ನೀಡಬೇಕು.

**(3) ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ:**-ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಕೊಂಡಿರುವ ಪೌರಕಾರ್ಮಿಕರು ಮತ್ತು ತನ್ನ ಇತರ ಕಾರ್ಮಿಕರಿಗೆ ತಿಳುವಳಿಕೆ ನೀಡಲು ಬಿಬಿಎಂಪಿ ಪ್ರತಿಷ್ಠಿತ ಸಂಸ್ಥೆಗಳು ಅಥವಾ ಸರ್ಕಾರಿ ಏಜೆನ್ಸಿಗಳಿಂದ ತರಬೇತಿಯನ್ನು ನೀಡಬೇಕು. ಘನತ್ಯಾಜ್ಯ ಬೇರ್ಪಡಿಸುವ ವಿಧಾನದಲ್ಲಿ ಸಂಗ್ರಹ ಮತ್ತು ಸಾಗಾಟಣೆ, ಎಸ್‌ಡಬ್ಲ್ಯುಎಂ ನಿಯಮಗಳು-2016ರ ಮತ್ತು ಉಪ-ವಿಧಿಗಳ ಅಡಿಯಲ್ಲಿ ಘನ ತ್ಯಾಜ್ಯದ ಸಂಸ್ಕರಣೆ ಮತ್ತು ವಿಲೇವಾರಿ ಮಾಡುವುದು. ವೈಯಕ್ತಿಕ ರಕ್ಷಣಾ ಸಾಧನಗಳು, ಉದ್ಯೋಗ ಸಂಬಂಧಿ ಆರೋಗ್ಯ ಮತ್ತು ಸುರಕ್ಷತಾ ಹಾಗೂ ಪರಿಸರ ಮತ್ತು ಸುರಕ್ಷತಾ ಮಾನದಂಡಗಳು ಮುಂತಾದ ವಿಚಾರಗಳ ಬಗೆಗೆ ತರಬೇತಿ ನೀಡಬೇಕು.

**17. ಅನೌಪಚಾರಿಕ ವಲಯದ ಕಾರ್ಮಿಕರ ಸಮನ್ವಯತೆ :-**

(1) ಗುರುತಿನ ಚೀಟಿಗಳ ವಿತರಣೆ: ತ್ಯಾಜ್ಯ ಆಯುವವರನ್ನು (ಚಿಂದಿ ಆಯುವವರು) ಗುರುತಿಸುವ ಸಲುವಾಗಿ ಅವರಿಗೆ ಗುರುತಿನ ಚೀಟಿಗಳನ್ನು ಬಿಬಿಎಂಪಿ ಖುದ್ದಾಗಿ ಅಥವಾ ನೇಮಕ ಮಾಡಿದ ಏಜೆನ್ಸಿ ಮೂಲಕ ಸಮೀಕ್ಷೆ ನಡೆಸಬೇಕು ಮತ್ತು ಹಾಗೆ ಗುರುತಿಸಿದ ಚಿಂದಿ ಆಯುವವರಿಗೆ ಗುರುತಿನ ಚೀಟಿಗಳನ್ನು ವಿತರಿಸಬೇಕು. ತನ್ನ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚಿಂದಿ ಆಯುವವರ ದಾಖಲೆಯನ್ನು ಬಿಬಿಎಂಪಿಯು ನಿರ್ವಹಿಸಬೇಕು.

(2) ಘನತ್ಯಾಜ್ಯ ನಿರ್ವಹಣಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು: ಘನತ್ಯಾಜ್ಯ ನಿರ್ವಹಣೆಯನ್ನುಇನ್ನಷ್ಟು ಸುಗಮಗೊಳಿಸಲು ಮತ್ತು ನಿಯಮಬದ್ಧಗೊಳಿಸಲು ಬಿಬಿಎಂಪಿ ಪ್ರಯತ್ನಗಳನ್ನು ಮಾಡಬೇಕು ಮತ್ತು ತ್ಯಾಜ್ಯ ನಿರ್ವಹಣೆ ಕಾರ್ಯದಲ್ಲಿ ತೊಡಗಿಕೊಂಡಿರುವ ಚಿಂದಿ ಆಯುವವರು, ತ್ಯಾಜ್ಯ ವ್ಯಾಪಾರಿಗಳು ಮತ್ತು ಅನೌಪಚಾರಿಕ ವಲಯದಲ್ಲಿ ತೊಡಗಿಕೊಂಡಿರುವವರು ಕೆಲಸದ ಪರಿಸ್ಥಿತಿಯನ್ನು ಸುಧಾರಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ಆದ್ಯತೆ ನೀಡಬೇಕು ಹಾಗೂ ಘನತ್ಯಾಜ್ಯ ನಿರ್ವಹಣೆಯಲ್ಲಿ ಸಮನ್ವಯಗೊಳಿಸಬೇಕು. ಡಿಡಬ್ಲ್ಯುಸಿಸಿಗಳು ಮತ್ತು ತ್ಯಾಜ್ಯ ಮರಳಿ ಪಡೆಯುವ ಸೌಲಭ್ಯಗಳ ಮೂಲಕ ಚಿಂದಿ ಆಯುವವರಿಂದ ಜೈವಿಕವಾಗಿ ವಿಘಟನೆಯಾಗದ ತ್ಯಾಜ್ಯ (ವಿಶೇಷವಾಗಿ ನವೀಕರಿಸಲಾಗದ, ಜೈವಿಕವಾಗಿ ವಿಘಟಿಸಲಾಗದ ತ್ಯಾಜ್ಯ) ವನ್ನು ವಿತರಣೆ ಮತ್ತು ಮಾರಾಟ ಮಾಡಲು ಬಿಬಿಎಂಪಿ ಅನುವು ಮಾಡಿಕೊಡಬೇಕು.

(3) ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ:- ಪರಿಸರ, ಆರೋಗ್ಯ ಮತ್ತು ಸುರಕ್ಷತಾ ಗುಣಮಟ್ಟಗಳು, ಎಸ್‌ಡಬ್ಲ್ಯು ಎಂ ನಿಯಮಗಳು ಮತ್ತುಇತರ ನಿಬಂಧನೆಗಳ, ವಿಘಟನೆಯಾಗದ ಜೈವಿಕತ್ಯಾಜ್ಯದ ಅಧಿಕೃತ ಸಂಸ್ಕರಣೆ ಸೌಲಭ್ಯಗಳು ಮತ್ತಿತರ ವಿಷಯಗಳ ಕುರಿತು ಅನೌಪಚಾರಿಕ ತ್ಯಾಜ್ಯ ಸಂಗ್ರಾಹಕರಿಗೆ ಕಾಲಕಾಲಕ್ಕೆ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ ಕಾರ್ಯಗಳನ್ನು ಬಿಬಿಎಂಪಿಯು ಖುದ್ದಾಗಿ ತನ್ನ ಮೂಲಕ ಮತ್ತು / ಅಥವಾ ಹೆಸರಾಂತ ಅಧಿಸೂಚಿತ ಸೇವಾದಾರರ ಮೂಲಕ ಆಯೋಜಿಸಬೇಕು.

## ಅಧ್ಯಾಯ VI

## ಕಸ ಎಸೆಯುವುದು ಮತ್ತು ಸಾರ್ವಜನಿಕ ಉಪದ್ರವ

**18. ಕಸ ಎಸೆಯುವುದರ ನಿಷೇಧ ಮತ್ತು ಕಸದ ಡಬ್ಬಿಗಳಿಗೆ ಅವಕಾಶ:-**

(1) ಯಾವುದೇ ಸಾರ್ವಜನಿಕ, ಬಯಲು ಅಥವಾ ಖಾಲಿ ನಿವೇಶನದಲ್ಲಿ ಕಸ ಎಸೆಯುವುದು: (ಎ) ಈ ಉಪ-ನಿಯಮಗಳು, 1986ರ ಪರಿಸರ (ಸಂರಕ್ಷಣೆ) ಕಾಯ್ದೆ, 1976ರ ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆ, 2016ರ ಎಸ್‌ಡಬ್ಲ್ಯು ಎಂ ನಿಯಮಗಳು ಅಥವಾ ಅನ್ವಯವಾಗುವ ಇತರ ಯಾವುದೇ ಕಾಯ್ದೆ ಅಥವಾ ಆಗಿಂದಾಗ್ಯೆ ರೂಪಿಸಲಾಗಿರುವ ಮಾರ್ಗಸೂಚಿಗಳ ಅಡಿಯಲ್ಲಿ ನೀಡಲಾಗಿರುವ ಅವಕಾಶಗಳನ್ನು ಹೊರತುಪಡಿಸಿದರೆ, ಯಾವುದೇ ವ್ಯಕ್ತಿಯು ಯಾವುದೇ ಘನತ್ಯಾಜ್ಯವನ್ನು ಯಾವುದೇ ರೂಪದ ಜಲರಾಶಿ (ನೈಸರ್ಗಿಕ ಅಥವಾ ಮಾನವ ನಿರ್ಮಿತ) ಸೇರಿದಂತೆ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಎಸೆಯುವುದು, ರಾಶಿ ಹಾಕುವುದು ಮಾಡುವಂತಿಲ್ಲ ಅಥವಾ ಎಸೆಯಲು ಅಥವಾ ರಾಶಿ ಹಾಕಲು ಕಾರಣರಾಗುವಂತಿಲ್ಲ.

(ಬಿ) ಖಾಲಿ ನಿವೇಶನವನ್ನು ಸ್ವಚ್ಛವಾಗಿ ಮತ್ತು ಆರೋಗ್ಯಕರ ರೀತಿಯಲ್ಲಿ ನಿರ್ವಹಿಸುವುದನ್ನು ಖಾತರಿ ಪಡಿಸುವುದು ಯಾವುದೇ ಖಾಲಿ ನಿವೇಶನದ ಮಾಲಿಕನ ಜವಾಬ್ದಾರಿಯಾಗಿದೆ.

(ಸಿ) ಸಂಬಂಧಿಸಿದ ತ್ಯಾಜ್ಯ ಉತ್ಪಾದಕರು ಮತ್ತು / ಅಥವಾ ಖಾಲಿ ನಿವೇಶನದ ಮಾಲಿಕರಿಗೆ ಬಿಬಿಎಂಪಿ ನೋಟೀಸ್ ಜಾರಿ ಮಾಡಿ, ಪ್ರಕರಣಕ್ಕೆ ಅನ್ವಯವಾಗುವಂತೆ, ಅಂತಹ ಆವರಣದಲ್ಲಿರುವ ಯಾವುದೇ ತ್ಯಾಜ್ಯವನ್ನು ನೋಟೀಸ್‌ನಲ್ಲಿ ಸೂಚಿಸಿರುವಂತೆ ಮತ್ತು ಸೂಚಿಸಿರುವ ಕಾಲಾವಧಿಯಲ್ಲಿಅವರು ತೆರವು (ಖಾಲಿ) ಮಾಡಬೇಕು (ಸ್ವಚ್ಛಗೊಳಿಸಬೇಕು).

(ಡಿ) ನೋಟೀಸ್ ನೀಡಲಾದ ವ್ಯಕ್ತಿಯು ಒಂದೊಮ್ಮೆ ನೋಟೀಸ್‌ನಲ್ಲಿ ನೀಡಲಾದ ಅಗತ್ಯತೆಗಳನ್ನು ಅನುಪಾಲನೆ ಮಾಡುವಲ್ಲಿ ವಿಫಲವಾದರೆ ಬಿಬಿಎಂಪಿಯು ಈ ಕೆಳಗಿನ ಎಲ್ಲಾಅಥವಾ ಯಾವುದೇ ಕ್ರಮ ಕೈಗೊಳ್ಳಬಹುದು:

(i) ಆವರಣವನ್ನು ಪ್ರವೇಶಿಸಬಹುದು ಮತ್ತು ತ್ಯಾಜ್ಯವನ್ನು ತೆರವುಗೊಳಿಸಬಹುದು ಮತ್ತು ಹಾಗೇ ಮಾಡಿರುವುದಕ್ಕೆ ತಗುಲಿದ ವೆಚ್ಚವನ್ನು ವ್ಯಕ್ತಿಯಿಂದ ವಸೂಲಿ ಮಾಡಬಹುದು ಅಥವಾ

(ii) ಈ ಉಪವಿಧಿಗಳಂತೆ ಪ್ರಕರಣಕ್ಕೆಅನುಗುಣವಾಗಿ ದಂಡ ವಿಧಿಸಬಹುದು.

(2) ವಾಹನಗಳಿಂದ ಕಸ ಎಸೆಯುವುದು: ಚಾಲಕನಾಗಲಿ ಅಥವಾ ಪ್ರಯಾಣಿಕನಾಗಲಿ ವಾಹನದಿಂದ ಯಾರೂ ಯಾವುದೇ ಬೀದಿಯ ಮೇಲೆ, ರಸ್ತೆ, ಪಾದಾಚಾರಿ ಮಾರ್ಗದ ಮೇಲೆ, ಮೈದಾನದಲ್ಲಿ, ಉದ್ಯಾನದಲ್ಲಿ, ಟ್ರಾಫಿಕ್ ದ್ವೀಪದಲ್ಲಿ ಅಥವಾ ಇನ್ನಿತರ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಕಸವನ್ನು ಎಸೆಯುವಂತಿಲ್ಲ.

(3) ಸರಕು ಸಾಗಾಟದ ವಾಹನಗಳಿಂದ ಕಸ ತುಳುಕುವುದು: ಯಾವುದೇ ವಾಹನದಲ್ಲಿ ತುಂಬಿದ ಕಸ ಅಥವಾ ಇನ್ನಿತರ ಯಾವುದೇ ಸರಕು ಯಾವುದೇ ರಸ್ತೆ, ಹಾದಿಬದಿ, ಟ್ರಾಫಿಕ್ ದ್ವೀಪ, ಮೈದಾನ, ಉದ್ಯಾನ, ಅಥವಾ ಇನ್ನಿತರ ಯಾವುದೇ ಸ್ಥಳದ ಮೇಲೆ ತುಳುಕದಂತೆ ನಿರ್ಮಿಸದೆ ಇರುವ ಟ್ರಕ್ ಅಥವಾ ಇನ್ನಿತರ ಯಾವುದೇ ಸರಕು ಸಾಗಣೆ ವಾಹನಗಳನ್ನು ಯಾವುದೇ ವ್ಯಕ್ತಿಯು ಚಾಲನೆ ಅಥವಾ ಕೊಂಡೊಯ್ಯುವುದಾಗಲಿ ಮಾಡುವಂತಿಲ್ಲ.

(4) ಸಾಕು ಪ್ರಾಣಿಗಳಿಂದ ಉಂಟಾಗುವ ಉಪದ್ರವ: ಬೀದಿಬದಿ ಅಥವಾ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಸಾಕು ಪ್ರಾಣಿ ಗಲೀಜು ಮಾಡಿದರೆ ಅದನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸುವುದು ಮತ್ತು ಅಂತಹ ತ್ಯಾಜ್ಯವನ್ನು ಸೂಕ್ತವಾಗಿ ವಿಲೇವಾರಿ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಯಾವುದೇ ಸಾಕು ಪ್ರಾಣಿಯ ಮಾಲೀಕನ ಜವಾಬ್ದಾರಿಯಾಗಿರುತ್ತದೆ.

(5) ಸಾರ್ವಜನಿಕ ಸ್ಥಳಗಳಲ್ಲಿ ಕಸದ ಡಬ್ಬಿಗಳು ಮತ್ತು ತ್ಯಾಜ್ಯ ಪಡೆಯುವ ನೆರವುದಾಣಗಳು (ಕಿಯೋಸ್ಕ್): ಬಿಬಿಎಂಪಿಯು ರಸ್ತೆ (ವಾಣಿಜ್ಯ ಮತ್ತು ಹೆಚ್ಚು ಜನಸಂದಣಿ ಇರುವ ಪ್ರದೇಶ), ಗಾರ್ಡನ್‌ಗಳು, ಪಾರ್ಕ್‌ಗಳು ಮತ್ತು ಇಂತಹ ಸಾರ್ವಜನಿಕ ಸ್ಥಳಗಳಲ್ಲಿ ಸೂಕ್ತವಾದ ರೀತಿಯಲ್ಲಿ ಕಸದ ಡಬ್ಬಿಗಳನ್ನು ಒದಗಿಸುವುದು ಮತ್ತು ಅವನ್ನು ನಿರ್ವಹಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಬಿಬಿಎಂಪಿಯು ಖುದ್ದಾಗಿ ಅಥವಾ ಯಾವುದೇ ನೊಂದಾಯಿತ ಸೇವಾದಾರರ ಮೂಲಕ ಈ ಕೆಲಸವನ್ನು ಮಾಡಬಹುದು. ಪ್ರತಿಯೊಂದು ಕಸದ ತೊಟ್ಟಿಗಳನ್ನು ಜೈವಿಕವಾಗಿ ವಿಘಟನೆಯಾಗುವ ಮತ್ತು ಜೈವಿಕವಾಗಿ ವಿಘಟನೆಯಾಗದ ತ್ಯಾಜ್ಯಕ್ಕಾಗಿ ಪ್ರತ್ಯೇಕಗೊಳಿಸಬೇಕಾಗುತ್ತದೆ. ಇಂತಹ ಕಸದ ತೊಟ್ಟಿಗಳು / ಬುಟ್ಟಿಗಳು ಕಸದಿಂದ ತುಂಬಿ ತುಳುಕದಂತೆ ಅಥವಾ ಸುತ್ತಲಿನ ಪರಿಸರಕ್ಕೆ ಹಾನಿಯಾಗದಂತೆ ಮತ್ತುಚಿಂದಿ ಆಯುವವರು, ಬೀದಿ ನಾಯಿ, ಜಾನುವಾರುಗಳು, ಹಕ್ಕಿಗಳು ಚೆಲ್ಲಾಡದಂತೆ ಬಿಬಿಎಂಪಿ ಮತ್ತು / ಅಥವಾ ನೊಂದಾಯಿತ ಸೇವಾದಾರರ ಎಚ್ಚರಿಕೆ ವಹಿಸಬೇಕಾಗುತ್ತದೆ. ಈ ಕಸದ ಬುಟ್ಟಿಗಳು ಸಾಧ್ಯವಾದಷ್ಟು ಮಾನವ ನಿರ್ವಹಣೆಗೆ ಒಳಪಟ್ಟಿದ್ದಾಗಿರಬೇಕು ಮತ್ತು / ಅಥವಾ ಆರ್‌ಎಫ್‌ಐಡಿ (Radio Frequency Identification) ರೇಡಿಯೋ ತರಂಗಾಂತರ ಗುರುತಿಸುವಿಕೆ) ಅಥವಾ ಇನ್ನಿತರ ಯಾವುದೇ ಸೂಕ್ತ ತಂತ್ರಜ್ಞಾನದ ಮೂಲಕ ದೂರ ನಿಯಂತ್ರಣಕ್ಕೆ ಒಳಪಟ್ಟಿರಬೇಕು. ಇದರಿಂದ ತೊಟ್ಟಿಗಳಿಂದ ಕಸ ತುಂಬಿ ತುಳುಕುವುದು ಮತ್ತು ಅದು ಕಣ್ಣಿಗೆ ಕಾಣುವಂತೆ ಸ್ವಚ್ಛತೆಗೆ ಮತ್ತು ಸಾರ್ವಜನಿಕರ ಆರೋಗ್ಯಕ್ಕೆ ಧಕ್ಕೆಯಾಗುವುದನ್ನು ತಪ್ಪಿಸಬಹುದು. ಇದರ ಜೊತೆಗೆ ಇಂತಹ ತ್ಯಾಜ್ಯ ಅಥವಾ ಕಸವನ್ನು ಸ್ವೀಕರಿಸಲು ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಬೇರ್ಪಡಿಸಿದ ತ್ಯಾಜ್ಯ ಪಡೆಯಲು ಕೇಂದ್ರಗಳನ್ನು ಅಥವಾ ಕಸ ಕಿಯೋಸ್ಕ್‌ಗಳನ್ನು ಕಲ್ಪಿಸಬೇಕು.

**19. ಸಾರ್ವಜನಿಕ ಉಪದ್ರವ / ಪೀಡನೆಯ ನಿಷೇಧ:** (1) ಯಾವುದೇ ವ್ಯಕ್ತಿಯು ಉಗಿಯುವುದು, ಮೂತ್ರ ವಿಸರ್ಜನೆ, ಮಲವಿಸರ್ಜನೆ ಮಾಡುವುದು, ಪ್ರಾಣಿಗಳಿಗೆ / ಪಕ್ಷಿಗಳಿಗೆ ಆಹಾರ ನೀಡುವುದು ಅಥವಾ ಅವುಗಳು ಹಿಕ್ಕೆ ಹಾಕುವಂತೆ, ಗಲೀಜು ಮಾಡಲು ಅವಕಾಶ ನೀಡುವುದು ಅಥವಾ ಯಾವುದೇ ಸಂಬಂಧಪಟ್ಟ ಪ್ರಾಧಿಕಾರಗಳು ಇಂತಹ ಉದ್ದೇಶಕ್ಕೆ ಅನುಮತಿ ಮತ್ತು ಸಾರ್ವಜನಿಕ ಸೌಲಭ್ಯಗಳಿಗೆ ವಿಶೇಷ ವ್ಯವಸ್ಥೆ ಮಾಡಿರುವುದನ್ನು ಹೊರತುಪಡಿಸಿ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ಸಂಗ್ರಹಣಾಗಾರವನ್ನುಇಡುವುದು ಮುಂತಾದ ಸಾರ್ವಜನಿಕವಾಗಿ ಗಲೀಜು ಮಾಡುವುದನ್ನು ನಿರ್ಬಂಧಿಸಲಾಗಿದೆ. 2014ರ ಬೀದಿಬದಿ ವ್ಯಾಪಾರಿಗಳು (ಬೀದಿಬದಿ ವ್ಯಾಪಾರದ ನಿಯಂತ್ರಣ ಮತ್ತು ಜೀವನೋಪಾಯದ ಸಂರಕ್ಷಣೆ) ಕಾಯ್ದೆ ಪ್ರಕಾರ ಸೌಹಾರ್ದತೆಯನ್ನು ಕಾಪಾಡಲು ಸಾರ್ವಜನಿಕ ಉಪದ್ರವಕ್ಕೆ ಸಂಬಂಧಿಸಿದ ಉಪನಿಯಮಗಳಲ್ಲಿನ ಅವಕಾಶಗಳನ್ನು ಅನ್ವಯ ಮಾಡಿ ಜಾರಿಗೆ ತರಬೇಕಾಗುತ್ತದೆ. ಹೀಗಿದ್ದರೂ ಬೀದಿಬದಿ ವ್ಯಾಪಾರಸ್ಥರು ಸೇರಿದಂತೆ ಎಲ್ಲ ಉತ್ಪಾದಕರಿಗೂ ಎಸ್‌ಡಬ್ಲ್ಯೂಎಂ ನಿಯಮಾವಳಿ ನಿಯಮ (4) ರ ಅನ್ವಯ ತ್ಯಾಜ್ಯ ಉತ್ಪಾದಕರ ನಿಯಮಗಳು ಮತ್ತು ಜವಾಬ್ದಾರಿಗಳು, 2016 ಅನ್ವಯವಾಗುತ್ತವೆ.

(2) ಪೀಡನೆಯ ಶೋಧಕರ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಪ್ರೋತ್ಸಾಹನೆ ನೀಡಲು ಬಿಬಿಎಂಪಿಯು ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಬೇಕು, (i) ಅನುಸೂಚಿ VIIರಲ್ಲಿ ಸೂಚಿಸಿದಂತೆ ದಂಡ ವಿಧಿಸುವ ಪುಸ್ತಕಗಳು ಮತ್ತು ಕೈಯಲ್ಲಿ ಹಿಡಿಯುವ ಡಿಜಿಟಲ್ ಉಪಕರಣವನ್ನು ಬಳಸಿ ಸ್ಥಳದಲ್ಲಿಯೇ ದಂಡವನ್ನು ವಿಧಿಸುವ ಅಧಿಕಾರವನ್ನು ನೀಡಬೇಕು.

(ii) ಸೂಕ್ತ ಸಮವಸ್ತ್ರಗಳು, ವಾಹನಗಳು, ವಯರ್ ಲೆಸ್ ಸಾಧನಗಳು ಮತ್ತಿತರ; ಹಾಗೂ

(iii) ವಿಧಿಸಲಾದ ದಂಡಗಳ ಪ್ರಮಾಣಾನುಗುಣವಾಗಿ ಪ್ರೋತ್ಸಾಹಧನ ಅಥವಾ ಇನ್ನಿತರ ಪ್ರೋತ್ಸಾಹ ಕ್ರಮಗಳು.

(3) ಸಾರ್ವಜನಿಕ ಪೀಡನೆಯ ಶೋಧಕರ ನೇಮಕ ಮತ್ತು ಅವರಿಗೆ ಅಧಿಕಾರ ನೀಡುವ ಭಾಗವಾಗಿ ಬಿಬಿಎಂಪಿಯು ಪ್ರತಿಯೊಂದು ವಾರ್ಡ್ ಮತ್ತುಇತರ ಎಸ್‌ಡಬ್ಲ್ಯೂಎಂ ಸಂಸ್ಕರಣ ಮತ್ತು ವಿಲೇವಾರಿ ಕೇಂದ್ರಗಳಿಗೆ ಈ ಉಪವಿಧಿಗಳಂತೆ ಎಸ್‌ಡಬ್ಲ್ಯೂಎಂ ಮಾರ್ಷಲ್‌ಗಳನ್ನು ನಿಯೋಜಿಸಬೇಕು, ಇಂತಹ ಮಾರ್ಷಲ್‌ಗಳು ಸಾಮಾನ್ಯವಾಗಿ ಮಾಜಿ ಸೇನಾಧಿಕಾರಿಗಳು/ ಎನ್‌ಸಿಸಿ 'ಸಿ' ಸರ್ಟಿಫಿಕೆಟ್ ಹೊಂದಿದವರಾಗಿರಬೇಕು ಹಾಗೂ ಇವರುಗಳನ್ನು ಸೈನಿಕ್ ಬೋರ್ಡ್/ಮಾಜಿ ಸೇನಾಧಿಕಾರಿಗಳ ನೋಂದಾಯಿತ ಸಂಘಗಳ ಮೂಲಕ ಪಡೆಯಬೇಕು.

(4) ವಾರ್ಡ್ ಸಂಬಂಧಿ ಎಎಸ್‌ಡಬ್ಲ್ಯೂಎಂ ವಿಷಯಗಳು ಮತ್ತು ಕೇಂದ್ರ ಕಚೇರಿಯ ಎಸ್‌ಡಬ್ಲ್ಯೂಎಂ ಕೋಶದ ನಡುವೆ ಸಂಪರ್ಕ ಕಲ್ಪಿಸಲು ಮತ್ತು ಬೆಂಬಲವಾಗಿ ನಿಲ್ಲಲು ಬಿಬಿಎಂಪಿಯು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ದರ್ಜೆಗಿಂತ ಕಡಿಮೆ ಇಲ್ಲದವರನ್ನು ಪ್ರತಿ ವಾರ್ಡ್‌ನಲ್ಲಿ ಪ್ರಾತಿನಿಧಿಕ ಅಧಿಕಾರಿಯಾಗಿ ನೇಮಕ ಮಾಡಬೇಕು.

(5) (i) ಈ ಉಪವಿಧಿಯ ಅನುಸೂಚಿ VIIರಂತೆ ಸ್ಥಳದಲ್ಲೇ ದಂಡ ವಿಧಿಸುವುದು ಅಥವಾ ಶಿಕ್ಷಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಗಳು / ನಿಯೋಜಿತ ಪ್ರಾಧಿಕಾರಿಗಳಲ್ಲಿರಬೇಕು.

(ಎ) ಸಾರ್ವಜನಿಕ ಆರೋಗ್ಯ ಇಲಾಖೆಯ ಹಿರಿಯ ಆರೋಗ್ಯ ಪರಿವೀಕ್ಷಕರು (ಇನ್ಸ್‌ಪೆಕ್ಟರ್)

(ಬಿ) ಎಸ್‌ಡಬ್ಲ್ಯುಎಂ ಇಲಾಖೆಯ ಕಿರಿಯ ಆರೋಗ್ಯ ಪರಿವೀಕ್ಷಕರು (ಇನ್ಸ್‌ಪೆಕ್ಟರ್)

(ಸಿ) ಎಸ್‌ಡಬ್ಲ್ಯುಎಂ ಮಾರ್ಷಲ್‌ಗಳು

(ಡಿ) ವಾರ್ಡ್‌ನ ಎಸ್‌ಡಬ್ಲ್ಯುಎಂ ನೋಡಲ್ ಅಧಿಕಾರಿ

(ii) ಯಾವುದೇ ಸಾರ್ವಜನಿಕ ಆರೋಗ್ಯ ಇಲಾಖೆ ಅಥವಾ ಎಸ್‌ಡಬ್ಲ್ಯುಎಂ ಅಧಿಕಾರಿಯಾಗಿರುವ ಹಿರಿಯ ಆರೋಗ್ಯ ಪರಿವೀಕ್ಷಕರು (ಇನ್ಸ್‌ಪೆಕ್ಟರ್) ಅಥವಾ ಕಿರಿಯ ಆರೋಗ್ಯ ಪರಿವೀಕ್ಷಕರು (ಇನ್ಸ್‌ಪೆಕ್ಟರ್) ಯಿಂದ ಆರೋಗ್ಯಾಧಿಕಾರಿ ವರೆಗಿನ ದರ್ಜೆಯ ಅಥವಾ ವಲಯದ ಅಧೀಕ್ಷಕ ಅಭಿಯಂತರರು (ಸೂಪರಿಂಟೆಂಡಿಂಗ್ ಇಂಜಿನಿಯರ್) ಗಳಿಗೆ ಕೂಡ ಸ್ಥಳದಲ್ಲೇ ದಂಡ ಮತ್ತು ಶಿಕ್ಷೆ ವಿಧಿಸುವ ಅಧಿಕಾರ ನೀಡಬೇಕು.

(iii) ದಂಡದ ಮಟ್ಟವನ್ನು ಅನುಸೂಚಿ VIIರಲ್ಲಿ ಸೂಚಿಸಿರುವಂತೆ, ಹೆಚ್ಚಿನ ಅಪರಾಧಗಳಿಗೆ ದಂಡ ವಿಧಿಸುವ ಅಧಿಕಾರ, ರೂ.5.00ಲಕ್ಷ ಮೀರದಂತೆ (ಪ್ರತಿ ಪ್ರಕರಣದಲ್ಲಿ) ಗಂಭೀರ ಅಪರಾಧಗಳು ಮತ್ತು ಪುನರಾವರ್ತಿತ ಉಲ್ಲಂಘನೆದಾರರಿಗೆ ದಂಡ ವಿಧಿಸುವ ಅಧಿಕಾರಿಗಳು ಮತ್ತು ಉಪದ್ರವ ಪತ್ತೆದಾರರೊಂದಿಗೆ ಇರುತ್ತದೆ.

(6) ಯಾವುದೇ ಶಿಕ್ಷೆ/ದಂಡನೆ ವಿಧಿಸಿದ ಕುರಿತಂತೆ ಯಾವುದೇ ಮೇಲ್ಮನವಿಯನ್ನು ವಿಚಾರಣೆ ನಡೆಸುವ ಅಧಿಕಾರ ಆ ವಲಯದ ಜಂಟಿ ಆಯುಕ್ತರದ್ದಾಗಿದ್ದು ಇಂತಹ ಮೇಲ್ಮನವಿ ಬಂದ 07 (ಏಳು) ದಿವಸಗಳೊಳಗಾಗಿ ಅವರು ಈ ಕುರಿತು ನಿರ್ಧಾರ ಕೈಗೊಳ್ಳಬೇಕು.

## ಅಧ್ಯಾಯ VII

## ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಗುರುತಿಸುವಿಕೆ ಮತ್ತು ಅವರ ಕರ್ತವ್ಯಗಳು

**20. ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಗುರುತಿಸುವಿಕೆ-**

**(1) ಸಾರ್ವಜನಿಕ ಪ್ರಕಟಣೆ ಮತ್ತು ಪರಿಶೀಲನೆ:** ಈ ಉಪವಿಧಿಗಳು ಅಧಿಸೂಚನೆಗೊಂಡ ದಿನದಿಂದ ಈ ಕೆಳಗಿನ ತ್ಯಾಜ್ಯ ಉತ್ಪಾದಕರನ್ನು ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಎಂದು ಪರಿಗಣಿಸಲಾಗುವುದು ಮತ್ತು ಅವರು ಈ ಉಪವಿಧಿಗಳ ಅನ್ವಯವಾಗುವ ನಿಯಮಗಳನ್ನು ಅನುಪಾಲನೆ ಮಾಡಬೇಕು.

(i) 100ಕ್ಕೂ ಹೆಚ್ಚು ಬಹುವಸತಿ ಘಟಕಗಳನ್ನು (ಎಂಡಿಯು) ಹೊಂದಿರುವ ಗೃಹ ತ್ಯಾಜ್ಯ ಉತ್ಪಾದಕರು.

(ii) ಪ್ರತಿದಿನ 100 ಕೆಜಿಗಿಂತ ಹೆಚ್ಚು ಘನತ್ಯಾಜ್ಯ ಉತ್ಪಾದಿಸುವ ವಾಣಿಜ್ಯ ಮತ್ತು ಸಾಂಸ್ಥಿಕ ತ್ಯಾಜ್ಯ ಉತ್ಪಾದಕರು ಅಥವಾ ನಿವೇಶನ ಪ್ರದೇಶ 5000 ಚದರ ಮೀಟರ್‌ಗೂ ಹೆಚ್ಚು ವಿಸ್ತೀರ್ಣದ ಆವರಣದಲ್ಲಿ ನೆಲೆಗೊಂಡಿರುವಂತಹುದು.

(2) ಬಿಬಿಎಂಪಿಯು ಖುದ್ದಾಗಿ ಅಥವಾ ನೋಂದಾಯಿತ ಸೇವಾದಾರರ ಮೂಲಕ ಕ್ಷೇತ್ರ ಸಮೀಕ್ಷೆ ನಡೆಸಿ ತನ್ನದೇ ದಾಖಲೆಗಳ ಪ್ರಕಾರ ವೈಯಕ್ತಿಕ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು ಗುರುತಿಸಿ ಮತ್ತುಅವರಿಗೆ ಅನುಸೂಚಿ IV ನಮೂನೆ ಪ್ರಕಾರ ಸೂಚನಾಪತ್ರ (ನೋಟೀಸ್) ನೀಡಬೇಕು.

**21. ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಕರ್ತವ್ಯಗಳು-**

(1) ಎಲ್ಲಾ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಉಪವಿಧಿಯಲ್ಲಿ ಸೂಚಿಸಲಾದ ರೀತಿಯಲ್ಲಿ ತಮ್ಮ ಆವರಣದಲ್ಲಿಯೇ ಘನತ್ಯಾಜ್ಯವನ್ನು ಬೇರ್ಪಡಿಸಬೇಕಾಗುತ್ತದೆ ಮತ್ತುಇದೇ ಉಪನಿಯಮಗಳ ಅಡಿಯಲ್ಲಿ ಸೂಚಿಸಿರುವ ಮಾದರಿಯಲ್ಲಿಯೇ ಬೇರ್ಪಡಿಸಲಾದ ಘನತ್ಯಾಜ್ಯವನ್ನು ಸಂಗ್ರಹಿಸಿ, ಸಂಸ್ಕರಿಸಿ ವಿಲೇವಾರಿ ಮಾಡಬೇಕಾಗುತ್ತದೆ. ಜೈವಿಕವಾಗಿ ವಿಘಟಿಸಲು ಸಾಧ್ಯವಿರುವ ತ್ಯಾಜ್ಯವನ್ನು ತಮ್ಮ ಆವರಣದೊಳಗೇ ಲಭ್ಯವಿರುವ ಸ್ಥಳಾವಕಾಶಕ್ಕೆ ಅನುಗುಣವಾಗಿ ಸಂಸ್ಕರಿಸಿ, ಸೂಕ್ತವಾಗಿ ಕಾಂಪೋಸ್ಟಿಂಗ್ (ಗೊಬ್ಬರ ತಯಾರಿ) ಅಥವಾ ಬಯೋಮಿಥೇನೇಶನ್ ಮೂಲಕ ವಿಲೇ ಮಾಡಬೇಕು. ಆವರಣದೊಳಗೆ ಸ್ಥಳಾವಕಾಶದ ಸಂಪೂರ್ಣ ಕೊರತೆ ಇದ್ದಲ್ಲಿ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರ ಸೇವೆಯನ್ನು ಪಡೆಯಲು ಅವಕಾಶವನ್ನು ನೀಡುವ ಕುರಿತು ಪರಿಶೀಲಿಸಬಹುದು.

(2) ಮೇಲೆ ತಿಳಿಸಿದಂತೆ ಒಂದು ವೇಳೆ ಜಾಗದ ಕೊರತೆಯಿಂದ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಮೂಲದಲ್ಲಿಯೇ ತಮ್ಮ ಜೈವಿಕ ವಿಘಟನೀಯ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ಯಾವುದೇ ಕಾರಣಕ್ಕೂ ಸಾಧ್ಯವಾಗದೇ ಇದ್ದರೆ, ಬೃಹತ್ ತ್ಯಾಜ್ಯ ಉತ್ಪಾದಕರು ಬೇರ್ಪಡಿಸಲಾದ ಘನತ್ಯಾಜ್ಯದ ಸಂಗ್ರಹ, ಸಂಸ್ಕರಣೆ ಮತ್ತು ವಿಲೇವಾರಿಗೆ ನೋಂದಾಯಿತ ಸೇವಾದಾರರ ಸೇವೆಯನ್ನು ಪಡೆದುಕೊಳ್ಳಬಹುದಾಗಿದೆ ಮತ್ತು ಪರಸ್ಪರ ಒಪ್ಪಿತ ನಿಯಮಗಳ ಅಡಿಯಲ್ಲಿಇಂತಹ ಸೇವೆಗಳಿಗೆ ಶುಲ್ಕವನ್ನು ನಿಗದಿ ಮಾಡಿಕೊಳ್ಳಬಹುದು. ಪರ್ಯಾಯವಾಗಿ, ಒಂದು ನಿರ್ದಿಷ್ಟಪಡಿಸಿದ ಪ್ರದೇಶದ ವ್ಯಾಪ್ತಿಗೆ ಸ್ಪರ್ಧಾತ್ಮಕ ಪ್ರಕ್ರಿಯೆಗಳ ಮೂಲಕ ನೋಂದಾವಣೆಗೆ ಸೇವಾದಾರರನ್ನುಆಯ್ಕೆ ಮಾಡುವ ಹಕ್ಕನ್ನು ಬಿಬಿಎಂಪಿ ಕಾಯ್ದಿರಿಸುತ್ತದೆ ಮತ್ತು ಸೇವಾದಾರರು ವಿಧಿಸುವ ಶುಲ್ಕವನ್ನು ಬೃಹತ್ ತ್ಯಾಜ್ಯ ಉತ್ಪಾದಕರಿಂದ ಆಯಾ ಪ್ರದೇಶಕ್ಕೆ ಅನುಗುಣವಾಗಿ ಬಿಬಿಎಂಪಿ ನಿಗದಿ ಮಾಡುತ್ತದೆ ಮತ್ತು ಈ ಶುಲ್ಕವು ನ್ಯಾಯಯುತ ಮತ್ತು ಸಮುಚಿತವಾಗಿರಬೇಕು.

(3) ಹಾಗಾಗಿ, ಎಲ್ಲಾ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು (ಉಪನಿಯಮ 14 (3) ರ ಅಡಿಯಲ್ಲಿ ಗುರುತಿಸಲಾದ ಮಾರುಕಟ್ಟೆಗಳು ಮತ್ತು ಬಜಾರ್‌ಗಳನ್ನು ಹೊರತುಪಡಿಸಿ) ಈ ಕೆಳಗಿನ ನಿಯಮವನ್ನು ಪಾಲಿಸಬೇಕು;

(i) ಗೊಬ್ಬರ ಮಾಡುವ, ಬಯೋಮಿಥಾನೇಷನ್ ಅಥವಾ ಕೆಎಸ್‌ಪಿಸಿಬಿ/ಸಿಪಿಸಿಬಿ ಅನುಮೋದಿಸಿದ ಇನ್ನಿತರ ಯಾವುದೇ ಪದ್ಧತಿಗಳ ಮೂಲಕ ತಮ್ಮ ಜೈವಿಕ ವಿಘಟನೀಯ ತ್ಯಾಜ್ಯವನ್ನು ತಮ್ಮದೇ ಆವರಣದಲ್ಲಿ (ಮೂಲದಲ್ಲಿಯೇ) ಸಂಸ್ಕರಣ ಮಾಡಬೇಕು; ಅಥವಾ

(ii) ತಾವೇ ಗೊತ್ತು ಮಾಡಿದ ಅಧೀಕೃತ ತ್ಯಾಜ್ಯ ಸಂಸ್ಕರಣೆದಾರರ ಮೂಲಕ ಜೈವಿಕ ವಿಘಟನೀಯ ತ್ಯಾಜ್ಯವನ್ನು ಸಂಸ್ಕರಣ ಮಾಡುವುದು.

(4) ಎಲ್ಲಾ ಬೃಹತ್ ತ್ಯಾಜ್ಯ ಉತ್ಪಾದಕರು ಯಾವುದಾದರೂ;-

(i) ಈ ಉಪವಿಧಿಗಳು ಮತ್ತು ಎಸ್‌ಡಬ್ಲ್ಯು‌ಎಂ ನಿಯಮ 2016ರ ಅನ್ವಯ ಜೈವಿಕ ವಿಘಟನೆಯಾಗದ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ತಮ್ಮದೇ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದು;

(ii) ಪರಸ್ಪರ ಒಪ್ಪಿ ತಕರಾರಿನ ಮೇರೆಗೆ ತಮ್ಮ ಜೈವಿಕ ವಿಘಟನೆಯಾಗದ ತ್ಯಾಜ್ಯದ ಸಂಗ್ರಹಣೆ, ಸಾಗಾಟ ಮತ್ತು ಸಂಸ್ಕರಣೆಗೆ ಅಧೀಕೃತ ತ್ಯಾಜ್ಯ ಸಂಸ್ಕರಣೆದಾರರ ನೇಮಕ ಮಾಡಿಕೊಳ್ಳುವುದು;

(5) ಪರಸ್ಪರ ಸಮ್ಮತಿಸಿದ ಕರಾರಿನ ಮೇರೆಗೆ ಅಪಾಯಕಾರಿ ಗೃಹ ತ್ಯಾಜ್ಯ ಮತ್ತು ನೈರ್ಮಲ್ಯ ತ್ಯಾಜ್ಯದ ಸಂಗ್ರಹ, ಸಾಗಾಟ ಮತ್ತು ಸಂಸ್ಕರಣಕ್ಕೆ ಅಧೀಕೃತ ತ್ಯಾಜ್ಯ ಸಂಸ್ಕರಣೆದಾರರ ನೇಮಕ ಮಾಡಿಕೊಳ್ಳುವುದು;

(6) ಉಪವಿಧಿ 14(8)ರಲ್ಲಿ ವಿವರಿಸಿರುವಂತೆ ಅಧಿಕೃತ ತ್ಯಾಜ್ಯ ಸಂಸ್ಕರಣೆಗಾರರು ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರಿಂದ ಸಂಗ್ರಹ, ಸಾಗಾಟ ಹಾಗೂ ಸಂಸ್ಕರಣೆಗೂ ಮುನ್ನ ಬಿಬಿಎಂಪಿಯೊಂದಿಗೆ ಕೆಎಸ್‌ಪಿಸಿಬಿ ನೀಡಿದ ಅನುಮತಿಯ ಜೊತೆಗೆ ಬಿಬಿಎಂಪಿ ನಿಗದಿಪಡಿಸಿದ ನೋಂದಣಿ ಶುಲ್ಕ ಪಾವತಿಸುವ ಮೂಲಕ ಸೇವೆಗಳನ್ನು ಕೈಗೊಳ್ಳಬಹುದು. ಅವರು ತಮ್ಮ ಕಾರ್ಯಾಚರಣೆ ಕುರಿತು ಬಿಬಿಎಂಪಿಗೆ ಕಾಲ ಕಾಲಕ್ಕೆ ಲೆಕ್ಕಪತ್ರ ಸಲ್ಲಿಸಬೇಕು ಅಂದರೆ ತಮ್ಮ ಕಾರ್ಯಾಚರಣೆಯ ಪ್ರದೇಶ, ಸೇವೆ ನೀಡುವ ತ್ಯಾಜ್ಯ ಉತ್ಪಾದಕರು, ಸಂಗ್ರಹವಾದ ಮತ್ತು ಸಂಸ್ಕರಿಸಿದ ತ್ಯಾಜ್ಯ, ಸಂಗ್ರಹಿಸಿದ ಶುಲ್ಕ ಮೊದಲಾದ ವಿವರಗಳನ್ನು ಸಲ್ಲಿಸಬೇಕು. ತ್ಯಾಜ್ಯದ ಸಂಗ್ರಹ ಬಿಂದುವಿನಿಂದ (ಕಲೆಕ್ಷನ್ ಪಾಯಿಂಟ್) ಸಂಸ್ಕರಿತ ಪ್ರದೇಶದವರೆಗೆ ಹಾಗೂ ವಿಲೇವಾರಿ ಪಾಯಿಂಟ್‌ಗಳ ನಿರ್ವಹಣೆಯನ್ನು ಪತ್ತೆ ಮಾಡುವುದರಿಂದ ಹಿಡಿದು ಎಲ್ಲ ಲೆಕ್ಕಾಚಾರದ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒಪ್ಪಿಸಬೇಕು. ಬಿಬಿಎಂಪಿಯು ಕಾಲಕಾಲಕ್ಕೆ ಬಿಡುಗಡೆ ಮಾಡಿದ ನಿರ್ದೇಶನಗಳನ್ನು ಅನುಪಾಲನೆ ಮಾಡಬೇಕು. ಬಿಬಿಎಂಪಿಯು ನೋಂದಾವಣೆಗಾಗಿ / ವಾರ್ಷಿಕ ನವೀಕರಣ ಶುಲ್ಕವನ್ನು ತನ್ನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಅಧಿಕೃತ ತ್ಯಾಜ್ಯ ಸಂಸ್ಕರಣೆಗಾರರಿಗೆ ನಿಗಧಿ ಮಾಡುತ್ತದೆ.

(7) ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರ ಸೇವೆ ಪಡೆಯಲು ಅನುಮತಿಸಿದ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರಿಗೆ ಕೆಎಸ್‌ಪಿಸಿಬಿಯಿಂದ ಅನುಮತಿ ಮತ್ತು ಇಂತಹ ಸೇವೆಗಳನ್ನೊದಗಿಸಲು ಬಿಬಿಎಂಪಿಯಿಂದ ನೋಂದಣಿ ಮಾಡಿಕೊಂಡಿರಬೇಕು ಮತ್ತು ಇದನ್ನು ಬಿಬಿಎಂಪಿಗೆ ವರದಿ ಮಾಡಿರಬೇಕು. ಒಂದೊಮ್ಮೆ ಇದನ್ನು ಅನುಸರಿಸಲು ವಿಫಲವಾದಲ್ಲಿ ತ್ಯಾಜ್ಯ ಉತ್ಪಾದಕರು ಮತ್ತು ಅನಧಿಕೃತ ಮಾರಾಟಗಾರರಿಗೆ ದಂಡ ಅಥವಾ ಶಿಕ್ಷೆ ವಿಧಿಸಬಹುದಾಗಿದೆ.

## ಅಧ್ಯಾಯ VIII

## ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಮಾವೇಶಗಳು

**22. ಸಾಮಾಜಿಕ ಸಮಾವೇಶ / ಕಾರ್ಯಕ್ರಮಗಳು:-** ಕನಿಷ್ಠ ಮೂರು ಕೆಲಸದ ದಿನಗಳಿಗೆ ಮುಂಚಿತವಾಗಿ ಒಂದು ಖಾಲಿ ಕಾಗದದ ಅರ್ಜಿಯಲ್ಲಿ ಬಿಬಿಎಂಪಿಗೆ ಮಾಹಿತಿ ನೀಡದೆ ಯಾರೊಬ್ಬರೂ ಪರವಾನಗಿ ಹೊಂದಿದ ಅಥವಾ ಪರವಾನಗಿ ಇಲ್ಲದ ಯಾವುದೇ ಸ್ಥಳದಲ್ಲಿ ನೂರಕ್ಕಿಂತ ಹೆಚ್ಚಿನ ಜನರು ಸೇರುವ ಕಾರ್ಯಕ್ರಮ ಅಥವಾ ಸಮಾವೇಶವನ್ನು ಸಂಘಟನೆ ಮಾಡುವಂತಿಲ್ಲ. ಇಂತಹ ವ್ಯಕ್ತಿಯು ಉಪ ವಿಧಿಗಳಲ್ಲಿ ಸೂಚಿಸಿರುವ ವಿಧಾನದಲ್ಲಿ ಘನತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸುವ ಮತ್ತು ಹಾಗೆ ಬೇರ್ಪಡಿಸಿದ ಘನತ್ಯಾಜ್ಯವನ್ನು ಕಾರ್ಯಕ್ರಮ ಮುಗಿದ ಹನ್ನೆರಡು ಗಂಟೆಯ ಒಳಗಾಗಿ ಹಸ್ತಾಂತರ ಮಾಡುವುದನ್ನು ಖಾತರಿಪಡಿಸಬೇಕು. ಒಂದು ವೇಳೆ ಇಂತಹ ಕಾರ್ಯಕ್ರಮಗಳ ಸಂಘಟಕರು, ಕಾರ್ಯಕ್ರಮದಿಂದಾಗಿ ಉಂಟಾಗುವ ಘನತ್ಯಾಜ್ಯದ ಸ್ವಚ್ಛತೆ, ಸಂಗ್ರಹ ಮತ್ತು ಸಾಗಾಟದ ವ್ಯವಸ್ಥೆಗೆ ಬಿಬಿಎಂಪಿ ಸೇವೆಯನ್ನು ಪಡೆಯಲು ಬಯಸುವುದಾದರೆ ಆಯಾ ಬಿಬಿಎಂಪಿಯ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ, ಈ ಉದ್ದೇಶಕ್ಕಾಗಿ ಬಿಬಿಎಂಪಿ ನಿಗದಿಮಾಡಿರುವ ಅಗತ್ಯ ಶುಲ್ಕವನ್ನು ಪಾವತಿ ಮಾಡಬಹುದಾಗಿದೆ. ಈ ಸಂಬಂಧ ಬಿಬಿಎಂಪಿ ಹೊರಡಿಸಿದ ಯಾವುದೇ ಅಧಿಸೂಚನೆಯು ಅಂತಹ ಯಾವುದೇ ಸಾಮಾಜಿಕ ಸಮಾವೇಶ ಮತ್ತು ಕಾರ್ಯಕ್ರಮಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಅನ್ವಯವಾಗುತ್ತದೆ.

**23. ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕ ಸಮಾವೇಶಗಳು ಮತ್ತು ಕಾರ್ಯಕ್ರಮಗಳು:-** (1) ಯಾವುದೇ ಕಾರಣಕ್ಕಾಗಿ (ಮೆರವಣಿಗೆ, ಪ್ರದರ್ಶನ, ಸರ್ಕಸ್, ಮೇಳಗಳು, ರಾಜಕೀಯ ಪಕ್ಷಗಳ ರ್‍ಯಾಲಿಗಳು, ವಾಣಿಜ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರತಿಭಟನೆ ಮತ್ತು ಪ್ರದರ್ಶನಗಳು ಇತ್ಯಾದಿ) ಪೊಲೀಸ್ ಅಥವಾ ಬಿಬಿಎಂಪಿ ಅನುಮತಿ ಅಗತ್ಯವಿರುವ ಸಾರ್ವಜನಿಕ ಸಮಾವೇಶ ಮತ್ತು ಕಾರ್ಯಕ್ರಮ ನಡೆದರೆ, ಉಪವಿಧಿಗಳಿಗೆ ಒಳಪಟ್ಟು, ಕಾರ್ಯಕ್ರಮ ನಡೆದ 12 ಗಂಟೆಗಳ ಒಳಗೆ ಆ ಸ್ಥಳವನ್ನು ಸ್ವಚ್ಛಗೊಳಿಸುವುದು ಮತ್ತು ಅಲ್ಲಿ ಸಂಗ್ರಹವಾದ ಘನತ್ಯಾಜ್ಯವನ್ನು ಬೇರ್ಪಡಿಸುವುದು, ಸಂಗ್ರಹಿಸುವುದು ಮತ್ತು ಸಂಸ್ಕರಿಸುವುದು ಅಂತಹ ಕಾರ್ಯಕ್ರಮ ಅಥವಾ ಸಮಾವೇಶದ ಸಂಘಟಕರ ಜವಾಬ್ದಾರಿಯಾಗಿರುತ್ತದೆ. ಈ ಸಂಬಂಧ ಬಿಬಿಎಂಪಿ ಹೊರಡಿಸಿದ ಯಾವುದೇ ಅಧಿಸೂಚನೆಯು ಅಂತಹ ಯಾವುದೇ ಸಾಮಾಜಿಕ ಸಮಾವೇಶ ಮತ್ತು ಕಾರ್ಯಕ್ರಮಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಅನ್ವಯವಾಗುತ್ತದೆ.

(2) ಮರು ಪಾವತಿಸಬಹುದಾದ ಸ್ವಚ್ಛತಾ ಠೇವಣಿ:-ಅಂತಹ ಸಾರ್ವಜನಿಕ ಸಮಾವೇಶಗಳು ಮತ್ತು ಕಾರ್ಯಕ್ರಮಗಳ ಸಂಘಟಕರು, ಆ ಕಾರ್ಯಕ್ರಮದ ಅವಧಿಗೆ ತಕ್ಕಂತೆ ಈ ಹಿಂದೆ ಹೊರಡಿಸಲಾದ ಅಧಿಸೂಚನೆಯಲ್ಲಿ ಸೂಚಿಸಿದ ಅಗತ್ಯ ಠೇವಣಿಯನ್ನು ಸಂಬಂಧಪಟ್ಟ ಅಧಿಕಾರಿಯ ಬಳಿ ಪಾವತಿ ಮಾಡಬೇಕಾಗುತ್ತದೆ. ಹೀಗೆ ಬಳಸಲಾದ ಸಾರ್ವಜನಿಕ ಸ್ಥಳದಲ್ಲಿ ಹಿಂದೆ ಇದ್ದ ಸ್ವಚ್ಛ ಸ್ಥಿತಿಯನ್ನು ಮರು ಸ್ಥಾಪಿಸಬೇಕು ಮತ್ತು ಕಾರ್ಯಕ್ರಮದಿಂದ ಉತ್ಪತ್ತಿಯಾದ ಯಾವುದೇ ಘನತ್ಯಾಜ್ಯವನ್ನು ಬೇರ್ಪಡಿಸಿ, ಸಂಗ್ರಹಿಸಿ ಉಪವಿಧಿಗಳಲ್ಲಿ ನಿಯೋಜಿಸಲಾಗಿರುವ

ಸ್ಥಳಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿ / ಪ್ರಾಧಿಕಾರಗಳಿಗೆ ತೃಪ್ತಿಯಾಗುವ ರೀತಿಯಲ್ಲಿ ಸಾಗಾಟ ಮಾಡಬೇಕಾಗಿರುತ್ತದೆ. ಈ ಆಧಾರದಲ್ಲಿ ಸ್ವಚ್ಛತಾ ಠೇವಣಿಯನ್ನು ಮರುಪಾವತಿ ಮಾಡಲಾಗುತ್ತದೆ. ಈ ಕಾರ್ಯಕ್ರಮ ಮುಗಿದ 12 ಗಂಟೆಗಳೊಳಗೆ ಆ ಸ್ಥಳವನ್ನು ಸ್ವಚ್ಛ ಸ್ಥಿತಿಯಲ್ಲಿ ಮರು ಸ್ಥಾಪಿಸದೇ ಹೋದರೆ ಬಿಬಿಎಂಪಿಗೆ ಪಾವತಿ ಮಾಡಲಾದ ಈ ಸ್ವಚ್ಛತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಮತ್ತು ಕಾರ್ಯಕ್ರಮದ ಆಯೋಜಕರಿಗೆ ಈ ಹಣದ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. ಹೀಗೆ ಮುಟ್ಟುಗೋಲು ಹಾಕಿಕೊಳ್ಳಲಾದ ಹಣಕ್ಕೆ ಮೇಲಾಗಿ ಬಿಬಿಎಂಪಿಯು ತನ್ನ ವಿವೇಚನೆಗೆ ತಕ್ಕಂತೆ ದಂಡ ವಿಧಿಸುವ ಹಕ್ಕನ್ನು ಹೊಂದಿರುತ್ತದೆ.

(3) ಬಿಬಿಎಂಪಿ ಸೇವೆಗಳು: ಒಂದು ವೇಳೆ ಕಾರ್ಯಕ್ರಮದಿಂದ ಉತ್ಪತ್ತಿಯಾಗುವ ಘನತ್ಯಾಜ್ಯದ ಸ್ವಚ್ಛತೆ, ಸಂಗ್ರಹ ಮತ್ತು ಸಾಗಾಟಕ್ಕೆ ಬಿಬಿಎಂಪಿ ಸೇವೆಗಳನ್ನು ಬಳಸಿಕೊಳ್ಳಲು ಇಚ್ಛಿಸಿದರೆ ಸಾರ್ವಜನಿಕ ಸಮಾವೇಶ ಮತ್ತು ಕಾರ್ಯಕ್ರಮದ ಆಯೋಜಕರು ಬಿಬಿಎಂಪಿಯಲ್ಲಿರುವ ಸಂಬಂಧಪಟ್ಟ ಅಧಿಕಾರಿಗೆ ಮುಂಚಿತವಾಗಿ ಅರ್ಜಿ ಸಲ್ಲಿಸಿ ಈ ಉದ್ದೇಶಕ್ಕೆ ಬಿಬಿಎಂಪಿ ವಿಧಿಸುವ ಬಳಕೆದಾರರ ಶುಲ್ಕವನ್ನು ಮುಂಗಡವಾಗಿಯೇ ಪಾವತಿ ಮಾಡಬೇಕಾಗುತ್ತದೆ.

## ಅಧ್ಯಾಯ IX

## ವಾರ್ಡ್ ಸಮಿತಿಗಳ ಮತ್ತು ಶುಚಿ ಮಿತ್ರಾಗಳ ಕರ್ತವ್ಯಗಳು

**24. ವಾರ್ಡ್ ಸಮಿತಿಯ ಕರ್ತವ್ಯಗಳು:-(**1) 2016ರ ಕರ್ನಾಟಕ ಮಹಾನಗರ ಪಾಲಿಕೆಗಳು (ವಾರ್ಡ್ ಸಮಿತಿ) ನಿಯಮಗಳಿಗೆ ಅನ್ವಯವಾಗುವಂತೆ ವಾರ್ಡ್ ಸಮಿತಿಗಳು ಸಂಬಂಧಪಟ್ಟ ವಾರ್ಡ್‌ನಲ್ಲಿ ಘನತ್ಯಾಜ್ಯದ ಸಮರ್ಪಕವಾದ ನಿರ್ವಹಣೆ ಮತ್ತು ನೈರ್ಮಲೀಕರಣಕ್ಕಾಗಿ ಬಿಬಿಎಂಪಿ ಜೊತೆ ಕೆಲಸ ಮಾಡಬೇಕಾಗುತ್ತದೆ. ತಮ್ಮ ವಾರ್ಡ್‌ಗಳಲ್ಲಿ ಎಸ್‌ಡಬ್ಲ್ಯುಎಂ ನಿಯಮಗಳು ಮತ್ತು ಈ ಉಪನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ವಾರ್ಡ್ ಸಮಿತಿಗಳು ಬಿಬಿಎಂಪಿ ಜೊತೆ ಪೂರಕವಾದ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ.

(2) ವಾರ್ಡ್ ಸಮಿತಿಯು ವಾರ್ಡ್ ಎಸ್‌ಡಬ್ಲ್ಯುಎಂ ಕ್ರಿಯಾಯೋಜನೆಯ ಪರಾಮರ್ಶೆ ನಡೆಸುತ್ತದೆ. ಯೋಜನೆಯ ಪ್ರಕಾರ ವಾರ್ಡ್‌ನ ಅಗತ್ಯತೆಗಳು, ಈಗಿರುವ ಪ್ರಮಾಣಕ ಮಾನದಂಡಗಳು, ಬಜೆಟ್ ಅನುದಾನಗಳು ಮತ್ತು ಅಗತ್ಯವಿರುವ ಮೂಲ ಸೌಕರ್ಯಗಳಂತಹ ವಿಚಾರಗಳ ಬಗೆಗೆ ಪರಿಶೀಲನೆ ನಡೆಸುತ್ತದೆ. ಈ ಹಿನ್ನೆಲೆಯಲ್ಲಿ ವಾರ್ಡ್‌ನಲ್ಲಿ ಉತ್ಪಾದನೆಯಾಗಿರುವ ಘನತ್ಯಾಜ್ಯದ ವಿಧಗಳು ಮತ್ತು ಪ್ರಮಾಣ, ಈಗಿರುವ ಸಂಸ್ಕರಣ ಕೇಂದ್ರದ ಸಾಮರ್ಥ್ಯ ಹೆಚ್ಚುವರಿ ಸಂಸ್ಕರಣೆಗಾಗಿ ಹಾಗೂ ಸೌಕರ್ಯಗಳ ಯೋಜನೆ ಬಗೆಗೆ ವಾರ್ಡ್ ಸಮಿತಿಯು ಪರಾಮರ್ಶೆ ನಡೆಸಬೇಕಾಗುತ್ತದೆ.

(3) ಹಸಿ ತ್ಯಾಜ್ಯ ಸಂಸ್ಕರಣ ಸೌಕರ್ಯಗಳು, ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳು / ವಸ್ತುಗಳ ಮರಳಿ ಪಡೆಯುವ ಸೌಕರ್ಯಗಳು ಮತ್ತು ಘನತ್ಯಾಜ್ಯವನ್ನು ಮೂಲದಲ್ಲಿಯೇ ಸಂಸ್ಕರಣ ಮಾಡುವ ವಿಕೇಂದ್ರೀಕೃತ ವ್ಯವಸ್ಥೆಯನ್ನು ವಾರ್ಡ್‌ನಲ್ಲಿಯೇ ನಿರ್ವಹಿಸಲು ಸೂಕ್ತ ಜಮೀನನ್ನು ಗುರುತಿಸುವುದು ಮತ್ತು ಆ ಸಂಬಂಧ ಬಿಬಿಎಂಪಿಗೆ ಶಿಫಾರಸು ಮಾಡುವ ಕೆಲಸವನ್ನು ವಾರ್ಡ್ ಸಮಿತಿ ನಿರ್ವಹಿಸಬೇಕಾಗುತ್ತದೆ.

(4) ಬಿಬಿಎಂಪಿಯ ನಿಯೋಜಿತ ಅಧಿಕಾರಿಗಳು ಸಿದ್ಧಪಡಿಸಿದ ಎಸ್‌ಡಬ್ಲ್ಯು ಎಂ ಕ್ರಮ ಕೈಗೊಂಡ ವರದಿಯ ಮೇಲೆ ಮತ್ತು ಅಂತಹ ವರದಿಯಲ್ಲಿ ಸೂಚಿಸಲಾದ ಶಿಫಾರಸುಗಳನ್ನು ಪಾಲಿಸಲು ಬೇಕಾದ ಅಗತ್ಯ ಕ್ರಮಗಳ ಬಗ್ಗೆ ವಾರ್ಡ್ ಸಮಿತಿಯು ಪರ್ಯಾಲೋಚನೆ ನಡೆಸಬೇಕಾಗುತ್ತದೆ. ಇದರ ಜೊತೆಗೆ ವಾರ್ಡ್‌ನಲ್ಲಿ ಕಾಯ್ದುಕೊಳ್ಳಬೇಕಾದ ದೃಷ್ಟಿಗೋಚರ (ಕಣ್ಣಿಗೆ ಕಾಣುವ) ಸ್ವಚ್ಛತೆಯ ಬಗ್ಗೆ ಸಾರ್ವಜನಿಕರಿಂದ ಆಗಾಗ ಮಾಹಿತಿಗಳನ್ನು ವಾರ್ಡ್ ಸಮಿತಿ ಪಡೆದುಕೊಳ್ಳಬೇಕು ಮತ್ತು ತ್ಯಾಜ್ಯ ಸಾಧ್ಯತಾ ಸ್ಥಳಗಳನ್ನು (ಜಿವಿಪಿ) ನಾಶಪಡಿಸುವುದರ ಜೊತೆಗೆ ದೃಷ್ಟಿಗೋಚರ ಸ್ವಚ್ಛತೆಯನ್ನು ಕಾಯ್ದುಕೊಳ್ಳುವ ಅನುಪಾಲನೆಯನ್ನು ಖಾತರಿಪಡಿಸುವ ಬಗ್ಗೆ ಹಾಗೂ ವಾರ್ಡ್‌ನಲ್ಲಿ ಎಸ್‌ಡಬ್ಲ್ಯು ಎಂ ನಿಯಮಗಳು ಮತ್ತು ಉಪವಿಧಿಗಳನ್ನು ಪಾಲಿಸಲು ಅಗತ್ಯವಿರುವ ಕ್ರಮಗಳ ಶಿಫಾರಸು ಮಾಡಬೇಕು.

**25. ಶುಚಿ ಮಿತ್ರ ನಿರ್ವಹಿಸಬೇಕಿರುವ ಪಾತ್ರ:-** (1) ತಮ್ಮ ವಾರ್ಡ್‌ಗಳಲ್ಲಿ ಸ್ವಚ್ಛತೆ, ಘನತ್ಯಾಜ್ಯ ಸಂಗ್ರಹ ನಿರ್ವಹಣೆ ಮಾಡುತ್ತಿರುವ ಬಗ್ಗೆ ಸಮೀಕ್ಷೆ ಕೈಗೊಳ್ಳಲು ಮತ್ತು ವರದಿಗಳನ್ನು ನೀಡಲು ಹಾಗೂ ಸ್ವಚ್ಛತಾ ಕಾರ್ಯಕ್ರಮ ಅಥವಾ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸಲು ಕಾರ್ಯಕ್ರಮ ಸಂಘಟಿಸುವಂತಹ ಕೆಲಸದಲ್ಲಿ ತೊಡಗಿಕೊಳ್ಳಲು ಪ್ರತಿ ವಾರ್ಡ್‌ನಲ್ಲಿ ಕಳಕಳಿ ಇರುವ ನಾಗರಿಕರು ಶುಚಿ ಮಿತ್ರ ಗುಂಪನ್ನು ಕೂಡಾ ರಚಿಸಿಕೊಳ್ಳಬೇಕು. ವಾರ್ಡ್‌ನ ವ್ಯಾಪ್ತಿಯಲ್ಲಿರುವ ಬ್ಲಾಕ್‌ಗಳನ್ನು ಸುಧಾರಣೆ ಮಾಡಲು, ಘನತ್ಯಾಜ್ಯವನ್ನು ಸಕಾಲದಲ್ಲಿ ಮನೆ ಬಾಗಿಲಿನಿಂದ ಸಂಗ್ರಹ ಮಾಡಲು ಸೂಕ್ತ ಮಾರ್ಗಗಳ ಬಗ್ಗೆ ಯೋಜನೆ ರೂಪಿಸುವುದು, ಕಸದ ಡಬ್ಬಿಗಳನ್ನು ಸರಿಯಾದ ಸ್ಥಳಗಳಲ್ಲಿ ಇಡಲು ಸಲಹೆ, ವಾರ್ಡ್‌ನ ದೃಷ್ಟಿಗೋಚರ ಸ್ವಚ್ಛತೆಯನ್ನು ಸುಧಾರಿಸಲು ಮಾಹಿತಿ ನೀಡಲು ಕಸ ಎಸೆಯುವ ಸಾಧ್ಯತೆಗಳಿರುವ ಸ್ಥಳಗಳಲ್ಲಿ ಪತ್ತೆ ಮಾಡಲು ಕೋರಿಕೆಗಳು ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ಶುಚಿ ಮಿತ್ರ ನೀಡುವ ವರದಿಯಲ್ಲಿ ಸೇರಿಸಬಹುದು.

(2) ಈ ಪ್ರದೇಶದಲ್ಲಿ ಉಪ ವಿಧಿಗಳನ್ನು ಅನುಷ್ಠಾನಕ್ಕೆ ತರುವುದು ಮತ್ತು ಮೇಲ್ವಿಚಾರಣೆ ನಡೆಸಲು ಅಗತ್ಯವಾಗುವಂತೆ ಶುಚಿ ಮಿತ್ರ ಸಿದ್ಧಪಡಿಸಿದ ಈ ವರದಿಗಳನ್ನು ಆಯಾ ವಾರ್ಡ್ ಸಮಿತಿಗೆ ಸಲ್ಲಿಸಬೇಕು ಮತ್ತು ಅಗತ್ಯವೆನಿಸಿದರೆ ಅದನ್ನು ಬಿಬಿಎಂಪಿಯ ಕುಂದುಕೊರತೆ ಪರಿಹಾರ ವಿಭಾಗಕ್ಕೆ ಒಪ್ಪಿಸಬಹುದಾಗಿದೆ. ವಾರ್ಡ್‌ನಲ್ಲಿ ಉಪವಿಧಿಗಳನ್ನು ಜಾರಿಗೆ ತರಲು ಮತ್ತು ಶುಚಿ ಮಿತ್ರ ಸಲ್ಲಿಸಿದ ವರದಿಗಳಲ್ಲಿ ಪ್ರಸ್ತಾಪಿಸಲಾದ ವಿಷಯಗಳನ್ನು ಪರಿಹರಿಸುವ ದೃಷ್ಟಿಯಿಂದ ಶುಚಿ ಮಿತ್ರ ಮತ್ತು ವಾರ್ಡ್ ಸಮಿತಿ ಸದಸ್ಯರು ಕಾಲಕಾಲಕ್ಕೆ ಸಭೆಗಳನ್ನು ನಡೆಸಬೇಕು. ಆದರೆ ಈ ಉಪವಿಧಿಗಳನ್ನು ಜಾರಿಗೆ ತರಲು ಬೇಕಾದ ಯಾವುದೇ ಅಧಿಕಾರವನ್ನು ಶುಚಿ ಮಿತ್ರ ಗುಂಪುಗಳಿಗೆ ನೀಡಲಾಗಿರುವುದಿಲ್ಲ.

**ಅಧ್ಯಾಯ X**

**ಘನತ್ಯಾಜ್ಯದ ನಿರ್ವಹಣೆಗಾಗಿ ಎಸ್‌ಡಬ್ಲ್ಯು ಎಂ ಕರ ಮತ್ತು ಬಳಕೆದಾರರ ಶುಲ್ಕ**

**26. ಎಸ್‌ಡಬ್ಲ್ಯು ಎಂ ಕರ ಮತ್ತು ಬಳಕೆದಾರರ ಶುಲ್ಕಕ್ಕೆ ಸಂಬಂಧಿಸಿದ ನಿಬಂಧನೆಗಳು :-**

(1) ಎಸ್‌ಡಬ್ಲ್ಯು ಎಂ ಕರ- (i) ಬಿಬಿಎಂಪಿಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ತ್ಯಾಜ್ಯ ಉತ್ಪಾದಕರು ಕರ್ನಾಟಕ ಮಹಾನಗರ ಪಾಲಿಕೆ (ಮುನಿಸಿಪಲ್) ಕಾಯ್ದೆ / ನಿಯಮಗಳಿಗೆ ಅನುಸಾರವಾಗಿ ಎಸ್‌ಡಬ್ಲ್ಯು ಎಂ ಕರವನ್ನು ರಸ್ತೆಗಳ ನಿರ್ವಹಣೆ ಮತ್ತು ಸಾರ್ವಜನಿಕ ಸ್ಥಳಗಳ ಸ್ವಚ್ಚತೆಗಾಗಿ ಕಡ್ಡಾಯವಾಗಿ ಪಾವತಿಸಬೇಕು.

(ii) ಎಸ್‌ಡಬ್ಲ್ಯು.ಎಂ ಕರದ ದರಗಳನ್ನು ಅನುಸೂಚಿ VI ರ, ಭಾಗ-1ಎ ನಲ್ಲಿ ಉಲ್ಲೇಖಿಸಿರಬೇಕು ಮತ್ತು ಬಿಬಿಎಂಪಿ ವಾರ್ಷಿಕವಾಗಿ ಸಂಗ್ರಹಿಸುವ ಆಸ್ತಿ ತೆರಿಗೆಯ ಭಾಗವಾಗಿ ಪಾವತಿಸುವಂತಿರಬೇಕು.

(2) ಬಳಕೆದಾರರ ಶುಲ್ಕ-(i) ಬಿಬಿಎಂಪಿ ಘನತ್ಯಾಜ್ಯ ಸಂಗ್ರಹ, ಸಾಗಾಟ, ಸಂಸ್ಕರಣ ಮತ್ತು ವಿಲೇವಾರಿ ಸೇವೆಗಳನ್ನು ಒದಗಿಸಿದ್ದಕ್ಕಾಗಿ ಎಸ್‌ಡಬ್ಲ್ಯು.ಎಂ ನಿಯಮಾವಳಿ 2016ರ 15(ಎಫ್) ಅನ್ವಯ ಎಸ್‌ಡಬ್ಲ್ಯು.ಎಂ ಬಳಕೆದಾರರ ಶುಲ್ಕವನ್ನು ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಹೊರತಾಗಿ ಎಲ್ಲಾ ತ್ಯಾಜ್ಯ ಉತ್ಪಾದಕರು ಅನುಸೂಚಿ VI ರ, ಭಾಗ-1ಬಿ ರಲ್ಲಿ ಉಲ್ಲೇಖಿಸಿರುವಂತೆ ಪೂರ್ಣವಾಗಿ ಅಥವಾ ಭಾಗಶ: ವೆಚ್ಚವನ್ನು ಭರಿಸಲು ಪಾವತಿಸಬೇಕು. ಅನುಸೂಚಿ VI ರಲ್ಲಿ ಸೂಚಿಸಿದ ಎಸ್‌ಡಬ್ಲ್ಯು.ಎಂ ಬಳಕೆದಾರರ ಶುಲ್ಕವು ವಾರ್ಷಿಕವಾಗಿ ಸ್ವಯಂಚಾಲಿತವಾಗಿ ಶೇ.5ರಷ್ಟು ಏರಿಕೆಯಾಗುತ್ತದೆ (ಹತ್ತಿರದ ರೂ.5ರ ಪೂರ್ಣಾಂಕಕ್ಕೆ ಸರಿದೂಗುವಂತೆ). ಆ ವರ್ಷದ ಅವಧಿಯಲ್ಲಿ ಯಾವುದೇ ಕಾಲದಲ್ಲಿ ಅಗತ್ಯಕ್ಕೆ ತಕ್ಕಂತೆ ಹೆಚ್ಚಿನ ಮಟ್ಟದಲ್ಲಿ ವಿಶೇಷವಾಗಿ ಏರಿಕೆ ಮಾಡದೇ ಹೋದರೆ ಪ್ರತಿ ಅನುಕ್ರಮದ ವರ್ಷದಲ್ಲಿಏಪ್ರಿಲ್ ಒಂದರಿಂದ ಈ ಏರಿಕೆ ಜಾರಿಗೆ ಬರುತ್ತದೆ. ಈ ದರಗಳ ಸೂಚನೆಯನ್ನು ಬಿಬಿಎಂಪಿ ವೆಬ್‌ತಾಣದಲ್ಲಿ ಪ್ರಕಟಿಸಬೇಕಾಗುತ್ತದೆ.

(ii) ಉಪವಿಧಿಯ ಪ್ರಕಾರವಾಗಿ ವಿಂಗಡಿತ ತ್ಯಾಜ್ಯವನ್ನು ಸಂಸ್ಕರಿಸುವ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಹೊರತಾಗಿ ತ್ಯಾಜ್ಯ ಉತ್ಪಾದಕರು, ಸ್ಥಳದಲ್ಲೇ ಗೊಬ್ಬರ ತಯಾರಿ ಮಾಡುವ (ಕಾಂಪೋಸ್ಟಿಂಗ್) ಹಸಿ ಕಸ (ತ್ಯಾಜ್ಯ)ದ ಬಯೋಮಿಥನೈಸೇಶನ್ ಮಾಡುವವರು ಬಿಬಿಎಂಪಿ ಎಸ್‌ಡಬ್ಲ್ಯು.ಎಂ ಬಳಕೆದಾರರ ಶುಲ್ಕದಲ್ಲಿ ಕನಿಷ್ಟ 50% ರಿಯಾಯಿತಿ ಪಡೆಯಬೇಕು.

(iii) ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕವನ್ನು ನೇರವಾಗಿ ಅಥವಾ ಬಿಬಿಎಂಪಿಯ ಆನ್‌ಲೈನ್ ಪಾವತಿ ಮೂಲಕ ಮತ್ತು/ಅಥವಾ ಬಿಬಿಎಂಪಿ ಅಧಿಕಾರ ನೀಡಿರುವ ಯಾವುದೇ ವ್ಯಕ್ತಿಯ ಮೂಲಕ ಸಂಗ್ರಹಿಸಬಹುದಾಗಿದೆ. ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕ ಸಂಗ್ರಹದ ಕಾಲಾವಧಿ ಮತ್ತು ಮಾದರಿಯನ್ನು ವಿವರವಾಗಿ ಪ್ರತ್ಯೇಕ ಆದೇಶ/ಅಧಿಸೂಚನೆ ಮೂಲಕ ವಿವರಿಸಬೇಕು.

(iv) ಬಿಬಿಎಂಪಿಯು ನಿಗದಿಪಡಿಸಿದ ಮೊತ್ತಕ್ಕೆ ಬೇಡಿಕೆಯನ್ನು ಮಂಡಿಸಿದ ಮೂರು ತಿಂಗಳ ಒಳಗಾಗಿ ತ್ಯಾಜ್ಯ ಉತ್ಪಾದಕರು ಬಳಕೆದಾರರ ಶುಲ್ಕವನ್ನು ಪಾವತಿ ಮಾಡಲು ವಿಫಲವಾದರೆ ಪ್ರತಿ ತಿಂಗಳು ಶೇ.2ರಂತೆ ಮೇಲ್ತೆರಿಗೆಯನ್ನು ವಿಧಿಸಲಾಗುತ್ತದೆ. ಬಿಬಿಎಂಪಿಯು ಈ ಮೇಲ್ತೆರಿಗೆಯನ್ನು ಕಾಲಕಾಲಕ್ಕೆ ಪರಿಷ್ಕರಿಸುತ್ತಿರಬಹುದು.

(v) ಆರು (6) ತಿಂಗಳಿಗೂ ಹೆಚ್ಚು ಕಾಲ ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕ ಪಾವತಿ ಮಾಡದೇ ಸುಸ್ತಿಯಾದರೆ ಬಿಬಿಎಂಪಿ ಅಥವಾ ಇನ್ನಿತರ ಯಾವುದೇ ಸಕ್ಷಮ ಪ್ರಾಧಿಕಾರವು 1976ರ ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆಯ ಅಡಿಯಲ್ಲಿ ಜಪ್ತಿಯ ರೂಪದಲ್ಲಿ ಮೇಲ್ತೆರಿಗೆಯನ್ನೂ ಸೇರಿದಂತೆ ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕವನ್ನು ಸುಸ್ತಿದಾರರಿಂದ ವಸೂಲಿ ಮಾಡಬಹುದಾಗಿದೆ. ಇದರ ಜೊತೆಗೆ, ಪರಿಸ್ಥಿತಿ ಉದ್ಭವಿಸಿದರೆ ಸುಸ್ತಿದಾರರು ಮೇಲ್ತೆರಿಗೆಯೊಂದಿಗೆ ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕವನ್ನು ಪಾವತಿ ಮಾಡುವ ತನಕ ಘನತ್ಯಾಜ್ಯ ನಿರ್ವಹಣಾ ಸೇವೆಗಳನ್ನು ರದ್ದುಪಡಿಸುವ ಸ್ವಾತಂತ್ರ್ಯವನ್ನು ಬಿಬಿಎಂಪಿ ಮತ್ತು ಅಥವಾ ನೋಂದಾಯಿತ ಸೇವಾ ಪೂರೈಕೆದಾರರು ಹೊಂದಿರುತ್ತಾರೆ.

(vi) ಈ ಉಪವಿಧಿ ಅಡಿಯಲ್ಲಿ ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕದಿಂದ ಸಂಗ್ರಹವಾದ ಎಲ್ಲ ಮೊತ್ತವನ್ನೂ ಘನತ್ಯಾಜ್ಯ ನಿರ್ವಹಣೆಗಾಗಿ ನಿರ್ವಹಿಸಲಾಗುವ ಸೀಮಿತ ಪ್ರತ್ಯೇಕ ಬ್ಯಾಂಕ್ ಖಾತೆಗೆ (ಎಸ್ಕ್ರೋ ಬ್ಯಾಂಕ್ ಅಕೌಂಟ್) ವರ್ಗಾಯಿಸಬೇಕು. ಉಪವಿಧಿ ಅಡಿಯಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಬಿಬಿಎಂಪಿ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಕ್ಕಾಗಿ, ಸಿಬ್ಬಂದಿಯ ಸಂಬಳ, ಪ್ರೋತ್ಸಾಹ ಧನ, ಅನುದಾನ ಹಾಗೂ ಕಾಲ ಕಾಲಕ್ಕೆ ಬಿಬಿಎಂಪಿಯಿಂದ ಸೂಕ್ತ ಎಂದು ಪರಿಗಣಿಸಲ್ಪಡುವ ಇನ್ನಿತರ ಬಳಕೆಗೆ ಈ ಮೊತ್ತವನ್ನು ಅಗತ್ಯಕ್ಕೆ ತಕ್ಕಂತೆ ಬಳಸಬಹುದು. ಈ ಮೊತ್ತವನ್ನು ಎಸ್‌ಡಬ್ಲ್ಯುಎಂನ ಪ್ರಮುಖ ಕಾರ್ಯಚಟುವಟಿಕೆಗಳ ಹೊರತಾಗಿ ಬೇರೆ ಯಾವುದಕ್ಕೂ ಬದಲಿಸಬಾರದು.

(3) ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಮೇಲೆ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರು ವಿಧಿಸಬಹುದಾದ ಬಳಕೆದಾರರ ಶುಲ್ಕ :

(i) ಎಲ್ಲಾ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರು ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಮೇಲೆ ವಿಧಿಸುವ ಬಳಕೆದಾರರ ಶುಲ್ಕವನ್ನು ಮೊದಲೇ ಬಿಬಿಎಂಪಿಗೆ ಘೋಷಿಸಬೇಕು.

(ii) ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರು ನೀಡುವ ಘನತ್ಯಾಜ್ಯ ನಿರ್ವಹಣೆ ಸೇವೆಗಳಿಗೆ ವಿಧಿಸುವ ಬಳಕೆದಾರರ ಶುಲ್ಕ ಪ್ರಮಾಣವನ್ನು ಘೋಷಿಸಿದ ಆಧಾರದ ಮೇರೆಗೆ, ತ್ಯಾಜ್ಯ ಉತ್ಪಾದಕರ ಮಾಹಿತಿಗಾಗಿ ಬಿಬಿಎಂಪಿ ಪ್ರಕಟಿಸಬೇಕು, ಹೀಗೆ ಮಾಡಿದಲ್ಲಿ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರು ಸ್ಥಳದಲ್ಲಿ ಬೇಡಿಕೆ ಇಡಬಹುದಾದ ಅಸಮಂಜಸವಾದ (ದುಬಾರಿ) ಬೆಲೆಗೆ ಬಲಿಯಾಗದೇ ಇರಲು ಸಾಧ್ಯವಾಗಬಹುದು.

(4) ಎಸ್‌ಡಬ್ಲ್ಯುಎಂ ಕರ / ಬಳಕೆದಾರರ ಶುಲ್ಕವನ್ನು ವಿಧಿಸುವ ಉದ್ದೇಶಕ್ಕಾಗಿ ಬಿಬಿಎಂಪಿ ಖುದ್ದಾಗಿ ಅಥವಾ ಯಾವುದೇ ಏಜೆನ್ಸಿ ಅಥವಾ ಸೇವಾ ಪೂರೈಕೆದಾರರ ಮೂಲಕ ಎಲ್ಲಾ ತ್ಯಾಜ್ಯ ಉತ್ಪಾದಕರ ದತ್ತಾಂಶವನ್ನು ಸಿದ್ಧಪಡಿಸಬೇಕು ಮತ್ತು ಈ ದತ್ತಾಂಶವನ್ನು ಆಗಾಗ ಪರಿಷ್ಕರಿಸಬೇಕು ಮತ್ತು ಅದನ್ನು ಬಿಬಿಎಂಪಿ ವೆಬ್‌ತಾಣದಲ್ಲಿ ಪ್ರಕಟಿಸಬೇಕು.

## ಅಧ್ಯಾಯ XI

## ಉಪ-ವಿಧಿಗಳನ್ನು ಪಾಲಿಸದಿರುವುದು, ಸ್ಥಳದಲ್ಲೇ ದಂಡ ವಿಧಿಸುವುದು ಮತ್ತು ಇತರ ದಂಡಗಳು

**27. ಸ್ಥಳದಲ್ಲೇ ದಂಡ:-** ಉಪವಿಧಿ (18) (ಕಸ ಹಾಕುವುದು) ಮತ್ತು ಉಪವಿಧಿ (19) (ಸಾರ್ವಜನಿಕವಾಗಿ ಉಪದ್ರವ ಮಾಡುವುದು) ಉಲ್ಲಂಘನೆ ಮಾಡಿದವರಿಗೆ ಸ್ಥಳದಲ್ಲಿಯೇ ದಂಡ ವಿಧಿಸುವ ಅಧಿಕಾರವನ್ನು ಸಾರ್ವಜನಿಕವಾಗಿ ಉಪದ್ರವ ಮಾಡುವವರನ್ನು ಪತ್ತೆ ಮಾಡುವವರಿಗೆ ಇರಬೇಕು. ಆದರೆ ಹೀಗೆ ಸ್ಥಳದಲ್ಲೇ ವಿಧಿಸುವ ದಂಡದ ಮೊತ್ತವು ಸಾಮಾನ್ಯವಾಗಿ ಅನುಸೂಚಿ VII ರಲ್ಲಿ ಸೂಚಿಸಲಾಗಿರುವ ಮೊತ್ತವನ್ನು ಮೀರುವುದಿಲ್ಲ. ಅಗತ್ಯವೆನಿಸಿದರೆ ಮತ್ತು ದಂಡ ವಿಧಿಸುವ ಪ್ರಾಧಿಕಾರಕ್ಕಿಂತ ಉನ್ನತ ಪ್ರಾಧಿಕಾರವು ಬಳಿಕ ಅಂತಹ ಹೆಚ್ಚಿನ ದಂಡವನ್ನು ಅನುಮೋದಿಸಿದರೆ ಮಾತ್ರ ಅದು ಅನ್ವಯವಾಗುತ್ತದೆ.

**28. ದಂಡಗಳು:-** (1) ಎಸ್‌ಡಬ್ಲ್ಯುಎಂ ನಿಯಮಗಳು ಮತ್ತು/ಅಥವಾ ಈ ಉಪವಿಧಿಗಳ ಯಾವುದೇ ಉಪಬಂಧಗಳನ್ನು (ಅವಕಾಶಗಳನ್ನು) ಪಾಲಿಸುವಲ್ಲಿ ವಿಫಲವಾದ ಅಥವಾ ಉಲ್ಲಂಘಿಸಿದ ಯಾರೇ ಆಗಲಿ ಅವರನ್ನು ಅನುಸೂಚಿ VIIರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ದಂಡದೊಂದಿಗೆ ತಪ್ಪಿತಸ್ಥರೆಂದು ಶಿಕ್ಷಿಸಲಾಗುತ್ತದೆ. ಒಂದು ವೇಳೆ ಎರಡನೇ ಬಾರಿ ಇಂತಹುದೇ ಉಲ್ಲಂಘನೆ ಅಥವಾ ಪಾಲಿಸದಿದ್ದರೆ ಅನುಸೂಚಿ VIIರಲ್ಲಿ ನಿರ್ದಿಷ್ಟಪಡಿಸಲಾದ ಮೊತ್ತಕ್ಕಿಂತ ಎರಡು ಪಟ್ಟು ದಂಡವನ್ನು ವಿಧಿಸುವ ಅಧಿಕಾರವನ್ನು ಬಿಬಿಎಂಪಿ ಹೊಂದಿರುತ್ತದೆ. ಇಂತಹುದೇ ಉಲ್ಲಂಘನೆ ಅಥವಾ ಮೂರನೇ ಬಾರಿಯೂ ಪಾಲನೆ ಮಾಡದೇ ಇದ್ದರೆ ಅನುಸೂಚಿ VIIರಲ್ಲಿ ನಿರ್ದಿಷ್ಟಪಡಿಸಲಾದ ಮೊತ್ತಕ್ಕಿಂತ ಮೂರು ಪಟ್ಟು ದಂಡವನ್ನು ವಿಧಿಸುವ ಅಧಿಕಾರ ಬಿಬಿಎಂಪಿಗೆ ಇರುತ್ತದೆ. ಇದಾದ ತರುವಾಯ ನಾಲ್ಕನೇ ಬಾರಿಯೂ ಇಂತಹುದೇ ಉಲ್ಲಂಘನೆ ಮಾಡಿದರೆ ಇಂತಹ ಅಪರಾಧಿಯ ವ್ಯಾಪಾರದ ಪರವಾನಗಿಯನ್ನು ಅಮಾನತು/ರದ್ದು ಮಾಡುವ ಅಥವಾ ಆತನ ವಿರುದ್ಧ ಪ್ರಕರಣ ದಾಖಲಿಸುವುದೂ ಸೇರಿದಂತೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವ ಅಧಿಕಾರ ಬಿಬಿಎಂಪಿಗೆ ಇರುತ್ತದೆ. ಒಂದು ವೇಳೆ ಅಪರಾಧವು ದೊಡ್ಡ ಪರಿಣಾಮವನ್ನು ಪರಿಸರದ ಹೊಂದಿರುವ ಅಥವಾ ಸಾರ್ವಜನಿಕ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡುವವರಿಗೆ ಅನುಸೂಚಿ VIIರಲ್ಲಿ ನಿರ್ದಿಷ್ಟಪಡಿಸಲಾದ ಮೊತ್ತಕ್ಕಿಂತ ಹೆಚ್ಚಿನ ದಂಡ ರೂ.5.00 ಲಕ್ಷವರೆಗೆ ವಿಧಿಸಬಹುದು ಜೊತೆಗೆ ಪೊಲೀಸ್‌ರಲ್ಲಿ ಪ್ರಕರಣ ದಾಖಲಿಸಬೇಕು.

(2) ಅನುಸೂಚಿ VIIರಲ್ಲಿ ಪ್ರಸ್ತಾಪ ಮಾಡಿರುವ ಜುಲ್ಮಾನೆ ಅಥವಾ ದಂಡವನ್ನು ಅಗತ್ಯಕ್ಕೆ ತಕ್ಕಂತೆ ಮತ್ತು ಬಿಬಿಎಂಪಿ ಕೈಗೊಳ್ಳುವ ನಿರ್ಧಾರದಂತೆ ಕಾಲಕಾಲಕ್ಕೆ ಏರುಮುಖವಾಗಿ ಪರಿಷ್ಕರಣೆ ಮಾಡಬೇಕು. ಜೊತೆಗೆ ದಂಡದ ಮೊತ್ತವನ್ನು ಹೆಚ್ಚಿಸಲು ಈ ಉಪನಿಯಮಗಳ ಅನುಸೂಚಿ VIIರಲ್ಲಿ ಪ್ರಸ್ತಾಪ ಮಾಡಲಾದ ಯಾವುದೇ ದಾಖಲೆಗಳನ್ನು ಕಾನೂನಿಗೆ ಅನ್ವಯವಾಗುವಂತೆ ಯಾವುದೇ ಸಮಯದಲ್ಲಿ ಬದಲಾವಣೆ ಅಥವಾ ತಿದ್ದುಪಡಿ ಅಥವಾ ಮಾರ್ಪಾಡು ಮಾಡಬಹುದಾಗಿದೆ.

(3) ಬಿಬಿಎಂಪಿಯ ನೌಕರರು ತ್ಯಾಜ್ಯ (ಕಸ) ಸಂಗ್ರಹ ಅಥವಾ ಸಾಗಾಟ ಮಾಡುವ ಸಂದರ್ಭದ ಯಾವುದೇ ಹಂತದಲ್ಲಿ ಬೇರ್ಪಡಿಸಿದ ಘನತ್ಯಾಜ್ಯವನ್ನು ಮಿಶ್ರಣಗೊಳಿಸಿದ್ದು ಕಂಡುಬಂದರೆ, ನಿರ್ದಿಷ್ಟ ಸಮಯದಲ್ಲಿ ಘನತ್ಯಾಜ್ಯವನ್ನು ಎತ್ತುವಳಿ ಮಾಡುವುದರಲ್ಲಿ ವಿಫಲವಾದರೆ ಅಥವಾ ಎಸ್‌ಡಬ್ಲ್ಯುಎಂ ನಿಯಮ-2016 ಮತ್ತು ಈ ಉಪವಿಧಿಗಳ ಅನುಬಂಧಗಳಲ್ಲಿ ಇನ್ನಿತರ ಯಾವುದೇ ರೀತಿಯ ಉಲ್ಲಂಘನೆ ಮಾಡಿದರೆ ಅಂತಹವರ ವಿರುದ್ಧ ಬಿಬಿಎಂಪಿ ಸೂಕ್ತ ಇಲಾಖಾ ಕ್ರಮಗಳನ್ನು ಕೈಗೊಳ್ಳುತ್ತದೆ. ಇಂತಹ ಇಲಾಖಾ ಕ್ರಮಗಳಲ್ಲಿ, ಅನುಸೂಚಿ VIIರಲ್ಲಿ ಪ್ರಸ್ತಾಪಿಸಿದಂತೆ ದಂಡಗಳನ್ನು ವಿಧಿಸುವುದು, ಶಿಸ್ತುಕ್ರಮಗಳನ್ನು ಆರಂಭಿಸುವುದು, ವೇತನದಲ್ಲಿ ಕಡಿತ ಅಥವಾ ವೇತನವನ್ನು ಹಿಡಿದಿಟ್ಟುಕೊಳ್ಳುವುದು ಕೂಡ ಸೇರಿರುತ್ತದೆ. ಸಂಗ್ರಹ, ಸಾಗಾಟ, ಸಂಸ್ಕರಣೆ ಹಾಗೂ ವಿಲೇ ಕಾರ್ಯಾಚರಣೆ ನಡೆಸುವ ಎಲ್ಲಾ ಎಸ್‌ಡಬ್ಲ್ಯುಎಂ ಅಧಿಕಾರಿಗಳಿಗೆ ಮೇಲ್ಕಂಡವು ಅನ್ವಯವಾಗುತ್ತದೆ.

(4) ಎಸ್‌ಡಬ್ಲ್ಯುಎಂ ನಿಯಮಗಳು ಮತ್ತು/ಅಥವಾ ಈ ಉಪನಿಯಮಗಳ ಅನುಬಂಧಗಳನ್ನು ಯಾವುದೇ ರೀತಿಯ ಉಲ್ಲಂಘನೆ ಅಥವಾ ಅನುಪಾಲನೆ ಮಾಡುವಲ್ಲಿ ವಿಫಲವಾದ ನೋಂದಾಯಿತ ಸೇವಾದಾರರ ಆಯ್ದ ಮಾರಾಟಗಾರ ಅಥವಾ ಅಧೀಕೃತ ತ್ಯಾಜ್ಯ ಸಂಸ್ಕರಣಾದಾರರ ವಿರುದ್ಧ ಈ ಕೆಳಗಿನ ಯಾವುದೇ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ಬಿಬಿಎಂಪಿ ಹೊಂದಿರುತ್ತದೆ:

(i) ಮೊದಲ ಬಾರಿ ಮಾಡುವ ಅಪರಾಧಕ್ಕೆ ರೂ.50,000 (ರೂಪಾಯಿ ಐವತ್ತು ಸಾವಿರ) ತನಕ ದಂಡ ವಿಧಿಸಬಹುದು ಮತ್ತು ಎರಡು ಅಥವಾ ಆ ಬಳಿಕದ ನಿರಂತರ ಅಪರಾಧಕ್ಕೆ ಮೊದಲ ಬಾರಿಯ ಅಪರಾಧಕ್ಕೆ ವಿಧಿಸಿದ ದಂಡದ ಮೊತ್ತಕ್ಕಿಂತ ಎರಡು ಪಟ್ಟು ದಂಡವನ್ನು ವಿಧಿಸಬಹುದಾಗಿದೆ,

(ii) ವಾಹನವನ್ನು ಜಪ್ತಿ ಮಾಡುವುದು ಮತ್ತು ಬಿಬಿಎಂಪಿಯೊಂದಿಗೆ ಮಾಡಿಕೊಂಡ ಗುತ್ತಿಗೆಯನ್ನು ಅಥವಾ ಸಿ & ಡಿ ತ್ಯಾಜ್ಯ ನಿರ್ವಹಣೆ / ಬೃಹತ್ ತ್ಯಾಜ್ಯ ನಿರ್ವಹಣೆ / ಘನತ್ಯಾಜ್ಯ ನಿರ್ವಹಣೆಗೆ ಮಾಡಿಕೊಂಡ ವ್ಯವಸ್ಥೆಯನ್ನು ರದ್ದು ಮಾಡುವುದು, ಬಿಬಿಎಂಪಿ ಮಂಜೂರು ಮಾಡಿದ ನೋಂದಾವಣೆ ಪ್ರಮಾಣ ಪತ್ರ ಅಥವಾ ಇನ್ನಿತರ ಯಾವುದೇ ಅಧಿಕಾರವನ್ನು ರದ್ದು ಮಾಡುವುದು; ಮತ್ತು/ಅಥವಾ

(iii) ಎಸ್‌ಡಬ್ಲ್ಯುಎಂ ನಿಯಮಗಳು, ಈ ಉಪವಿಧಿಗಳ ಮತ್ತು/ಅಥವಾ ಬಿಬಿಎಂಪಿಯಲ್ಲಿ ಅನ್ವಯವಾಗುವ ಇತರ ಯಾವುದೇ ನಿಬಂಧನೆಗಳ ಅಡಿಯಲ್ಲಿ, ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹ, ಸಾಗಾಟ ಮತ್ತು ಸಂಸ್ಕರಣವನ್ನು ಕೈಗೊಳ್ಳಲು ನೀಡಲಾದ ಯಾವುದೇ ಪರವಾನಗಿಯನ್ನು ಕನಿಷ್ಠ ಐದು ವರ್ಷಗಳ ಮಟ್ಟಿಗೆ ಅಮಾನತು ಅಥವಾ ರದ್ದು ಮಾಡುವುದು.

(5) ಪ್ರಸ್ತಾವಿತ ಉಪವಿಧಿಗಳು ಮತ್ತು 1976ರ ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆಯ ಅಡಿಯಲ್ಲಿ ಕೈಗೊಳ್ಳುವ ಯಾವುದೇ ಕ್ರಮಗಳಿಗೆ ಹೆಚ್ಚುವರಿಯಾಗಿ, ಅಗತ್ಯವೆನಿಸಿದರೆ 1986ರ ಪರಿಸರ (ಸಂರಕ್ಷಣೆ) ಕಾಯ್ದೆ, 1860ರ ಭಾರತೀಯ ದಂಡ ಸಂಹಿತೆ, 1974 ಜಲ (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ, 1981ರ ವಾಯು (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯ್ದೆ ಸೇರಿದಂತೆ ಇನ್ನಿತರ ಯಾವುದೇ ಕಾಯ್ದೆಯಡಿಯಲ್ಲಿ ದತ್ತವಾದ ಯಾವುದೇ ಅವಕಾಶಗಳ ಅಡಿಯಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಬಿಬಿಎಂಪಿಗೆ ಇರುತ್ತದೆ.

(6) ಈ ಉಪವಿಧಿ ಅಡಿಯಲ್ಲಿ ಎಸ್‌ಡಬ್ಲ್ಯೂಎಂ ಬಳಕೆದಾರರ ಶುಲ್ಕದಿಂದ ಸಂಗ್ರಹವಾದ ಎಲ್ಲ ಮೊತ್ತವನ್ನೂ ಘನತ್ಯಾಜ್ಯ ನಿರ್ವಹಣೆಗಾಗಿ ನಿರ್ವಹಿಸಲಾಗುವ ಸೀಮಿತ ಪ್ರತ್ಯೇಕ ಬ್ಯಾಂಕ್ ಖಾತೆಗೆ (ಎಸ್ಕ್ರೋ ಬ್ಯಾಂಕ್ ಅಕೌಂಟ್) ವರ್ಗಾಯಿಸಬೇಕು. ಉಪವಿಧಿ ಅಡಿಯಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಬಿಬಿಎಂಪಿ ಕಾರ್ಯಾಚರಣೆ ಮತ್ತು ನಿರ್ವಹಣೆ ವೆಚ್ಚಕ್ಕಾಗಿ, ಸಿಬ್ಬಂದಿಯ ಸಂಬಳ, ಪ್ರೋತ್ಸಾಹಧನ, ಅನುದಾನ ಹಾಗೂ ಕಾಲ ಕಾಲಕ್ಕೆ ಬಿಬಿಎಂಪಿಯಿಂದ ಸೂಕ್ತ ಎಂದು ಪರಿಗಣಿಸಲ್ಪಡುವ ಇನ್ನಿತರ ಬಳಕೆಗೆ ಈ ಮೊತ್ತವನ್ನು ಅಗತ್ಯಕ್ಕೆ ತಕ್ಕಂತೆ ಬಳಸಬಹುದು. ಈ ಮೊತ್ತವನ್ನು ಎಸ್‌ಡಬ್ಲ್ಯುಎಂನ ಪ್ರಮುಖ ಕಾರ್ಯಚಟುವಟಿಕೆಗಳ ಹೊರತಾಗಿ ಬೇರೆ ಯಾವುದಕ್ಕೂ ಬದಲಿಸಬಾರದು.

**29. ಘನತ್ಯಾಜ್ಯ ಮತ್ತು ಕಟ್ಟಡ ನಿರ್ಮಾಣ ಹಾಗೂ ಭಗ್ನಾವಶೇಷ ತ್ಯಾಜ್ಯವನ್ನು ರಾಶಿ ಹಾಕುವುದು:-** (1) ಖಾಲಿ ಇರುವ ನಿವೇಶನದಲ್ಲಿ ಘನ ತ್ಯಾಜ್ಯವನ್ನು ರಾಶಿ ಹಾಕುವುದು ಹಾಗೂ ನಿಯೋಜಿತವಲ್ಲದ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯವನ್ನು ಸಂಗ್ರಹ ಮಾಡುವುದಕ್ಕೆ, ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷದ ತ್ಯಾಜ್ಯದ ನಿರ್ವಹಣೆಗಾಗಿ ಇರುವ ಉಪನಿಯಮಗಳಿಗೆ ಅನುಗುಣವಾಗಿ ಬಿಬಿಎಂಪಿಯು ಈ ಕೆಳಗಿನ ರೀತಿಯಲ್ಲಿ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ:-

(ಎ) ಪ್ರಕರಣಕ್ಕೆ ಅನುಗುಣವಾಗಿ ಸಂಬಂಧಪಟ್ಟ ತ್ಯಾಜ್ಯ ಉತ್ಪಾದಕ ಮತ್ತು/ಅಥವಾ ಆ ಆವರಣದ ಅನುಭೋಗದಾರರಿಗೆ ನೋಟಿಸ್ ಜಾರಿ ಮಾಡಿ, ಅಂತಹ ಆವರಣದಲ್ಲಿಇರುವ ಯಾವುದೇ ತ್ಯಾಜ್ಯವನ್ನುಅಂತಹ ನೋಟಿಸ್‌ನಲ್ಲಿ ನಿರ್ದಿಷ್ಟಪಡಿಸಲಾದ ಕಾಲಾವಧಿಯ ಒಳಗೆ ತೆರವುಗೊಳಿಸುವಂತೆ ಸೂಚನೆ ನೀಡಬಹುದಾಗಿದೆ.

(ಬಿ) ಈ ನೋಟಿಸ್‌ನಲ್ಲಿ ವಿಧಿಸಲಾದ ಅಗತ್ಯಗಳನ್ನು ಪಾಲನೆ ಮಾಡುವಲ್ಲಿ ಯಾರಿಗೆ ನೋಟಿಸ್ ನೀಡಲಾಗಿದೆಯೋ ಆ ವ್ಯಕ್ತಿಯು ವಿಫಲವಾದರೆ ಬಿಬಿಎಂಪಿಯು ಈ ಕೆಳಗಿನ ಎಲ್ಲಾ ಅಥವಾ ಯಾವುದಾದರೂ ಒಂದು ಕ್ರಮವನ್ನು ಕೈಗೊಳ್ಳಬೇಕು:

(i) ಅಂತಹ ಆವರಣದೊಳಗೆ ಪ್ರವೇಶ ಮಾಡಿ ತ್ಯಾಜ್ಯವನ್ನು ತೆರವುಗೊಳಿಸುವುದು ಮತ್ತು ಅದಕ್ಕಾಗಿ ತಗುಲಿದ ಖರ್ಚನ್ನು ಆ ವ್ಯಕ್ತಿಯಿಂದ ವಸೂಲಿ ಮಾಡುವುದು; ಅಥವಾ

(ii) ಘನತ್ಯಾಜ್ಯ ಅಥವಾ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯವನ್ನು ರಾಶಿ ಹಾಕಿದ್ದಕ್ಕೆ ಈ ಉಪ-ವಿಧಿಗಳಿಗೆ ಅನುಗುಣವಾಗಿ ಅಗತ್ಯವೆನಿಸಿದರೆ ರೂ.50,000/-ತನಕ ದಂಡ ವಿಧಿಸುವುದು.

**ಅಧ್ಯಾಯ XII**

**ಬಿಬಿಎಂಪಿಯ ಇನ್ನಿತರ ಜವಾಬ್ದಾರಿ ಮತ್ತು ಕರ್ತವ್ಯಗಳು**

**30. ಬಿಬಿಎಂಪಿಯ ಇನ್ನಿತರ ಜವಾಬ್ದಾರಿ ಮತ್ತು ಕರ್ತವ್ಯಗಳು:-** ಈ ಉಪವಿಧಿಯ ಈ ಮೊದಲಿನ ಅಧ್ಯಾಯಗಳಲ್ಲಿ ಉಲ್ಲೇಖಿಸಿರುವ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಜೊತೆಗೆ ಹೆಚ್ಚುವರಿಯಾಗಿ ಬಿಬಿಎಂಪಿಯು ಈ ಕೆಳಗೆ ನಮೂದಿಸಿರುವ ಹೆಚ್ಚುವರಿ ಕರ್ತವ್ಯಗಳನ್ನೂ ಒಳಗೊಂಡಿರುತ್ತದೆ. ಅವುಗಳನ್ನು ಹೀಗೆ ಹೆಸರಿಸಬಹುದು:

(1) ವಾರ್ಡ್ ಮೈಕ್ರೋಪ್ಲಾನ್:- ಬಿಬಿಎಂಪಿ ಸಂಬಂಧಿಸಿದ ಪಾಲುದಾರರೊಡನೆ ಚರ್ಚೆ ನಡೆಸಿ ವಾರ್ಡ್‌ನ ಪ್ರತಿಯೊಂದು ಬ್ಲಾಕ್‌ನಲ್ಲಿಯೂ ತ್ಯಾಜ್ಯ ನಿರ್ವಹಣೆ ಮೈಕ್ರೋಪ್ಲಾನ್ (ಲಘು ಯೋಜನೆ) ರಚಿಸಬೇಕು ಹಾಗೂ ಇದರ ಅನುಷ್ಠಾನವನ್ನು ವಾರ್ಡ್ ಸಮಿತಿಗಳೊಂದಿಗೆ ಖಾತರಿಪಡಿಸಬೇಕು. ಮೈಕ್ರೋಪ್ಲಾನ್ ವಾರ್ಡ್‌ನಲ್ಲಿ ನಾನಾ ಬಗೆಯ ಘನತ್ಯಾಜ್ಯಗಳನ್ನು ಸಂಗ್ರಹಿಸುವ ಸಮಯ, ಘನತ್ಯಾಜ್ಯವನ್ನು ಸಂಗ್ರಹಿಸುವ ವಾಹನ ಹಾಗೂ ಸಂಗ್ರಹಿಸುವ ಸ್ಥಳ, ವಾರ್ಡ್‌ನ ಬ್ಲಾಕ್‌ಗಳ ನಕಾಶೆ, ಕಸ ಗುಡಿಸುವ ರಸ್ತೆ/ಬೀದಿಗಳ ವಿವರ ಹಾಗೂ ಕಸ ಸಾಗಣೆಯ ಮಾರ್ಗ, ಕೆಲಸಕ್ಕೆ ಬಳಕೆಯಾಗುವ ಮಾನವ ಸಂಪನ್ಮೂಲದ ವಿವರಗಳು ಹಾಗೂ ಘನ ತ್ಯಾಜ್ಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಬಿಬಿಎಂಪಿ ಸೂಕ್ತವೆಂದು ಪರಿಗಣಿಸುವ ಇನ್ನಿತರ ಮಾಹಿತಿಗಳನ್ನು ಹೊಂದಿರಬೇಕು. ಈ ವಾರ್ಡ್ ಮೈಕ್ರೋ ಪ್ಲಾನ್ ಸಾರ್ವಜನಿಕರು ಪಡೆಯಲು ಆಗುವಂತಿರಬೇಕು.

(2) ಕಾಲಕಾಲಕ್ಕೆ ವಾರ್ಡ್ ಮೈಕ್ರೋಪ್ಲಾನ್‌ನ ಪರಿಶೀಲನೆ ಮತ್ತು ಅವಲೋಕನ:- (ಅ) ಘನತ್ಯಾಜ್ಯ ನಿರ್ವಹಣೆ ನಿಯಮ ಹಾಗೂ ಈ ಉಪವಿಧಿಯ ಅಡಿ ಬಿಬಿಎಂಪಿಯು ದೃಢೀಕರಿಸಿದ ಅಧಿಕೃತ / ನೋಡಲ್ ಅಧಿಕಾರಿಗಳು ವಾರ್ಡ್‌ನ ಬೇರೆ ಬೇರೆ ಜಾಗಗಳಲ್ಲಿ, ಕಸ ಸಂಗ್ರಹ ಸ್ಥಳ, ಅವುಗಳ ಸಾಗಣೆ, ತನ್ನ ನಿಗದಿತ ವ್ಯಾಪ್ತಿಯಲ್ಲಿ ಘನತ್ಯಾಜ್ಯಗಳ ವಿಂಗಡಣೆ ಹಾಗೂ ವಿಲೇವಾರಿಯ ಪರಿಶೀಲನೆಯನ್ನು ಕಾಲಕಾಲಕ್ಕೆ ಮಾಡಬೇಕು. ವಾರ್ಡ್ ಮೈಕ್ರೋಪ್ಲಾನ್ ಅನುಷ್ಠಾನದ ಅವಲೋಕನವನ್ನು ನಡೆಸಿ ಮಾಹೆಯಾನ ಕ್ರಮ ಕೈಗೊಂಡ ವರದಿಯನ್ನು ಬಿಬಿಎಂಪಿ ಆಯುಕ್ತರಿಗೆ ಸಲ್ಲಿಸಬೇಕು.

(ಆ) ಬಿಬಿಎಂಪಿ ಅಧಿಕೃತವಾಗಿ ನೇಮಿಸಿರುವ ಅಧಿಕಾರಿಯು ಯಾವುದೇ ಯೋಗ್ಯ ಸಮಯದಲ್ಲಿ ತನಗೆ ಅಗತ್ಯವೆನಿಸಿದ ಅಂತಹ ಸಹಾಯದೊಂದಿಗೆ ಯಾವುದೇ ಸ್ಥಳಕ್ಕೆ ಈ ಉದ್ದೇಶಗಳಿಗಾಗಿ ಪ್ರವೇಶಿಸುವ ಹಕ್ಕು ಹೊಂದಿರುತ್ತಾರೆ. (i) ಬಿಬಿಎಂಪಿ ಈ ಉಪವಿಧಿಯಡಿ ವಹಿಸಿರುವ ಯಾವುದೇ ಕೆಲಸವನ್ನು ನಿರ್ವಹಿಸುವುದು, ಅಥವಾ (ii) ಈ ಉಪವಿಧಿಯ ನಿಬಂಧನೆಗಳ ಅನುಪಾಲನೆಯನ್ನು ಖಚಿತಪಡಿಸಲು

(3) ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರ ಕಾರ್ಯಚಟುವಟಿಕೆಗಳ ಅವಲೋಕನ: ಅಧಿಕೃತ ಮತ್ತು ನೋಂದಣಿ ಕರಾರುಗಳನ್ನು ಉಪವಿಧಿಯ ನಿಬಂಧನೆಗಳನ್ನು ಅವರು ಅನುಪಾಲನೆ ಮಾಡುತ್ತಿದ್ದಾರೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳುವ ಸಲುವಾಗಿ ಬಿಬಿಎಂಪಿಯೊಂದಿಗೆ ನೋಂದಣಿ ಮಾಡಿದ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರ ಸೌಲಭ್ಯಗಳು ಮತ್ತು

ಕಾರ್ಯವೈಖರಿಯನ್ನು ಬಿಬಿಎಂಪಿ ಕಾಲಕಾಲಕ್ಕೆ ಪರಾಮರ್ಶೆ ಮಾಡಬೇಕು. ಘೋಷಿತ ಪ್ರಮಾಣಕ್ಕಿಂತ ಹೆಚ್ಚು ತ್ಯಾಜ್ಯ ಉತ್ಪಾದಕರಿಂದ ಸಂಗ್ರಹಿಸುವುದೂ ಸೇರಿದಂತೆ ಒಂದು ವೇಳೆ ಅನುಪಾಲನೆ ಆಗದ ಸಂದರ್ಭದಲ್ಲಿ ಲೋಪವೆಸಗಿದ ಅಧಿಕೃತ ತ್ಯಾಜ್ಯ ಸಂಸ್ಕರಣೆದಾರರ ಮೇಲೆ ಪರಿಹಾರ ಕ್ರಮದ ನೋಟೀಸ್, ಜೊತೆಗೆ ಅವುಗಳ ನೋಂದಾವಣಿ ಪ್ರಮಾಣ ಪತ್ರವನ್ನುಅಥವಾ ಗುತ್ತಿಗೆ ಸೇವೆಯನ್ನು ರದ್ದುಪಡಿಸುವುದರ ಜೊತೆಗೆ ಉಪವಿಧಿಯಲ್ಲಿ ನಿಗದಿಪಡಿಸಿರುವ ದಂಡ ಮತ್ತು ಶಿಕ್ಷೆ ವಿಧಿಸಬಹುದಾಗಿದೆ.

(4) ಪ್ರಚಾರ ಮತ್ತು ನಾಗರಿಕ ಮಾಹಿತಿ ಸೇವೆ: (i) ನಿಯಮ 15 (ಝಡ್‌ಜಿ)ಗೆ ಅನುಸಾರವಾಗಿ ಬಿಬಿಎಂಪಿಯು ಎಸ್‌ಡಬ್ಲ್ಯುಎಂ ನಿಯಮಗಳು 2016ರ ನಿಬಂಧನೆಗಳನ್ನು ಮತ್ತು ಉಪವಿಧಿಗಳು 2020ನ್ನು. ಮಾಧ್ಯಮಗಳು, ಸಂಜ್ಞಾ ಫಲಕಗಳು, ಜಾಹೀರಾತು, ರೇಡಿಯೊ ಮತ್ತು ದೂರದರ್ಶನಗಳಲ್ಲಿ ಪ್ರಸಾರ ಮಾಡುವುದು, ಪತ್ರಿಕೆಗಳಲ್ಲಿ ಪ್ರಕಟಣೆ, ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಹಾಗೂ ಇನ್ನಿತರ ಯಾವುದೇ ಸೂಕ್ತ ಕ್ರಮದ ಮೂಲಕ ಎಲ್ಲಾ ನಾಗರಿಕರಿಗೆ ಅವರ ಕರ್ತವ್ಯದ ಕುರಿತು ಜಾಗೃತಿ ಮೂಡಿಸುವುದು. ಹಾಗೇ ಬಿಬಿಎಂಪಿಯು, ಬೇರ್ಪಡಿಸುವಿಕೆ, ಮರುಬಳಕೆ, ಕಸ ಎಸೆಯುವುದು, ಉಪದ್ರವ ಮಾಡುವುದು, ಶಿಕ್ಷೆ ಹಾಗೂ ದಂಡ ಇವೇ ಮೊದಲಾದವುಗಳ ಬಗ್ಗೆ ನಾಗರಿಕರಲ್ಲಿ ಜಾಗೃತಿಯನ್ನು ಮೂಡಿಸಲು ಬಿಬಿಎಂಪಿ ತನ್ನ ಉಪವಿಧಿಯನ್ನು ಪ್ರಚುರಪಡಿಸಬೇಕು. ಗೊಬ್ಬರ ತಯಾರಿಕೆ, ಜೈವಿಕ ಅನಿಲ ತಯಾರಿಕೆ, ಮರುಬಳಕೆ, ತ್ಯಾಜ್ಯ ಪ್ರಕ್ರಿಯೆಯ ವಿಕೇಂದ್ರೀಕರಣಗಳ ಕುರಿತು ಸಮುದಾಯ ಹಂತದಲ್ಲಿ, ಗೊಬ್ಬರ ಸಂತೆಗಳಲ್ಲಿ ತರಬೇತಿ, ಕಾರ್ಯಾಗಾರಗಳ ಮೂಲಕ ಮಾಹಿತಿಯನ್ನು ಒದಗಿಸುವುದು.

(ii) ಬಿಬಿಎಂಪಿಯು ಘನತ್ಯಾಜ್ಯ ನಿರ್ವಹಣೆ ಮಾಹಿತಿ ಮ್ಯಾನ್ಯುಯಲ್‌ಗಳನ್ನು ಪ್ರಕಟಿಸಬೇಕು. ಇದು ವಾರ್ಡ್ ಮಟ್ಟದಲ್ಲಿ ವಿವರವಾದ ಅಂಕಿ ಅಂಶ (ಡೇಟಾ) ಒದಗಿಸುತ್ತದೆ ಮತ್ತು ತಳಮಟ್ಟದಲ್ಲಿ ಬೆಂಬಲ ಮತ್ತು ಅನುಷ್ಠಾನ ಪ್ರಕ್ರಿಯೆಯನ್ನು ಬೆಂಬಲಿಸುತ್ತದೆ. ಇದನ್ನು ಕಾಲ ಕಾಲಕ್ಕೆ ಅಪ್‌ಡೇಟ್ ಮಾಡಬೇಕು.

(5) ಎಸ್‌ಡಬ್ಲ್ಯುಎಂ ಕೋಶ ಮತ್ತು ನಿಯೋಜಿತ / ನೋಡಲ್ ಅಧಿಕಾರಿಗಳು:- (i) ಎಸ್‌ಡಬ್ಲ್ಯುಎಂ ಕಾರ್ಯಚಟುವಟಿಕೆಗಳನ್ನು ಮತ್ತು ಎಸ್‌ಡಬ್ಲ್ಯುಎಂ ವ್ಯವಸ್ಥೆಯ ನಿರ್ವಹಣೆಯನ್ನು ಸರಳಗೊಳಿಸಿ ಹೆಚ್ಚು ಸಮರ್ಥವಾಗುವಂತೆ ಮಾಡಲು ಬಿಬಿಎಂಪಿಯು ಘನತ್ಯಾಜ್ಯ ನಿರ್ವಹಣಾ ಕೋಶವನ್ನು ರಚಿಸಬೇಕು. ಸಂಘಟಿತಗೊಂಡಿರುವ ತ್ಯಾಜ್ಯ ನಿರ್ವಹಣೆ ಸೇವೆಯನ್ನು ಗುಣಮಟ್ಟದೊಂದಿಗೆ, ಒಳಗೊಳ್ಳುವಿಕೆಯೊಂದಿಗೆ ಮತ್ತು ಸಮರ್ಥವಾಗಿ ಮತ್ತು ಎಸ್‌ಡಬ್ಲ್ಯುಎಂ ನಿಯಮಾವಳಿ 2016ರ ನಿಯಮ (15) ರಂತೆ ಒದಗಿಸುವ ಮೂಲಕ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ನಿರಂತರ ಶ್ರಮವಹಿಸಬೇಕು. ಎಸ್‌ಡಬ್ಲ್ಯುಎಂ ಕೋಶವು ಕೇಂದ್ರ ಕಚೇರಿ ಮತ್ತು ವಲಯ ಮಟ್ಟದಲ್ಲಿ ಎರಡು ಹಂತದ ವ್ಯವಸ್ಥೆಯನ್ನು ಹೊಂದಿರಬೇಕು.

(ii) ಈ ಉಪನಿಯಮ ಎಸ್‌ಡಬ್ಲ್ಯುಎಂ ನಿಯಮಗಳನ್ನು ಅನುಷ್ಠಾನಗೊಳಿಸುವ ಅಧಿಕೃತ ಅಧಿಕಾರಿ ಅಥವಾ ಸಂಬಂಧಿಸಿದ ಪ್ರಾಧಿಕಾರ ತಮ್ಮ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವಂತಹ ಅಧಿಕಾರಿಗಳು / ನೋಡಲ್ ಅಧಿಕಾರಿಗಳನ್ನು ನಿಯೋಜಿಸಬೇಕು ಮತ್ತು ಅವರ ಜವಾಬ್ದಾರಿಗಳು,

(ಅ) ಉಪನಿಯಮದಲ್ಲಿ ಸೂಚಿಸಿರುವ ನಿಬಂಧನೆಗಳ ಅನುಷ್ಠಾನದಲ್ಲಿ ಬಿಬಿಎಂಪಿಯ ಜವಾಬ್ದಾರಿಗಳನ್ನು ಅನುಷ್ಠಾನಗೊಳಿಸುವುದು.

(ಆ) ತ್ಯಾಜ್ಯ ಉತ್ಪಾದಕರ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ಉಪನಿಯಮಗಳ ಅನುಷ್ಠಾನದಲ್ಲಿ ಸುಧಾರಣೆ ತರಲು ಸಲಹೆಗಳು.

(ಇ) ದಂಡ ಮತ್ತು ಶಿಕ್ಷೆ ವಿಧಿಸುವುದು.

(ಈ) ಬಿಬಿಎಂಪಿಯಿಂದ ಕಾಲಕಾಲಕ್ಕೆ ಸಕಾಲಿಕವೆಂದು ಸೂಚಿತವಾಗುವ ಸೂಕ್ತ ಕೆಲಸಗಳ ನಿರ್ವಹಣೆ.

(6) ಪಾರದರ್ಶಕತೆ ಮತ್ತು ಸಾರ್ವಜನಿಕ ಮಾಹಿತಿ ಸೌಲಭ್ಯ: ಪಾರದರ್ಶಕತೆಯನ್ನು ಖಾತರಿಪಡಿಸುವುದು ಹಾಗೂ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವಂತೆ ಹೆಚ್ಚು ಮಾಡುವ ನಿಟ್ಟಿನಲ್ಲಿ ಬಿಬಿಎಂಪಿ ತನ್ನ ಉಪವಿಧಿಯಲ್ಲಿರುವ ಈ ಮಾಹಿತಿಗಳನ್ನು ಹಾಗೂ ದತ್ತಾಂಶಗಳನ್ನು ಹಾಗೂ ಉಪವಿಧಿಯಡಿ ಕೈಗೊಳ್ಳುವ ಚಟುವಟಿಕೆಗಳ ಕುರಿತು ಮಾಹಿತಿ ಮತ್ತು ತಂತ್ರಜ್ಞಾನದ ಮೂಲಕ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು. ಹಾಗೇ ಈ ಮಾಹಿತಿಗಳು ಬಿಬಿಎಂಪಿಯ ಕಚೇರಿಗಳಲ್ಲಿ ಕೆಲಸದ ವೇಳೆಯಲ್ಲಿ ಲಭ್ಯವಾಗುವಂತೆ ಮಾಡುವುದು ಅವುಗಳೆಂದರೆ,

(ಅ) ಈ ಉಪವಿಧಿಯಡಿ ಬಿಬಿಎಂಪಿ ನಿರ್ದಿಷ್ಟಪಡಿಸಿರುವ ಕಡ್ಡಾಯ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿರುವ ಅಧಿಕೃತ / ನೋಡಲ್ ಅಧಿಕಾರಿಗಳ ಹೆಸರು ಮತ್ತು ಸಂಪರ್ಕ ವಿವರಗಳು;

(ಆ) ಘನತ್ಯಾಜ್ಯ ಸಂಸ್ಕರಣಾ ಘಟಕಗಳು ಹಾಗೂ ಸ್ಯಾನಿಟರಿ ನೆಲಭರ್ತಿಗಳಿಗೆ ರವಾನೆಯಾಗುವ ಪ್ರತಿ ವರ್ಗದ ಘನತ್ಯಾಜ್ಯಗಳ ಪ್ರಮಾಣದ ಮಾಸಿಕ ದತ್ತಾಂಶ;

(ಇ) ಬಂದಿರುವ ದೂರುಗಳು ಹಾಗೂ ಅವುಗಳ ಪರಿಹಾರಕ್ಕೆ ಬಿಬಿಎಂಪಿ ಕೈಗೊಂಡಿರುವ ಕ್ರಮಗಳ ಅಂಕಿ ಅಂಶ;

(ಈ) ಘನತ್ಯಾಜ್ಯ ಕರ, ಘನತ್ಯಾಜ್ಯ ಬಳಕೆದಾರರ ಶುಲ್ಕ, ಶಿಕ್ಷೆ ಮತ್ತು ದಂಡಗಳನ್ನು ಬಿಬಿಎಂಪಿ ಹಾಗೂ ಬಿಬಿಎಂಪಿ ಪರವಾಗಿ ಸಂಗ್ರಹಿಸಿದ ವಿವರಗಳು ಮತ್ತು ಈ ಮೊತ್ತವನ್ನು ಬಳಕೆ ಮಾಡಿಕೊಂಡ ವಿವರಗಳು;

(ಉ) ಘನತ್ಯಾಜ್ಯ ನಿರ್ವಹಣೆ ಉದ್ದೇಶಕ್ಕೆ ಬಳಕೆಯಾಗುವ ವಾಹನಗಳ ಚಲನವಲನಗಳ ಮೇಲೆ ಇಟ್ಟಿರುವ ಜಿ.ಪಿ.ಎಸ್. ನಿಗಾವಣೆ ಮತ್ತು ಸ್ಮಾರ್ಟ್‌ಡಾಟಾ ಸೆಂಟರ್ನ ವಿವರ ಮತ್ತು ವರದಿ;

(ಊ) ಘನತ್ಯಾಜ್ಯ ನಿರ್ವಹಣೆಯ ನಿಬಂಧನೆ ಹಾಗೂ ಈ ಉಪವಿಧಿಗಳಡಿ ನೀಡಿರುವ ನಿಬಂಧನೆಗಳ ಅನುಪಾಲನೆ ಕುರಿತು ಮತ್ತು ಹಠಾತ್ ಭೇಟಿಗಳ ಮೂಲಕ ಬಿಬಿಎಂಪಿ ಪರಿಶೀಲನೆ ವಿವರಗಳು ಮತ್ತು ಸ್ಥಿತಿಗತಿ.

(7) ಉತ್ಪಾದಕರ ವಿಸ್ತರಿತ ಜವಾಬ್ದಾರಿ: ಘನತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಹಾಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು 2016ರ ಅಡಿಯಲ್ಲಿ ಉತ್ಪಾದಕರು ಹಾಗೂ ತಯಾರಕರ ವಿಸ್ತರಿತ ಜವಾಬ್ದಾರಿಗಳ ಕುರಿತು ಬಿಬಿಎಂಪಿ ನಿಗಾವಹಿಸುವುದು ಮತ್ತು ಅದನ್ನು ಖಾತರಿಪಡಿಸುವುದು. ಇ.ಪಿ.ಆರ್. ನ ಅಡಿ ನಿರ್ದಿಷ್ಟವಾದ ತ್ಯಾಜ್ಯಗಳಿಗೆ ಲಭ್ಯವಾಗುವ ಹಣವನ್ನು ಸಂಗ್ರಹ ವೆಚ್ಚ, ಸಾಗಾಣಿಕೆ, ಸಂಸ್ಕರಣೆ ಹಾಗೂ ವಿಲೇವಾರಿಗೆ ಬಳಕೆಯಾಗುವುದನ್ನು ಖಾತರಿಪಡಿಸಿಕೊಳ್ಳುವಲ್ಲಿ ಕಾರ್ಯನಿರತವಾಗುವುದು.

(8) ನಿಯಮಿತವಾಗಿ ಶುಚಿಗೊಳಿಸುವುದು ಮತ್ತು ರಸ್ತೆಗುಡಿಸುವಿಕೆ: (ಎ) ಬಿಬಿಎಂಪಿಯು ತನ್ನ ನಿಗದಿತ ವ್ಯಾಪ್ತಿಯಲ್ಲಿ ಎಲ್ಲಾ ಬೀದಿಗಳು, ಪಾದಚಾರಿ ಮಾರ್ಗಗಳು, ಬೀದಿಬದಿಗಳು ಮತ್ತು ರಸ್ತೆ ಬದಿಯ ತೆರೆದ ಚರಂಡಿಗಳು/ ಚರಂಡಿಗಳ ಬಾಯಿಯ ರಸ್ತೆಯ ಒಂದು ತುದಿಯಿಂದ ಮತ್ತೊಂದು ತುದಿಗೆ ಪ್ರತಿ ದಿನದಂತೆ ಅಥವಾ ಅನುಸೂಚಿ VIII ರಲ್ಲಿರುವ ರಸ್ತೆಗುಡಿಸುವ ನಿಯಮಗಳಲ್ಲಿ ಸೂಚಿಸಿರುವಂತೆ ಜವಾಬ್ಧಾರಿ ಹೊಂದಿರುತ್ತದೆ. ರಸ್ತೆಗಳಲ್ಲಿ, ಪಾದಚಾರಿ ಮಾರ್ಗಗಳಲ್ಲಿರುವ ಮತ್ತು ರಸ್ತೆ ಬದಿಯ ತೆರೆದ ಚರಂಡಿಗಳಲ್ಲಿರುವ / ಚರಂಡಿಗಳ ಮುಚ್ಚಳಗಳ ಮೇಲಿರುವ ಎಲ್ಲಾ ಸಸ್ಯರಾಶಿ / ಪೊದೆ ಹಾಗೂ ಕಳೆಗಳನ್ನು ಅನುಸೂಚಿಯಂತೆ ನಿಯಮಿತವಾಗಿ ಬುಡಸಮೇತ ಕಿತ್ತು ಹಾಕಬೇಕು ಮತ್ತು ಕಾಲಕಾಲಕ್ಕೆ ನಿಗದಿಗೊಳಿಸಲಾದ ರೀತಿಯಲ್ಲಿ ರಸ್ತೆ ಗುಡಿಸಿದ ತ್ಯಾಜ್ಯದೊಂದಿಗೆ ಅನುಸೂಚಿಯಂತೆ ವಿಲೇವಾರಿ ಮಾಡಬೇಕು ಮತ್ತು ಪ್ರಾಥಮಿಕ ಸಂಗ್ರಹ ವಾಹನಗಳಿಂದ ದ್ವಿತೀಯ ಹಂತದ ವಾಹನಗಳ ಮೂಲಕ ಸಾಗಾಟ ಮಾಡಬೇಕು. ಕಾಲು ಹಾದಿಯ ಅಂಚುಗಳು ಮತ್ತು ವಿಭಜಕಗಳ (ರಸ್ತೆ)ನ್ನು ಸಡಿಲಗೊಂಡಿರುವ ಕಲ್ಲುಗಳನ್ನು ತೆಗೆಯುವುದರೊಂದಿಗೆ ಕೂಡ ಪ್ರತಿದಿನ ಸ್ವಚ್ಛಗೊಳಿಸಬೇಕು. ಗುಡಿಸುವ ಚಟುವಟಿಕೆಗಳು ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಅಡ್ಡಿ ಉಂಟಾಗದೇ ಇರುವುದಕ್ಕಾಗಿ ಎಚ್ಚರಿಕೆ ವಹಿಸಬೇಕು ಮತ್ತು ಪೌರಕಾರ್ಮಿಕರ ಸುರಕ್ಷತೆಯನ್ನು (ಬೀದಿ ಗುಡಿಸುವವರು) ಖಾತರಿಪಡಿಸಿಕೊಳ್ಳಬೇಕು.

(ಬಿ) ಬಿಬಿಎಂಪಿಯು ತನ್ನ ವ್ಯಾಪ್ತಿಯೊಳಗಿನ ಸಾರ್ವಜನಿಕ ಸ್ಥಳಗಳು, ಕೊಳೆಗೇರಿ ಪ್ರದೇಶಗಳು, ಮಾರುಕಟ್ಟೆ, ತೋಟಗಳು ಹಾಗೂ ಉದ್ಯಾನ ಮೊದಲಾದವುಗಳನ್ನು ಶುಚಿಗೊಳಿಸುವ, ಪೌರಕಾರ್ಮಿಕರಿಂದ ಅಥವಾ ಅಗತ್ಯ ಬಿದ್ದರೆ ಕಸಗುಡಿಸುವ ಯಂತ್ರದ ಸಹಾಯದಿಂದ ನಿರಂತರವಾಗಿ ಬೀದಿಯನ್ನು ಗುಡಿಸುವ ಕೆಲಸವನ್ನು ಮಾಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಸರ್ಕಾರವು ನಿಗದಿಪಡಿಸಿರುವ ಮಾನದಂಡದಂತೆ ಸಾರ್ವಜನಿಕ ಸ್ಥಳ ಅಥವಾ ಸಾರ್ವಜನಿಕ ರಸ್ತೆಯಲ್ಲಿ ವಾಹನಗಳ ದಟ್ಟಣೆ, ಪಾದಚಾರಿಗಳ ದಟ್ಟಣೆ ಆಧರಿಸಿ, ಜನಸಂಖ್ಯೆ ದಟ್ಟಣೆ, ವಾಣಿಜ್ಯ ವಹಿವಾಟುಗಳ ಪ್ರಮಾಣ, ಬಳಸುವ ಉಪಕರಣಗಳು, ಕಾರ್ಮಿಕ ಕಲ್ಯಾಣ / ಸುರಕ್ಷತೆ ಮತ್ತು ಸ್ಥಳೀಯ ಪರಿಸ್ಥಿತಿ ಆಧಾರದ ಮೇಲೆ ಎಷ್ಟು ಬಾರಿ ಕಸ ಗುಡಿಸಬೇಕು, ಸಮುದಾಯ ಡಬ್ಬಗಳನ್ನು ಎಲ್ಲಿ ಇರಿಸಬೇಕು ಎನ್ನುವುದರ ಬಗ್ಗೆ ಬಿಬಿಎಂಪಿ ನಿರ್ಧರಿಸಬೇಕು ಮತ್ತು ಅಧಿಸೂಚನೆ ಹೊರಡಿಸಬೇಕು. ಕಸ ಗುಡಿಸಲು ಹಾಗೂ ಶುಚಿಗೊಳಿಸುವುದಕ್ಕೆ ಅಗತ್ಯವಾಗಿ ಬೇಕಾಗಿರುವ ಪೊರಕೆಗಳು, ಕಸ ಸಂಗ್ರಹ ತಟ್ಟೆಗಳು, ಉಜ್ಜಲು ಬೇಕಾಗಿರುವ ನಾರು, ಮತ್ತಿತರ ಸೌಲಭ್ಯಗಳನ್ನು ಬಿಬಿಎಂಪಿ ಪೂರೈಕೆ ಮಾಡಬೇಕು.

(ಸಿ) ಬೀದಿ ಗುಡಿಸಿದಾಗ ಸಂಗ್ರಹವಾಗುವ ಘನತ್ಯಾಜ್ಯಗಳನ್ನು ವಿಂಗಡಿಸುವುದು. ಅಗತ್ಯಬಿದ್ದಲ್ಲಿ ಬಿಬಿಎಂಪಿ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಾಗಣೆ ಸೌಲಭ್ಯವನ್ನು ಕಲ್ಪಿಸುವುದು.

(i) ಜೈವಿಕ ವಿಘಟನೀಯ ತ್ಯಾಜ್ಯವನ್ನು ಅನುಕೂಲಕರವಾದ ಜೈವಿಕ ವಿಘಟನೀಯ ಸಂಸ್ಕರಣಾ ಘಟಕಕ್ಕೆ;

(ii) ಜೈವಿಕ ವಿಘಟನೀಯವಲ್ಲದ ತ್ಯಾಜ್ಯಗಳನ್ನು ಡಿಬ್ಲ್ಯುಸಿಸಿಗೆ ಮತ್ತು ಸಾಮಗ್ರಿಗಳ ಮರಳಿ ಪಡೆಯುವ ಸೌಲಭ್ಯ ಕಲ್ಪಿಸುವುದು; ಹಾಗೂ

(iii) ಹೂಳು, ಧೂಳು, ಒಳಚರಂಡಿ ಹೂಳು ಮತ್ತಿತರ ಜಡ ತ್ಯಾಜ್ಯಗಳನ್ನು ನೈರ್ಮಲ್ಯ ನೆಲಭರ್ತಿ ಮತ್ತು/ಅಥವಾ ಕಾಲಕಾಲಕ್ಕೆ ಬಿಬಿಎಂಪಿ ಅಧಿಸೂಚಿಸುವ ಸಂಸ್ಕರಣಾ ಸೌಲಭ್ಯಗಳಿಗೆ;

(iv) ಬೀದಿ ಗುಡಿಸುವುದಕ್ಕೆ (ಮಾನವನ ಮೂಲಕ ಮತ್ತು ಯಾಂತ್ರಿಕ ಎರಡೂ) ಪ್ರಮಾಣಕ ಮಾನದಂಡಗಳು ಅನುಸೂಚಿIII ರಂತೆ ಅನ್ವಯವಾಗುತ್ತದೆ, ಬಿಬಿಎಂಪಿಯಿಂದ ಕಾಲಕಾಲಕ್ಕೆ ಮಾರ್ಪಾಡು ಮಾಡುವುದಕ್ಕೆ ಒಳಪಟ್ಟಿರುತ್ತದೆ.

(9) ಪ್ರೋತ್ಸಾಹ ಸೌಲಭ್ಯ ಕಲ್ಪಿಸುವುದು:- (1) ಜೈವಿಕ ವಿಘಟನೀಯ ತ್ಯಾಜ್ಯಗಳನ್ನು ಬಯೋಮಿಥೆನೇಶನ್ ಹಾಗೂ ಗೊಬ್ಬರ ಮಾಡುವ ಪ್ರಕ್ರಿಯೆಯನ್ನು ವಿಕೇಂದ್ರೀಕರಣಗೊಳಿಸುವಿಕೆಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಬಿಬಿಎಂಪಿ ಪ್ರೋತ್ಸಾಹ ನೀಡುವ ಸೌಲಭ್ಯಗಳನ್ನು ಕಲ್ಪಿಸುವುದು. ಅಂದರೆ ಇಂತಹ ತ್ಯಾಜ್ಯಗಳನ್ನು ನಿರ್ವಹಣೆ ಮಾಡುವವರನ್ನು ಗುರುತಿಸುವುದು, ಪ್ರಶಸ್ತಿಗಳನ್ನು ನೀಡುವುದು, ಪ್ರಮಾಣ ಪತ್ರಗಳನ್ನು ನೀಡುವುದು ಹಾಗೂ ಬಿಬಿಎಂಪಿ ವೆಬ್‌ಸೈಟ್‌ಗಳಲ್ಲಿ ಅಂಥವರ ಹೆಸರನ್ನು ಪ್ರಕಟಿಸುವುದು.

(2) ತ್ಯಾಜ್ಯ ಉತ್ಪಾದಿಸುವವರು ಮೂಲ ಸ್ಥಾನದಲ್ಲೇ ಕಾಂಪೋಸ್ಟಿಂಗ್ ಅಥವಾ ಬಯೋಮಿಥನೇಷನ್ ಮೂಲಕ ಹಸಿ ತ್ಯಾಜ್ಯವನ್ನು ಸಂಸ್ಕರಣೆ ಮಾಡುತ್ತಿದ್ದರೆ ಮತ್ತುಒಣತ್ಯಾಜ್ಯವನ್ನು ಪುನರ್ ಬಳಕೆ ಮಾಡುತ್ತಿದ್ದರೆ ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕದಲ್ಲಿ ರಿಯಾಯಿತಿ ನೀಡುವುದು.

(3) ಬಿಬಿಎಂಪಿಯು ಯಾವುದೇ ತ್ಯಾಜ್ಯ ಉತ್ಪಾದಕರಿಂದ ಹೆಚ್ಚುವರಿ ಗೊಬ್ಬರವು ಲಭ್ಯವಿದ್ದರೆ ಅದನ್ನು ಸಾಗಣೆ ಮಾಡಲು ಅನುವು ಮಾಡಿಕೊಡಬಹುದು, ಮೂಲದಲ್ಲೇ ಸಂಸ್ಕರಿಸಿದ್ದರಿಂದಾಗಿ ಅಥವಾ ಘನತ್ಯಾಜ್ಯದ ಮೂಲದಲ್ಲೇ ತ್ಯಾಜ್ಯವನ್ನು ಪುನರ್ ಬಳಕೆ ಯೋಗ್ಯವನ್ನಾಗಿಸಿದ್ದರಿಂದ ಬಿಬಿಎಂಪಿ ಮಾಡುವ ಉಳಿತಾಯವನ್ನು ಆಧರಿಸಿ ಕೆಲವು ವಿನಾಯ್ತಿಗಳು ಮತ್ತು ರಿಯಾಯ್ತಿಗಳನ್ನು ಪರಿಶೀಲಿಸಬಹುದು.

(4) ಶೂನ್ಯ ತ್ಯಾಜ್ಯ ನೆರೆಹೊರೆಗಳು, ವಸತಿ (ಅಪಾರ್ಟ್‌ಮೆಂಟ್) ಸಮುಚ್ಛಯಗಳು ಮತ್ತು ವಾಣಿಜ್ಯ ಕಟ್ಟಡಗಳನ್ನು ಬಿಬಿಎಂಪಿಯು ಸೂಕ್ತವಾಗಿ ಸಾಕಷ್ಟು ಪ್ರಮಾಣದಲ್ಲಿ ಪ್ರೋತ್ಸಾಹವನ್ನು ನೀಡಬೇಕು.

(5) ತ್ಯಾಜ್ಯಗಳ ಸಂಪೂರ್ಣ ಬೇರ್ಪಡಿಸುವಿಕೆ, ತ್ಯಾಜ್ಯವನ್ನು ಮೂಲದಲ್ಲೇ ಸಂಸ್ಕರಿಸುವುದು ಮತ್ತು ಶೂನ್ಯ ತ್ಯಾಜ್ಯ ನೆರೆಹೊರೆಯನ್ನು ಹೆಚ್ಚು ಮಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಘನತ್ಯಾಜ್ಯ ವಿಲೇವಾರಿ ಅಧಿಕಾರಿಗಳಿಗೂ ಪ್ರೋತ್ಸಾಹನೆ ನೀಡುವ ವ್ಯವಸ್ಥೆಯನ್ನು ಬಿಬಿಎಂಪಿ ಮಾಡಿಕೊಳ್ಳುವ ಅಗತ್ಯವಿದೆ.

(10) ರಾಸಾಯನಿಕ ಗೊಬ್ಬರಗಳು: (1) ಬಿಬಿಎಂಪಿಯು ತನ್ನ ವ್ಯಾಪ್ತಿಯಲ್ಲಿ ಬರುವ ಹಾಗೂ ತಾನು ನಿರ್ವಹಣೆ ಮಾಡುತ್ತಿರುವ ಪಾರ್ಕ್‌ಗಳು, ಉದ್ಯಾನಗಳಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಹಂತ ಹಂತವಾಗಿ ಸ್ಥಗಿತಗೊಳಿಸಿ ಜೈವಿಕ ಗೊಬ್ಬರಗಳ ಬಳಕೆ ಮಾಡಬೇಕು.

(2) ಸಾರ್ವಜನಿಕ ಪಾರ್ಕ್‌ಗಳು, ಆಟದ ಮೈದಾನಗಳು, ಮನರಂಜನಾ ಮೈದಾನಗಳು ಹಾಗೂ ಉದ್ಯಾನಗಳಲ್ಲಿ ಗೊಬ್ಬರ ಉತ್ಪಾದನೆಗೆ ಸಣ್ಣ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿ ಆ ಗೊಬ್ಬರ ಬಳಕೆಗೆ ಅಥವಾ ಮನೆಗಳಲ್ಲಿ ಅಥವಾ ಸಾರ್ವಜನಿಕವಾಗಿ ಮೂಲದಲ್ಲೇ ಉತ್ಪಾದಿಸಿದ ಗೊಬ್ಬರ ಬಳಕೆಗೆ ಆದ್ಯತೆ ನೀಡಬೇಕು.

(11) ಔದ್ಯೋಗಿಕ ಸುರಕ್ಷತೆ: (1) ಬಿಬಿಎಂಪಿ ತನ್ನ ಪೌರಕಾರ್ಮಿಕರು ಹಾಗೂ ಘನತ್ಯಾಜ್ಯ ನಿರ್ವಹಣೆ ಕಾರ್ಯಚಟುವಟಿಕೆಗಳಲ್ಲಿ ಒಳಗೊಂಡಿರುವ ಏಜೆನ್ಸಿಗಳ ಸಿಬ್ಬಂದಿಗೆ ಸೂಕ್ತವಾದ ಹಾಗೂ ಸಮರ್ಪಕವಾದ ರಕ್ಷಾಕವಚ ಉಪಕರಣಗಳನ್ನು (ಪಿಪಿಇ) ಒದಗಿಸಬೇಕು.

(2) ರಕ್ಷಾ ಕವಚ ಉಪಕರಣಗಳೂ (ಪಿಪಿಇ) ಸೇರಿದಂತೆ ಸಮವಸ್ತ್ರ, ಫ್ಲೋರೋಸೆಂಟ್ ಜಾಕೆಟ್‌ಗಳು, ಕೈಗವಸುಗಳು, ರೇನ್‌ಕೋಟ್‌ಗಳು, ಸರಿಯಾದ ಪಾದರಕ್ಷೆಗಳು ಹಾಗೂ ಮುಖವಾಡ (ಮಾಸ್ಕ್) ಗಳನ್ನು ಘನತ್ಯಾಜ್ಯ ನಿರ್ವಹಣೆ ಮಾಡುವ ಎಲ್ಲಾ ಕೆಲಸಗಾರರಿಗೆ ಪೂರೈಕೆ ಮಾಡುವುದನ್ನು ಮತ್ತು ಈ ಕಾರ್ಯಪಡೆ ಅದನ್ನು ಬಳಕೆ ಮಾಡುವುದನ್ನು ಕೂಡಾ ಬಿಬಿಎಂಪಿ ಖಾತರಿಪಡಿಸಬೇಕು. ಒಂದು ವೇಳೆ ಘನತ್ಯಾಜ್ಯದ ಸಂಸ್ಕರಣೆ ಮತ್ತು/ಅಥವಾ ವಿಲೇವಾರಿ ಸಮಯದಲ್ಲಿ ಏನಾದರೂ ಅಪಘಾತಗಳು ಸಂಭವಿಸಿದರೆ, ಘನತ್ಯಾಜ್ಯ ನಿರ್ವಹಣೆಯ ಉಸ್ತುವಾರಿಯನ್ನು ವಹಿಸಿಕೊಂಡಿರುವ ವ್ಯಕ್ತಿಯು ಘನತ್ಯಾಜ್ಯ ನಿರ್ವಹಣೆ ನಿಯಮ 2016ರಡಿ ಇದಕ್ಕೆ ಸಂಬಂಧಿಸಿದಂತೆ ನೀಡಿರುವ ನಮೂನೆಯಲ್ಲಿ ಬಿಬಿಎಂಪಿ ಮುಖ್ಯಸ್ಥರಿಗೆ ವರದಿ ಮಾಡಬೇಕು. ಬಿಬಿಎಂಪಿ ಮುಖ್ಯಸ್ಥರು ಆ ವಸ್ತುಸ್ಥಿತಿ ಪರಿಶೀಲಿಸಿ, ಅಗತ್ಯಬಿದ್ದಲ್ಲಿ ವಿಚಾರಣೆಯನ್ನು ನಡೆಸಿ, ಸೂಕ್ತ ನಿರ್ದೇಶನಗಳನ್ನು ಘನತ್ಯಾಜ್ಯ ನಿರ್ವಹಣೆ ಹೊಣೆ ಹೊತ್ತಿರುವ ವ್ಯಕ್ತಿಗೆ ನೀಡುವುದು. ಘಟನೆಗೆ ಸಂಬಂಧಿಸಿದಂತೆ ಪರಿಹಾರ ನೀಡುವುದು, ವೈದ್ಯಕೀಯ ವೆಚ್ಚ, ಘನತ್ಯಾಜ್ಯ ನಿರ್ವಹಣೆ ಪ್ರಕ್ರಿಯೆ ಅಥವಾ ಯಂತ್ರೋಪಕರಣಗಳ ಸರಿಪಡಿಸುವಿಕೆ ಮತ್ತಿತರ ವಿಷಯಗಳ ಕುರಿತು ಸೂಕ್ತ ಸೂಚನೆಯನ್ನು ನೀಡುವುದು.

(12) ಕುಂದುಕೊರತೆ ಪರಿಹಾರ: (1) ಬಿಬಿಎಂಪಿ ತನ್ನ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕು. ಇದಕ್ಕಾಗಿಯೇ ಇರುವ ಸಹಾಯ ಆಪ್ ಸಾರ್ವಜನಿಕರಿಗೆ 24/7 ಲಭ್ಯವಾಗುವಂತೆ ಮಾಡುವ ಮೂಲಕ ಘನತ್ಯಾಜ್ಯಗಳ ಸಂಗ್ರಹ ಮಾಡದೇ ಇರುವುದು, ಕಸವನ್ನು ಎಲ್ಲೆಂದರಲ್ಲಿ ಎಸೆಯುವುದು, ಹಾಗೇ ಈ ಉಪವಿಧಿಯನ್ನು ಉಲ್ಲಂಘಿಸುವುದು ಸೇರಿದಂತೆ ಇನ್ನಿತರ ಕುಂದುಕೊರತೆಗಳ ಬಗ್ಗೆ ಸಾರ್ವಜನಿಕರು ದೂರು ಸಲ್ಲಿಸುವುದಕ್ಕೆ ಅನುಕೂಲ ಮಾಡಿಕೊಡಬೇಕು. ಜನಸಂಖ್ಯೆ ಹಾಗೂ ಘನತ್ಯಾಜ್ಯಗಳ ಉತ್ಪಾದನಾ

ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕವೋ, ದೂರು ದಾಖಲು ಕೇಂದ್ರ ತೆರೆಯುವ ಮೂಲಕವೋ ಕಾಲ್ ಸೆಂಟರ್ (ಸಹಾಯ ಕೇಂದ್ರ) ಇಲ್ಲವೇ ಇನ್ನಾವುದಾದರೂ ವ್ಯವಸ್ಥೆ, ಇ-ಮೇಲ್, ಸಾಮಾಜಿಕ ಜಾಲತಾಣಗಳಾದ ವಾಟ್ಸ್ಯಾಪ್/ಟ್ವಿಟರ್/ಚಾಟ್‌ಬಾಟ್ಸ್ ಮತ್ತು/ಅಥವಾ ಬಿಬಿಎಂಪಿ ಸೂಕ್ತ ಎಂದು ಪರಿಗಣಿಸುವ ಇನ್ನಾವುದೇ ಯಾಂತ್ರಿಕ ವ್ಯವಸ್ಥೆ ಇದಾಗಿರಬಹುದು. ಆದ್ದರಿಂದ ಬಿಬಿಎಂಪಿ ಸರಹದ್ದಿನೊಳಗೆ ದೂರವಾಣಿ, ಇ-ಮೇಲ್, ಅಂಚೆ, ಮೊಬೈಲ್ ಅಪ್ಲಿಕೇಶನ್‌ನಲ್ಲಿ ದೂರುಗಳನ್ನು ಸಲ್ಲಿಸಬಹುದು.

(2) ಪ್ರತಿಯೊಂದು ದೂರನ್ನೂ ಸಕಾಲಿಕವಾಗಿ ಹಾಗೂ ಪರಿಣಾಮಕಾರಿಯಾಗಿ ಪರಿಹರಿಸುವುದನ್ನು ಬಿಬಿಎಂಪಿಯು ಖಾತರಿಪಡಿಸಬೇಕು. ಸೇವಾ ಹಂತದ ಒಪ್ಪಂದಗಳ (ಎಸ್.ಎಲ್.ಎ.ಗಳು) ಅನ್ವಯ ದೂರು ಯಾವ ಬಗೆಯದು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳೇನು, ಅದರ ಪರಿಹಾರಕ್ಕೆ ಕೈಗೊಂಡಿರುವ ಕ್ರಮಗಳೇನು ಎನ್ನುವುದನ್ನೂ ಖಾತರಿಪಡಿಸಬೇಕು.

(3) ಬಿಬಿಎಂಪಿ ನೌಕರರಾದ ಅಂದರೆ ಪೌರಕಾರ್ಮಿಕರಂತಹವರು ತಮ್ಮ ಕುಂದು ಕೊರತೆಗಳನ್ನು ಲಿಖಿತ ರೂಪದಲ್ಲಿ ಬಿಬಿಎಂಪಿಯ ಕುಂದುಕೊರತೆ ನಿವಾರಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವ ಮುಖ್ಯಸ್ಥರಿಗೆ ಸಲ್ಲಿಸುವುದು.

(13)ತರಬೇತಿ ಮತ್ತು ಸಾರ್ವಜನಿಕಜಾಗೃತಿ:-(ಅ) ಬಿಬಿಎಂಪಿಯು ಅನೌಪಚಾರಿವಾಗಿ ತ್ಯಾಜ್ಯ ಸಂಗ್ರಹಿಸುವಂತಹವರಿಗೆ, ಘನತ್ಯಾಜ್ಯ ನಿರ್ವಹಣೆ ನಿಯಮ, 2016 ಮತ್ತು ಉಪವಿಧಿಯಲ್ಲಿ ಹೇಳಿರುವ ಪ್ರಕ್ರಿಯೆಗಳ ಅನ್ವಯತ್ಯಾಜ್ಯ ವಿಂಗಡಣೆ ಮಾಡಿ ಸಂಗ್ರಹಿಸುವಂತೆತನ್ನಸಿಬ್ಬಂದಿ ಮೂಲಕ ಜಾಗೃತಿಯನ್ನುಂಟು ಮಾಡುವುದನ್ನುಖಾತರಿಪಡಿಸಬೇಕು.

(2) ಬಿಬಿಎಂಪಿಯು ಖುದ್ದಾಗಿ ಅಥವಾ ಈ ಕ್ಷೇತ್ರದಲ್ಲಿ ಪರಿಣಿತರಾಗಿರುವವರ ಮೂಲಕ ಘನತ್ಯಾಜ್ಯಗಳ ನಿರ್ವಹಣೆಯಲ್ಲಿ ತೊಡಗುವ ಪ್ರತಿಯೊಬ್ಬ ಪಾಲುದಾರನಿಗೂ ಘನತ್ಯಾಜ್ಯ ನಿರ್ವಹಣೆ ನಿಯಮ ಹಾಗೂ ಉಪವಿಧಿಯ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಆ ಮೂಲಕ ಘನತ್ಯಾಜ್ಯ ಉತ್ಪಾದನೆಯನ್ನು ಕಡಿಮೆ ಮಾಡುವುದು ಹಾಗೂ ಈ ಉಪವಿಧಿಗಳಡಿಯಲ್ಲಿ ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

(3) ಬಿಬಿಎಂಪಿಯು ತನ್ನ ವೆಬ್‌ಸೈಟ್‌ನಲ್ಲಿ ಗೊಬ್ಬರ ಪರಿಣಿತರು, ಪರವಾನಗಿ ಪಡೆದಿರುವ ಗುಜರಿ ವ್ಯಾಪಾರಿಗಳು, ಪುನರ್ಬಳಕೆ ಮಾಡುವ ಕಾರ್ಯದಲ್ಲಿ ತೊಡಗಿಸಿಕೊಂಡಿರುವಂತಹ ವ್ಯಾಪಾರಿಗಳು, ಕಂಟೇನರುಗಳು / ಕಸದ ಡಬ್ಬಗಳನ್ನು ತಯಾರಿಸುವವರು, ಬಿಬಿಎಂಪಿಯಲ್ಲಿ ನೋಂದಣಿಯನ್ನು ಮಾಡಿಕೊಂಡಿರುವಂತಹ ಪುನರ್ಬಳಕೆಯಲ್ಲಿ ಪರಿಣತಿಯನ್ನು ಹೊಂದಿರುವ ಏಜೆನ್ಸಿಗಳು ಹೀಗೆ ಇವೇ ಮೊದಲಾದ ಸಂಗತಿಗಳ ಪಟ್ಟಿಯನ್ನು ಪ್ರಕಟಿಸುವ ಮೂಲಕ ಘನತ್ಯಾಜ್ಯ ನಿರ್ವಹಣೆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ನಾಗರಿಕರಿಗೆ ಅಗತ್ಯ ಬೆಂಬಲ ಹಾಗೂ ಸೌಲಭ್ಯವನ್ನುಒದಗಿಸಬೇಕು.

4) ಬಿಬಿಎಂಪಿಯು ವಾರ್ಡ್‌ಗಳಲ್ಲಿರುವ ಸಂಪರ್ಕ ಕಾರ್ಯಕರ್ತರ ಮುಖಾಂತರ ವರ್ಗಾವಾರು ಘನತ್ಯಾಜ್ಯದ ವಿಂಗಡನೆ ಸಾಧಿಸಲು, ಸ್ಥಳೀಯವಾಗಿ ಗೊಬ್ಬರ ತಯಾರಿಸಿ ತ್ಯಾಜ್ಯ ಕಡಿಮೆ ಮಾಡುವುದರ ಬಗ್ಗೆ ಜಾಗೃತಿ ಮೂಡಿಸಬೇಕು ಹಾಗೂ ಪೌರಕಾರ್ಮಿಕರಿಗೆ ಘನತ್ಯಾಜ್ಯದ ಉತ್ತಮ ನಿರ್ವಹಣೆಯ ಬಗ್ಗೆ ವಾರ್ಡ್‌ಗಳಲ್ಲಿ ತರಬೇತಿ ನೀಡಬೇಕು.

(14) ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲಾ ಸರ್ಕಾರಿ ಕಚೇರಿಗಳನ್ನು ಶೂನ್ಯತ್ಯಾಜ್ಯ ಆವರಣವಾಗಿ ಮಾರ್ಪಡಿಸುವುದು ಮತ್ತು ಅಧಿಕಾರಿಗಳಿಂದ ಕಚೇರಿ ಆವರಣದಲ್ಲೇ ಗೊಬ್ಬರ ತಯಾರಿಸುವುದು: (1) ಬಿಬಿಎಂಪಿಯು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ (ಕೇಂದ್ರ, ರಾಜ್ಯ, ಸ್ಥಳೀಯ ಆಡಳಿತ) ಮೂಲದಲ್ಲೇ ಘನತ್ಯಾಜ್ಯ ಸಂಸ್ಕರಣೆ ಮೂಲಕ ಸರ್ಕಾರಿ ಕಚೇರಿ ಆವರಣವನ್ನು ಶೂನ್ಯ ತ್ಯಾಜ್ಯ ಆವರಣವನ್ನಾಗಿಸುವುದರ ಜೊತೆಗೆ ಇತರರಿಗೆ ಮಾದರಿಯಾಗುವಂತೆ ಮಾಡುವುದನ್ನು ಖಾತರಿಪಡಿಸಿಕೊಳ್ಳಬೇಕು.

(2) ಎಲ್ಲಾ ಸರ್ಕಾರಿ ಅಧಿಕಾರಿಗಳೂ ಕೂಡ ತಾವು ವಾಸಿಸುವ ಬಿಬಿಎಂಪಿ ವ್ಯಾಪ್ತಿ ಪ್ರದೇಶದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಹಸಿ ತ್ಯಾಜ್ಯವನ್ನು ತಮ್ಮ ಮನೆಯ ಆವರಣದಲ್ಲಿಯೇ ಗೊಬ್ಬರವಾಗಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ಬಿಬಿಎಂಪಿ ನಿರೀಕ್ಷಿಸುತ್ತದೆ. ಆ ಮೂಲಕ ಇತರ ಮನೆಗಳಲ್ಲಿವವರೂ ಅದನ್ನುಅನುಸರಿಸುವಂತೆ ಮಾದರಿಯಾಗಬೇಕು.

(15) ಘನತ್ಯಾಜ್ಯ ನಿರ್ವಹಣೆಗೆ ನಿಧಿ: ಬಿಬಿಎಂಪಿಯು ಘನತ್ಯಾಜ್ಯ ನಿರ್ವಹಣೆ ಸೇವೆಯನ್ನು ಕೈಗೊಳ್ಳುವ ನಿಟ್ಟಿನಲ್ಲಿಅದರ ಕಾರ್ಯಾಚರಣೆ ಹಾಗೂ ನಿರ್ವಹಣೆಗೆ ಬಂಡವಾಳವನ್ನು ಹೂಡುವ ಸಲುವಾಗಿ ತನ್ನ ವಾರ್ಷಿಕ ಆಯವ್ಯಯದಲ್ಲಿಅಗತ್ಯ ನಿಧಿಯನ್ನು ಕಾಯ್ದಿರಿಸಿಕೊಳ್ಳಬೇಕು. ಎಸ್‌ಡಬ್ಲ್ಯುಎಂ ನ ಸಂಪೂರ್ಣಕರ ಮತ್ತು ಬಳಕೆದಾರರ ಶುಲ್ಕವನ್ನುಎಸ್‌ಡಬ್ಲ್ಯುಎಂ ಅಡಿಯಲ್ಲಿ ಬಂಡವಾಳ ಮತ್ತು ಆದಾಯ ವೆಚ್ಚಗಳಿಗಾಗಿ ಪ್ರತ್ಯೇಕವಾಗಿ ತೆಗೆದಿರಿಸಬೇಕು. ಬಿಬಿಎಂಪಿಯು ಘನತ್ಯಾಜ್ಯ ನಿಯಮಾವಳಿಗಳು, 2016ರಡಿ ಮತ್ತು ಸದರಿ ಉಪನಿಯಮಗಳ ಅಡಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಉದ್ದೇಶಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಸಂಪನ್ಮೂಲಗಳ ಕೊರತೆ ಕಂಡುಬಂದಲ್ಲಿ ವಾರ್ಷಿಕ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೆ ಮುಂಚಿತವಾಗಿಯೇ ಸಲ್ಲಿಸಿ ಅನುದಾನವನ್ನು ಕೋರಬೇಕು.

(16) ತ್ಯಾಜ್ಯ ಕಡಿತಗೊಳಿಸುವುದು: ಬಿಬಿಎಂಪಿಯುತ್ಯಾಜ್ಯಉತ್ಪಾದನೆಯನ್ನು ಕಡಿತಗೊಳಿಸುವ ನಿಟ್ಟಿನಲ್ಲಿ, ಅನಗತ್ಯ ಪ್ಯಾಕೇಜಿಂಗ್ ವಸ್ತುಗಳು, ಎಸೆಯುವಂತಹ ವಸ್ತುಗಳ ಉತ್ಪಾದನೆಗೆ ಪ್ರೋತ್ಸಾಹ ನೀಡಬಾರದು. ಹಾಗೇ ಜಾಗೃತಿ ಕಾರ್ಯಕ್ರಮಗಳು ಮತ್ತು ಪ್ರೋತ್ಸಾಹಗಳ ಮೂಲಕ ಇವುಗಳು ಉತ್ಪಾದನೆಯಾಗದಂತೆ ಮಾಡಬೇಕು. ಕಡಿತಗೊಳಿಸುವಿಕೆ, ಮರುಬಳಸುವಿಕೆ ಹಾಗೂ ಪುನರ್ಬಳಕೆಯ ಬಗ್ಗೆ ಅರಿವು ಮೂಡಿಸುವುದೇ ತ್ಯಾಜ್ಯದ ನಿರ್ವಹಣೆ ಹಾಗೂ ಪ್ರಕ್ರಿಯೆಗಳಿಗೆ ಮಾರ್ಗದರ್ಶಿ ಸೂತ್ರಗಳಾಗಲಿವೆ.

(17) ಹಳೆಯ ತ್ಯಾಜ್ಯಗಳ ನಿರ್ವಹಣೆ: ಉಪವಿಧಿ (15)ರಲ್ಲಿ ಈಗಾಗಲೇ ವಿವರಿಸಿರುವಂತೆ ಘನತ್ಯಾಜ್ಯ ನಿರ್ವಹಣೆ ನಿಯಮ, 2016ರಡಿಯಲ್ಲಿ ಹಳೆಯ ಘನತ್ಯಾಜ್ಯವನ್ನು ತೆರೆದ ಸ್ಥಳದಲ್ಲಿ ಸುರಿಯುವ ಬಗ್ಗೆ ವಿವರವಾದ ಪರಿಶೀಲನೆ ಹಾಗೂ ವಿಶ್ಲೇಷಣೆಯನ್ನು ಬಿಬಿಎಂಪಿ ಮಾಡಬೇಕು. ಸಿಪಿಸಿಬಿ ಹೊರಡಿಸಿರುವ ಹಳೆಯ ತ್ಯಾಜ್ಯಗಳ ವಿಲೇವಾರಿಗೆ ಅನುಸರಿಸಬೇಕಾದ ಮಾರ್ಗಸೂಚಿಗಳ ಅನ್ವಯ ಜೈವಿಕ-ಗಣಿಗಾರಿಕೆ (ಬಯೋಮೈನಿಂಗ್) ಮತ್ತು ಜೈವಿಕ-ಪರಿಹಾರದ (ಬಯೋರೆಮೆಡಿಯೇಶನ್) ಮೂಲಕ ಕಸ ಸುರಿಯುವ ಹಳೆಯ ಪ್ರದೇಶಗಳ ಪರಿಶೀಲನೆ

ಹಾಗೂ ವಿಶ್ಲೇಷಣೆಯನ್ನು ಮಾಡಬೇಕು. ಬಯೋಮೈನಿಂಗ್ ಮತ್ತು ಬಯೋರೆಮೆಡಿಯೇಶನ್ ಸಾಧ್ಯತೆಗಳ ಗೈರಿನಲ್ಲಿ ಪರಂಪರಾಗತ ತ್ಯಾಜ್ಯ ಹೊಂದಿರುವ ನಿವೇಶನವನ್ನು ನೆಲಭರ್ತಿ ಮುಚ್ಚುವ ಪದ್ಧತಿಯಂತೆ ವ್ಯವಸ್ಥಿತವಾಗಿ ಮುಚ್ಚುವ ಮೂಲಕ ಮುಂದಿನ ದಿನಗಳಲ್ಲಿ ಪರಿಸರಕ್ಕೆ ಹೆಚ್ಚಿನ ಅನಾಹುತವಾಗದಂತೆ ಎಚ್ಚರ ವಹಿಸಬೇಕು.

(18) ಪ್ಲಾಸ್ಟಿಕ್ ನಿಷೇಧವನ್ನು ಜಾರಿಗೆ ತರುವುದು:- (1) ಪ್ಲಾಸ್ಟಿಕ್ ಬಳಕೆ ನಿಯಮ ಉಲ್ಲಂಘನೆಗೆ ವಿಧಿಸಬಹುದಾದ ದಂಡವು ದಿನಾಂಕ:11-03-2016ರ ರಾಜ್ಯಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್ಇಇ/17/ಇಪಿಸಿ/2012ರ ಅನ್ವಯ ಬಿಬಿಎಂಪಿಯ ಸುತ್ತೋಲೆ ಸಂಖ್ಯೆ ಸಿಒಎಂಎಂ/ಪಿಆರ್/774/ 2016-17, ದಿನಾಂಕ:04-05-2016ರಂತೆ ಇರಬೇಕು.

(2) ಪುನರಾವರ್ತಿತ ಉಲ್ಲಂಘನೆದಾರರಿಗೆ, ಸುತ್ತೋಲೆ ಸಂಖ್ಯೆ: ಸಿಒಎಂಎಂ/ಪಿಆ/774/2016-17 ದಿನಾಂಕ: 04-05-2016ಅಡಿ ನಮೂದಿಸಿರುವ ದಂಡಕ್ಕಿಂತಲೂಐದು ಪಟ್ಟು ಹೆಚ್ಚು ದಂಡವನ್ನು ವಿಧಿಸಬಹುದಾಗಿದೆ.

(3) ಪುನರಾವರ್ತಿತ ಎಚ್ಚರಿಕೆ ದಂಡ ವಿಧಿಸಿದ ಬಳಿಕವೂ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮುಂದುವರೆಸುವವರಿಗೆ ಆವರಣವನ್ನು ಮುಚ್ಚುವ ಮತ್ತು ಸೀಲ್ ಮಾಡುವ ಕಠಿಣ ಕ್ರಮ ಜರುಗಿಸಬಹುದು/ ವ್ಯಾಪಾರ ಪರವಾನಿಗೆಯನ್ನು ಕನಿಷ್ಠ ಒಂದು ವರ್ಷದ ಅವಧಿಯವರೆಗೆ ರದ್ದುಪಡಿಸಬಹುದಾಗಿದೆ.

(4) ಅರಣ್ಯ, ಪರಿಸರ & ಜೀವಶಾಸ್ತ್ರ ಇಲಾಖೆಯ ದಿನಾಂಕ: 11-03-2016ರ ಅಧಿಸೂಚನೆ ಮತ್ತು ದಿನಾಂಕ:04-05-2016ರ ಸುತ್ತೋಲೆ ಅನ್ವಯ ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುವ ಗ್ರಾಹಕರು ಹಾಗೂ ಸಾರ್ವಜನಿಕರಿಗೂ ದಂಡ ಹಾಗೂ ಶಿಕ್ಷೆ ಅನ್ವಯವಾಗುತ್ತದೆ.

(5) ಬಿಬಿಎಂಪಿಯು ಕೆಎಸ್‌ಪಿಸಿಬಿ / ಕಂದಾಯ ಮತ್ತು ಇತರೆ ಅನುಷ್ಠಾನಗೊಳಿಸುವ ಅಧಿಕಾರವನ್ನು ಹೊಂದಿರುವ ಪ್ರಾಧಿಕಾರಗಳೊಂದಿಗೆ ನಿಷೇಧಿತ ಏಕ-ಬಳಕೆ ಪ್ಲಾಸ್ಟಿಕ್ ಉತ್ಪಾದಕರ ಆವರಣಗಳ ಮೇಲೆ ಜಂಟಿ ಕಾರ್ಯಾಚರಣೆ ನಡೆಸುವ ಮತ್ತು ಅವುಗಳನ್ನು ಸೀಲ್ ಮಾಡುವ ಅಧಿಕಾರವನ್ನು ಹೊಂದಿದೆ.

(6) ಎಲ್ಲಾ ಜಪ್ತಿ ಮಾಡಿದ ನಿಷೇಧಿತ ಪ್ಲಾಸ್ಟಿಕ್‌ಗಳನ್ನು ಬಿಬಿಎಂಪಿಯ ನಿಗದಿತ ಸೌಲಭ್ಯದಲ್ಲಿ ತುಂಡರಿಸಿ ಸಂಗ್ರಹಿಸಿಡಬೇಕು. ಇವುಗಳನ್ನು ಅನುಮತಿಸಿದ ಉಪಯೋಗಗಳಾದ ರಸ್ತೆಗಳು, ಸಹ-ಸಂಸ್ಕರಣೆ, ಆರ್.ಡಿ.ಎಫ್. ಫೀಡ್‌ಸ್ಟಾ ಕ್‌ತರಹ ಬಳಸುವುದು.

(7) ಪರಿಸರ ಸ್ನೇಹಿ ಮರುಬಳಕೆ ವಸ್ತುಗಳ ಬಳಕೆ ಮತ್ತು ಒಟ್ಟಾರೆ ತ್ಯಾಜ್ಯ ನಿರ್ವಹಣೆಯ ಹಿತದೃಷ್ಟಿಯಿಂದ ಬಿಬಿಎಂಪಿ ಕೆ.ಎಸ್.ಪಿ.ಸಿ.ಬಿ ಮತ್ತು ರಾಜ್ಯ ಸರ್ಕಾರದ ಗಮನಕ್ಕೆ ತರಲಿದೆ, ಬಿಬಿಎಂಪಿ ಆವರಣದಲ್ಲಿ ನಿಷೇಧಿಸಬೇಕಾದ ಕೆಲವು ಏಕ-ಬಳಕೆ ನಂತರ ಬಿಸಾಡುವ ವಸ್ತುಗಳ ಈಗಾಗಲೇ ನಿಷೇಧಿಸದಿದ್ದರೆ ಇದನ್ನು ನಿಷೇಧಿಸಬೇಕಾಗಿದೆ.

## ಅಧ್ಯಾಯ XIII

## ಇತರೆ ವಿಷಯಗಳು

**31. ಸರ್ಕಾರದ ಸಂಸ್ಥೆಗಳೊಂದಿಗೆ ಸಮನ್ವಯ:-** ಬಿಬಿಎಂಪಿ ತನ್ನ ವ್ಯಾಪ್ತಿಯಲ್ಲಿ ಈ ಉಪವಿಧಿಗಳ ಅನುಷ್ಠಾನ ಹಾಗೂ ಅನುಪಾಲನೆಯ ಸಂಬಂಧ ಇತರೆ ಸರ್ಕಾರಿ ಏಜೆನ್ಸಿಗಳು ಹಾಗೂ ಪ್ರಾಧಿಕಾರಗಳು ಅಥವಾ ಅಂತಹ ಸಂಸ್ಥೆಗಳ ನಿಯಂತ್ರಣದಲ್ಲಿರುವ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಬೇಕು.

**32. ಅನುಷ್ಠಾನದ ಪರಾಮರ್ಶೆ:-** ಬಿಬಿಎಂಪಿ ಆಯುಕ್ತರ ಅಡಿಯಲ್ಲಿ ನೇಮಿಸಲಾದ ಸಮಿತಿಯು ಈ ಉಪವಿಧಿಗಳ ಅನುಷ್ಠಾನ ಪರಿಣಾಮಕಾರಿಯಾಗಿ ನಡೆಯುತ್ತಿದೆಯೇ ಎನ್ನುವುದನ್ನು ವರ್ಷದಲ್ಲಿ ಕನಿಷ್ಟ ಎರಡು ಬಾರಿ ಇಲ್ಲವೇ ಅಗತ್ಯ ಬಿದ್ದಲ್ಲಿ ಅದಕ್ಕೂ ಮೊದಲೇ ಪರಾಮರ್ಶಿಸುವುದು, ಮತ್ತು ಈ ನಿಯಮಗಳಿಗೆ ಏನಾದರೂ ತಿದ್ದುಪಡಿ ತರುವ ಅಗತ್ಯವಿದೆಯೇ, ಅಥವಾ ಅದನ್ನು ಪರಿಷ್ಕರಿಸಬೇಕೆ ಎನ್ನುವುದರ ಬಗ್ಗೆಯೂ ಪರಾಮರ್ಶೆ ನಡೆಸುವುದು. ಹಾಗೆಯೇ ಬಿಬಿಎಂಪಿಯ ಗುರಿಗೆ ಎದುರಾಗಿ ಸಾಧನೆಯ ಮೌಲ್ಯಮಾಪನದ ಮೂಲಕ ಸೂಕ್ತ ತಿದ್ದುಪಡಿಯನ್ನುಅಳವಡಿಸಿಕೊಳ್ಳುವುದನ್ನು ಖಾತರಿಪಡಿಸಿ ಸೂಕ್ತ ಕ್ರಮವಹಿಸುವುದು.

**33. ಉಪವಿಧಿಗಳ ಪರಾಮರ್ಶೆ:-** ಈ ಉಪವಿಧಿಗಳ ನಿಬಂಧನೆಗಳನ್ನು ಮೌಲ್ಯಮಾಪನ ಮಾಡಿ ಅಗತ್ಯ ಬಿದ್ದಾಗ ಏನಾದರೂ ತಿದ್ದುಪಡಿ ಅಥವಾ ಪರಿಷ್ಕರಣೆ ತರಬೇಕೆ ಎನ್ನುವುದರ ಬಗ್ಗೆ ಪರಾಮರ್ಶೆ ನಡೆಸುವುದು ಮತ್ತು ಇದರ ಹೊರತಾಗಿಯೂ ಕನಿಷ್ಠ ಎರಡು ವರ್ಷಗಳಿಗೊಮ್ಮೆ ಪರಾಮರ್ಶೆ ನಡೆಸುವುದು.

**34. ರದ್ಧತಿ ಮತ್ತು ಉಳಿತಾಯ:-** ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ/23/ಟಿಸಿಟಿ/2004, ದಿನಾಂಕ: 06-01-2005 ಮತ್ತುಸುತ್ತೋಲೆ ದಿನಾಂಕ:13-08-2009 ಮತ್ತು ದಿನಾಂಕ:07-09-2009 ಈ ಮೂಲಕ ರದ್ಧತಿ ಮಾಡಲಾಗಿದೆ.

ಅಂತಹ ಈ ರದ್ಧತಿಯು ಪರಿಣಾಮ ಬೀರಕೂಡದು ಎಂಬ ಕರಾರಿನೊಂದಿಗೆ,

(ಅ) ಈ ಆದೇಶದ ಹಿಂದಿನ ಕಾರ್ಯಾಚರಣೆ ಅಥವಾ ಸುತ್ತೋಲೆ ಅಥವಾ ಅದಕ್ಕೆ ಸಂಬಂಧಿಸಿದಂತೆ ಇನ್ನಾವುದೇ ಮಾಡಲಾದ ಅಥವಾ ಅದರಡಿಯಲ್ಲಿ ಬಾಧೆಗೊಳಗಾದ; ಅಥವಾ

(ಆ) ಈ ಆದೇಶ ಮತ್ತು ಸುತ್ತೋಲೆ ಅಡಿಲಬ್ಧ (ಪಡೆದುಕೊಂಡ), ದಕ್ಕಿದ ಅಥವಾ ಗುರಿಯಾದ (ಈಡಾದ) ಯಾವುದೇ ಹಕ್ಕು, ವಿಶೇಷ ಸೌಲಭ್ಯ,ಬಾಧ್ಯತೆ ಅಥವಾ ಹೊಣೆಗಾರಿಕೆ;

(ಇ) ಆ ಆದೇಶ ಮತ್ತು ಸುತ್ತೋಲೆಯಲ್ಲಿ ಮಾಡಿರುವ ಯಾವುದೇ ಉಲ್ಲೇಖಗಳನ್ನು ಈ ಉಪವಿಧಿಗಳಿಗೆ ಉಲ್ಲೇಖವಾಗಿ ರಚಿಸಿಕೊಳ್ಳಬೇಕು; ಮತ್ತು

(ಈ) ಈ ಆದೇಶದಡಿಯಲ್ಲಿಆರಂಭವಾದ ಎಲ್ಲ ಪ್ರಕ್ರಿಯೆಗಳು ಮತ್ತು ರದ್ದುಗೊಂಡ ಸುತ್ತೋಲೆ ಮತ್ತು ಈ ಉಪವಿಧಿಗಳು ಜಾರಿಗೊಳ್ಳುವ ದಿನಾಂಕದಂದು ಬಾಕಿ ಇರುವಂತಹವುಗಳು ಈ ಉಪವಿಧಿಗಳ ನಿಬಂಧನೆಗಳಂತೆ ವಿಲೇವಾರಿ ಮಾಡಬೇಕು.

**ಅನುಸೂಚಿ I**

ಜೈವಿಕ-ವಿಘಟನೀಯ ತ್ಯಾಜ್ಯ, ಜೈವಿಕವಾಗಿ ವಿಘಟನೆಯಾಗದ ಮರುಬಳಸಬಹುದಾದ ತ್ಯಾಜ್ಯ, ಅಪಾಯಕಾರಿ ಗೃಹ ತ್ಯಾಜ್ಯ, ವೈದ್ಯಕೀಯ ಜೈವಿಕತ್ಯಾಜ್ಯ ಮತ್ತು ಬೃಹತ್ ಪ್ರಮಾಣದ ತ್ಯಾಜ್ಯದ ವಿವರಣಾತ್ಮಕ ಪಟ್ಟಿ:-

**ಭಾಗ-ಎ: ಜೈವಿಕ ವಿಘಟನೀಯತ್ಯಾಜ್ಯದ ವಿವರಣಾತ್ಮಕ ಪಟ್ಟಿ:-**

(i) ಚಹಾಪುಡಿ, ಮೊಟ್ಟೆ ಚಿಪ್ಪುಗಳು, ಹಣ್ಣು ಮತ್ತುತರಕಾರಿ ಸಿಪ್ಪೆಗಳು, ತಿಂದುಳಿದದ್ದು ಮತ್ತು / ಅಥವಾ ಹಳಸಿದ ಆಹಾರವನ್ನು ಒಳಗೊಂಡ ಅಡುಗೆಮನೆ ತ್ಯಾಜ್ಯ

(ii) ಹಣ್ಣು ಮತ್ತು ತರಕಾರಿಗಳು, ಕೊಳೆತ ಮತ್ತು / ಅಥವಾ ಹಾಳಾದ ತರಕಾರಿ ಮತ್ತು ಹಣ್ಣುಗಳ ಸಾವಯವ ಮಾರುಕಟ್ಟೆ ತ್ಯಾಜ್ಯ.

(iii) ಮಾಂಸ ಮತ್ತು ಮೂಳೆಗಳು

(iv) ಉದ್ಯಾನದ ಮತ್ತು ಎಲೆ ಕಸ, ಹೂವುಗಳು ಸೇರಿದಂತೆ

(v) ಹುಲ್ಲು ಮತ್ತು ಮರದ ತುಣುಕುಗಳು, ಕತ್ತರಿಸಿದ, ರೆಂಬೆಗಳು, ಸಣ್ಣ ತೆಳು ರೆಂಬೆಗಳು, ಎಲೆಗಳು, ಮರದ ಅಲಂಕಾರಗಳು ಇತ್ಯಾದಿ., ಉದ್ಯಾನದ ಮತ್ತುತೋಟಗಾರಿಕೆತ್ಯಾಜ್ಯ

(vi) ತೆಂಗಿನ ಚಿಪ್ಪುಗಳು

(vii) ಮರ / ಎಲೆಗಳ ಬೂದಿ

**ಭಾಗ-ಬಿ: ಜೈವಿಕವಾಗಿ ವಿಘಟನೆಯಾಗದ ಮರು ಬಳಸಬಹುದಾದ ತ್ಯಾಜ್ಯಗಳ ವಿವರಣಾತ್ಮಕ ಪಟ್ಟಿ*** (ಪಟ್ಟಿ ಮಾಡಲಾದ ವಸ್ತುಗಳು / ಪದಾರ್ಥಗಳು):-

(i) ಪತ್ರಿಕೆಗಳು

(ii) ಕಾಗದ, ಪುಸ್ತಕಗಳು ಮತ್ತು ಮ್ಯಾಗಝಿನ್‌ಗಳು (ನಿಯತಕಾಲಿಕಗಳು)

(iii) ಗಾಜು

(iv) ಲೋಹದ ವಸ್ತುಗಳು ಮತ್ತು ತಂತಿ

(v) ಪ್ಲಾಸ್ಟಿಕ್

(vi) ಅಲುಮಿನಿಯಂ ಕ್ಯಾನ್‌ಗಳು

(vii) ರೆಕ್ಸೀನ್

(viii) ರಬ್ಬರ್

(ix) ಮರ / ಪೀಠೋಪಕರಣ

(x) ಪ್ಯಾಕೇಜಿಂಗ್

(xi) ವಸ್ತ್ರಗಳು / ಬಟ್ಟೆಗಳು

(xii) ಸ್ಟೈರೋಫೋಮ್ (ಒಂದು ಬಗೆಯ ವಿಸ್ತರಿತ ಪಾಲಿಸ್ಟೈರೀನ್-ಆಹಾರ ಪೊಟ್ಟಣಗಳು, ಬಳಸಿ ಬಿಸಾಡಬಹುದಾದ ಊಟದ ತಟ್ಟೆಗಳು, ಪ್ಲೇಟ್‌ಗಳು ಇತ್ಯಾದಿಗಳಲ್ಲಿ ಬಳಕೆ)

(xiii) ಥರ್ಮೋಕೋಲ್

*ಮೇಲೆ ಪ್ರಸ್ತಾಪಿಸಿರುವುದು ಸೂಚನಾತ್ಮಕವಾಗಿವೆ ಮತ್ತು ಪರಿಪೂರ್ಣವಲ್ಲ ಮತ್ತು ಪ್ರತಿಯೊಂದು ವಸ್ತುವನ್ನು ಗುರುತಿಸಿದ ಸಂಸ್ಕರಣೆ ಮತ್ತು ಪುನರ್ ಬಳಕೆಗಾಗಿ ಪರಿವರ್ತಿಸುವ ಸ್ಥಳಗಳನ್ನು ಆಧರಿಸಿ ಬಿಬಿಎಂಪಿಯು ಪರಿಷ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ

**ಭಾಗ-ಸಿ: ಅಪಾಯಕಾರಿ ಗೃಹ ತ್ಯಾಜ್ಯದ ವಿವರಣಾತ್ಮಕ ಪಟ್ಟಿ:-**

(i) ಏರೋಸಾಲ್ ಕ್ಯಾನ್‌ಗಳು

(ii) ಬ್ಯಾಟರಿಗಳು

(iii) ಬಿಳಿಚುಪುಡಿ ಮತ್ತುಅಡುಗೆಮನೆ ಸಾಧನಗಳು ಮತ್ತುಚರಂಡಿ ಸ್ವಚ್ಛಗೊಳಿಸುವ ಸಾಧನಗಳು

(iv) ಕಾರಿನ ಬ್ಯಾಟರಿಗಳು, ಆಯಿಲ್ ಫಿಲ್ಟರ್ ಗಳು ಮತ್ತು ಕಾರಿಗೆ ಸಂಬಂಧಿಸಿದ ಉತ್ಪನ್ನಗಳು ಮತ್ತು ಬಳಕೆ ಪದಾರ್ಥಗಳು.

(v) ತೈಲ, ರಾಸಾಯನಿಕಗಳು ಮತ್ತು ದ್ರಾವಕಗಳು ಮತ್ತು ಅವುಗಳ ಖಾಲಿ ಡಬ್ಬಗಳು.

(vi) ಪ್ರಸಾಧನ ಸಾಮಗ್ರಿಗಳು, ರಾಸಾಯನಿಕ ಆಧಾರಿತ ಕೀಟನಾಶಕಗಳು ಮತ್ತು ಅವುಗಳ ಖಾಲಿ ಕಂಟೇನರ್ ಗಳು.

(vii) ಅವಧಿ ಮುಗಿದವು ಸೇರಿದಂತೆ ಇತರ ಔಷಧಿಗಳು

(viii) ಪೇಯಿಂಟ್‌ಗಳು, ತೈಲ, ಲೂಬ್ರಿಕೆಂಟ್‌ಗಳು, ಅಂಟು, ಥಿನ್ನರ್ ಮತ್ತು ಅವುಗಳ ಖಾಲಿ ಕಂಟೇನರ್ ಗಳು

(ix) ಕೀಟನಾಶಕಗಳು ಮತ್ತು ಕಳೆನಾಶಕಗಳು ಮತ್ತು ಅವುಗಳ ಖಾಲಿ ಕಂಟೇನರ್ಗಳು

(x) ಫೋಟೋಗ್ರಫಿಗೆ ಬಳಸುವ ರಾಸಾಯನಿಕಗಳು

(xi) ಹೊಸ ಸಾಮಗ್ರಿಗಳನ್ನು ಸುತ್ತಿತಂದ ಮೆತ್ತನೆಯ ಫೋಮ್ ಪ್ಯಾಕೇಜ್ ವಸ್ತುಗಳು

(xii) ಥರ್ಮೋಮೀಟರ್ ಗಳು ಮತ್ತು ಪಾದರಸ ಹೊಂದಿರುವ ಉತ್ಪನ್ನಗಳು

**ಭಾಗ-ಡಿ: ವೈದ್ಯಕೀಯಜೈವಿಕ ತ್ಯಾಜ್ಯಗಳ ವಿವರಣಾತ್ಮಕ ಪಟ್ಟಿ:-**

(ಪೂರ್ತಿ ಪಟ್ಟಿಗಾಗಿ 2016ರ ವೈದ್ಯಕೀಯ ಜೈವಿಕ ತ್ಯಾಜ್ಯ ನಿರ್ವಹಣೆ ನಿಯಮಗಳ ಅನುಸೂಚಿ I ಅನ್ನು ದಯವಿಟ್ಟು ಪರಿಶೀಲಿಸಿ)

(i) ರಕ್ತ ಹಾಗೂ ದೇಹದ ದ್ರವದಿಂದ ಕಲುಷಿತವಾದ ಡ್ರೆಸ್ಸಿಂಗ್, ಮುಲಾಮುಪಟ್ಟಿ, ಹತ್ತಿಯ ಹೀರೊತ್ತಿಗೆಯನ್ನು ಒಳಗೊಂಡ ಮತ್ತು ಕಲುಷಿತ ವಸ್ತುಗಳು ಮತ್ತು ಉಳಿಕೆ ರಕ್ತವನ್ನು ಒಳಗೊಂಡ ಬ್ಯಾಗ್‌ಗಳು ಮತ್ತು ರಕ್ತಕ್ಕೆ ಸಂಬಂಧಿಸಿದ ಬಿಡಿ ಭಾಗಗಳು

(ii) ರೋಗನಿರೋಧಕ (ಆ್ಯಂಟಿಬಯೋಟಿಕ್) ದಂತಹ ಔಷಧೀಯ ತ್ಯಾಜ್ಯಗಳಂತ ಅವಧಿ ಮುಗಿದ ಅಥವಾ ತಿರಸ್ಕರಿಸಲಾದ ಔಷಧಿಗಳು, ಔಷಧೀಯ ತ್ಯಾಜ್ಯಗಳು, ಕೋಶನಾಶಕ (ಸೈಟೋಟಾಕ್ಸಿಕ್) ಔಷಧಿಗಳನ್ನು ಒಳಗೊಂಡ ಗಾಜು ಅಥವಾ ಪ್ಲಾಸ್ಟಿಕ್ ಬಿರಡೆಗಳು, ಸೀಸೆಗಳು ಇತ್ಯಾದಿ.

(iii) ರಕ್ತ ಅಥವಾ ದೇಹದ್ರಾವಕವನ್ನು ಮೆತ್ತಿಕೊಂಡ ತಿರಸ್ಕರಿಸಲಾದ ನಾರು, ಹಾಸಿಗೆಗಳು, ರಕ್ತ ಮತ್ತು ದೇಹದ್ರಾವಕಗಳಿಂದ ಮಲಿನಗೊಂಡ ಹಾಸಿಗೆ ಸಾಮಗ್ರಿಗಳು.

(iv) ಟ್ಯೂಬ್‌ಗಳು, ಬಾಟಲ್‌ಗಳು, ರಕ್ತನಾಳದೊಳಕ್ಕೆ ತೂರಿಸಲಾದ ಟ್ಯೂಬ್‌ಗಳು (ಇಂಟ್ರಾ ವೀನಸ್) ಮತ್ತು ಸೆಟ್‌ಗಳು, ತೂರುನಳಿಗೆ (ಕ್ಯಾಥೆಟರ್), ಮೂತ್ರದ ಬ್ಯಾಗ್‌ಗಳು, ಸೂಜಿಗಳು, ಚಿಕ್ಕ ಚಾಕುಗಳು, ಬ್ಲೇಡ್‌ಗಳು, ಸಿರಿಂಜ್ (ಸೂಜಿ ಇಲ್ಲದ ಮತ್ತು ಸೂಜಿಯನ್ನು ಹೊಂದಿದ ಸಿರಿಂಜ್‌ಗಳು) ಮತ್ತು ವ್ಯಾಕುಟೇನರ್ ಗಳು ಮತ್ತು ಕೈಗವಸುಗಳು.

**ಭಾಗ-ಇ: ಬೃಹತ್ ತ್ಯಾಜ್ಯಗಳ ವಿವರಣಾತ್ಮಕ ಪಟ್ಟಿ:-**

(i) ಪೀಠೋಪಕರಣಗಳು ಮತ್ತು ಇನ್ನಿತರ ಸಾಮಗ್ರಿಗಳಾದ ವಾರ್ಡ್‌ರೋಬ್‌ಗಳು, ಟೇಬಲ್‌ಗಳು, ಕುರ್ಚಿಗಳು, ಶೂರ್ಯಾಕ್‌ಗಳು, ಕಂಪ್ಯೂಟರ್ ಟೇಬಲ್‌ಗಳು, ಹಾಸಿಗೆಗಳು, ಮಂಚಗಳು, ಊಟದ ಟೇಬಲ್, ಸೋಫಾಗಳು, ಕಮೋಡ್‌ಗಳು ಇತ್ಯಾದಿ.

(ii) ಅಡುಗೆಮನೆ ಪಾತ್ರೆಗಳು

(iii) ಇ-ತ್ಯಾಜ್ಯವಾಗಿ ಅರ್ಹವೆನಿಸದ ಸಂಗೀತ ಉಪಕರಣಗಳು.

**ಭಾಗ-ಎಫ್: ತ್ಯಾಜ್ಯದ ವಿವರಣಾತ್ಮಕ ಪಟ್ಟಿ:-**

(i) ಐಟಿ (ಮಾಹಿತಿ ತಂತ್ರಜ್ಞಾನ) ಮತ್ತು ದೂರಸಂಪರ್ಕ (ಟೆಲಿ ಕಮ್ಯುನಿಕೇಶನ್) ಉಪಕರಣಗಳು, ಟಿವಿಗಳು, ರೆಫ್ರಿಜರೇಟರ್, ವಾಷಿಂಗ್ ಮಷೀನ್, ಎಸಿಗಳು, ಕಂಪ್ಯೂಟರ್ ಪರದೆ (ಮಾನಿಟರ್)ಗಳು, ಪ್ರಿಂಟರ್ ಗಳು, ಸ್ಕ್ಯಾನರ್ ಗಳು, ಕೀಬೋರ್ಡ್, ಮೈಸ್, ಕೇಬಲ್‌ಗಳು, ಸರ್ಕಿಟ್ ಬೋರ್ಡ್‌ಗಳು, ಲ್ಯಾಂಪ್‌ಗಳು, ಕ್ಲಾಕ್‌ಗಳು, ಫ್ಲ್ಯಾಶ್ ಲೈಟ್, ಕ್ಯಾಲ್ಕುಲೇಟರ್ ಗಳು, ಫೋನ್‌ಗಳು, ಉತ್ತರ ನೀಡುವ ಯಂತ್ರಗಳು (ಆನ್ಸರಿಂಗ್ ಮಷೀನ್ಸ್), ಡಿಜಿಟಲ್/ವಿಡಿಯೋ ಕ್ಯಾಮೆರಾಗಳು, ರೇಡಿಯೋಗಳು, ವಿಸಿಆರ್ ಗಳು, ಡಿವಿಡಿ ಪ್ಲೇಯರ್ ಗಳು, ಎಂಪಿ3 ಮತ್ತು ಸಿಡಿ ಪ್ಲೇಯರ್ ಗಳು, ಪೆನ್‌ಡ್ರೈವ್‌ಗಳಂತಹ ಗ್ರಾಹಕ ಬಳಕೆಯ ಇಲೆಕ್ಟ್ರಿಕಲ್ ಮತ್ತುಇಲೆಕ್ಟ್ರಾನಿಕ್ ಉತ್ಪನ್ನಗಳು.

**ಅನುಸೂಚಿ II**

**ಬಿಬಿಎಂಪಿ ಮತ್ತು/ಅಥವಾ ಅದರ ನೋಂದಾಯಿತ ಸೇವಾದಾರರ ಸೇವೆಯನ್ನು ಪಡೆಯದೇ ಇರುವ ತ್ಯಾಜ್ಯ ಉತ್ಪಾದಕರ ವಾರ್ಷಿಕ ವಿವರ ಸಲ್ಲಿಕೆಯ ನಮೂನೆ**

| ಕ್ರ.ಸಂ. | ಶೀರ್ಷಿಕೆಗಳು | ವಿವರ |
|---|---|---|
| 1. | ತ್ಯಾಜ್ಯ ಉತ್ಪಾದಕರ ಹೆಸರು ಮತ್ತು ವಿಳಾಸ<br>ದೂರವಾಣಿ ಸಂಖ್ಯೆ:<br>ಈಮೇಲ್: | |
| 2. | ತ್ಯಾಜ್ಯ ಉತ್ಪಾದಕರ ವರ್ಗಗಳು<br>ಗೃಹ ಸಂಬಂಧಿ ಗೃಹೋಪಯೋಗಿ<br>ವಾಣಿಜ್ಯ ಅಂಗಡಿ ಮುಂಗಟ್ಟುಗಳು<br>ಶೈಕ್ಷಣಿಕ ಸಂಸ್ಥೆಗಳು, ಶಾಲೆ, ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗಳು.<br>ಸರ್ಕಾರಿ ಕಚೇರಿಗಳು, ಕೋರ್ಟ್ ಗಳು ಮತ್ತು ಸ್ಥಳೀಯ, ರಾಜ್ಯ ಅಥವಾ ಕೇಂದ್ರ ಸರ್ಕಾರಗಳ ಇತರ ಆವರಣಗಳು.<br>ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು<br>ಇನ್ನಾವುದೇ ವಿಧದ ತ್ಯಾಜ್ಯ ಉತ್ಪಾದಕರು | |

| | | |
|---|---|---|
| 3. | ಉತ್ಪಾದಿಸಲಾಗುವ ಘನ ತ್ಯಾಜ್ಯ ಒಟ್ಟು ಪ್ರಮಾಣ<br>ವರ್ಷಕ್ಕೆ ಉತ್ಪಾದನೆಯಾದ ಘನತ್ಯಾಜ್ಯದ ಪ್ರಮಾಣ<br>ತಲಾ ಒಬ್ಬ ವ್ಯಕ್ತಿಗೆ ವಾರ್ಷಿಕವಾಗಿ ಉತ್ಪಾದನೆಯಾದ ತ್ಯಾಜ್ಯ | |
| 4. | ಮೂಲದಲ್ಲಿಯೇ ತ್ಯಾಜ್ಯವನ್ನು ಬೇರ್ಪಡಿಸುವ ಮನೆಗಳು / ಘಟಕಗಳು / ಕಟ್ಟಡಗಳ ಶೇಕಡಾವಾರು | |
| 5. | ಆಯ್ದ ಮಾರಾಟಗಾರನ ಹೆಸರು ಮತ್ತು ವಿಳಾಸ, ಏನಾದರೂ ಇದ್ದರೆ | |
| 6. | ವಿಘಟನೆ ಮಾಡಬಹುದಾದ ಜೈವಿಕ ತ್ಯಾಜ್ಯವನ್ನು ಸ್ಥಳದಲ್ಲೇ ಸಂಸ್ಕರಿಸಲಾಗುತ್ತದೆಯೇ ಅಥವಾ ಆಯ್ದ ಸೇವಾದಾರರ / ಅಧಿಕೃತ ಸಂಸ್ಕರಣೆದಾರರ ಮೂಲಕ ಸಂಸ್ಕರಿಸಲಾಗಿದೆಯೇ | ಹೌದು/ಇಲ್ಲ |
| 7. | ಪ್ರತಿ ವರ್ಷ ಸಂಗ್ರಹಿಸಲಾದ ಜೈವಿಕ ವಿಘಟನೆ ತ್ಯಾಜ್ಯದ ಪ್ರಮಾಣ | |
| 8. | ಜೈವಿಕ ವಿಘಟನೆ ತ್ಯಾಜ್ಯದ ಸಂಸ್ಕರಣೆಗೆ ಅಳವಡಿಸಿಕೊಳ್ಳಲಾದ ತಂತ್ರಜ್ಞಾನದ ವಿವರಗಳು | |
| | ಗೊಬ್ಬರ ತಯಾರಿಕೆ (ಕಾಂಪೋಸ್ಟಿಂಗ್) | ಪ್ರತಿ ವರ್ಷ ಸಂಸ್ಕರಿಸಲಾದ ಜೈವಿಕ ತ್ಯಾಜ್ಯದ ಪ್ರಮಾಣ<br>ಪ್ರತಿ ವರ್ಷ ಉತ್ಪಾದಿಸಲಾದ ಮಿಶ್ರಗೊಬ್ಬರದ ಪ್ರಮಾಣ<br>ಪ್ರತಿ ವರ್ಷ ಉತ್ಪಾದಿಸಲಾದ ಉಳಿಕೆ ತ್ಯಾಜ್ಯದ ಪ್ರಮಾಣ |
| | ಬಯೋಮಿಥೇನೇಷನ್ | ಪ್ರತಿ ವರ್ಷ ಸಂಸ್ಕರಿಸಲಾದ ಜೈವಿಕ ವಿಘಟನೆ ತ್ಯಾಜ್ಯದ ಪ್ರಮಾಣ<br>ಪ್ರತಿ ವರ್ಷ ಉತ್ಪಾದಿಸಲಾದ ಜೈವಿಕ ಅನಿಲದ ಪ್ರಮಾಣ ಪ್ರತಿ ವರ್ಷ ಉತ್ಪಾದಿಲಸಾದ ಉಳಿಕೆ ತ್ಯಾಜ್ಯದ ಪ್ರಮಾಣ |
| 9. | ಪ್ರತಿ ವರ್ಷ ಸಂಗ್ರಹಿಸಲಾದ ಜೈವಿಕವಾಗಿ ವಿಘಟನೆಯಾಗದ ತ್ಯಾಜ್ಯದ ಪ್ರಮಾಣ | |
| 10. | ಪ್ರತಿ ವರ್ಷ ಸಂಗ್ರಹಿಸಲಾದ ಅಪಾಯಕಾರಿ ಗೃಹ ತ್ಯಾಜ್ಯದ ಪ್ರಮಾಣ | |

**ಅನುಸೂಚಿ III**

**ಬೃಹತ್ ತ್ಯಾಜ್ಯ ಉತ್ಪಾದಕರನ್ನು ಅಧಿಸೂಚಿಸಿ ನೀಡಲಾದ ಸಾರ್ವಜನಿಕ ನೋಟಿಸ್**

ಸರ್ಕಾರವು 2016 ಏಪ್ರಿಲ್ 08 ರಂದು ಅಧಿಸೂಚಿಸಿದ 2016ರ ಘನತ್ಯಾಜ್ಯ ನಿರ್ವಹಣೆ (ಎಸ್‌ಡಬ್ಲ್ಯು ಎಂ) ನಿಯಮಗಳು ಘನ ತ್ಯಾಜ್ಯಉತ್ಪಾದಿಸುವ ಬೃಹತ್ ಪ್ರಮಾಣದ ತ್ಯಾಜ್ಯಗಳ ಉತ್ಪಾದಕರು ಮತ್ತು ನಿರ್ದಿಷ್ಟಪಡಿಸಿದ ಹೊಸ ನಿರ್ಮಾಣಗಳಿಂದ ಉತ್ಪಾದನೆಯಾದ ಕೆಲವು ತ್ಯಾಜ್ಯ ನಿರ್ವಹಣೆಯ ಕೆಲಸವನ್ನು ಕಡ್ಡಾಯವಾಗಿ ಅವರೇ ಮಾಡಬೇಕಾಗಿರುತ್ತದೆ, -------------------------------- (ಬಿಬಿಎಂಪಿ ಹೆಸರು) ಇನ್ನಿತರ ಯಾವುದೇ ನಿಯಮ/ ಅವಕಾಶಗಳಿದ್ದರೂ ಕೂಡ, ಈ ಮೂಲಕ ನೀಡುವ ನಿರ್ದೇಶನ ಸೂಚನೆ ಏನೆಂದರೆ, (i) 100 ಘಟಕಗಳಿಗಿಂತ ಹೆಚ್ಚಿರುವ ಗೃಹ ಉತ್ಪಾದಕರು ಉತ್ಪಾದಿಸುವ (ii) 5000 ಚದರ ಮೀಟರ್ ಅಥವಾ ಅದಕ್ಕಿಂತ ಹೆಚ್ಚು ಪ್ರದೇಶವನ್ನು ಹೊಂದಿದ 100 ಕೆಜಿಗೂ ಹೆಚ್ಚು ತ್ಯಾಜ್ಯ ಉತ್ಪಾದಿಸುವ, ಎಸ್‌ಡಬ್ಲ್ಯು ಎಂ ನಿಯಮಾವಳಿ 2016ನ್ನು ಅನುಷ್ಠಾನಗೊಳಿಸಬೇಕು ಮತ್ತು ಈ ಉಪವಿಧಿ ಜಾರಿಗೆ ಬಂದ ದಿನಾಂಕದಿಂದ ಘನತ್ಯಾಜ್ಯವನ್ನು 03(ಮೂರು) ವಿಧಗಳಾಗಿ ಪ್ರತ್ಯೇಕಿಸಿ (ಜೈವಿಕವಾಗಿ ವಿಘಟಿಸಬಲ್ಲ, ಜೈವಿಕವಾಗಿ ವಿಘಟಿಸಲಾಗದ ಮತ್ತು ನೈರ್ಮಲ್ಯ ತ್ಯಾಜ್ಯ ಸೇರಿದಂತೆ ಅಪಾಯಕಾರಿ ಗೃಹ ತ್ಯಾಜ್ಯ) ವನ್ನು ಮೂಲದಲ್ಲೇ, ನಿವೇಶನದಲ್ಲೇ ಸಂಸ್ಕರಣೆ ಮತ್ತು ಜೈವಿಕವಾಗಿ ವಿಘಟಿಸಬಲ್ಲ ತ್ಯಾಜ್ಯದ ಸಂಸ್ಕರಣೆ, ಅಧಿಕೃತ ಚಿಂದಿ ಆಯುವವರಿಗೆ ಅಥವಾ ಅಧಿಕೃತ ಮರುಬಳಕೆ ಮಾಡಬಹುದಾದವುಗಳ ಉತ್ಪಾದಕರಿಗೆ ಮರು ಉತ್ಪಾದಿಸಬಹುದಾದ ತ್ಯಾಜ್ಯದ ಹಸ್ತಾಂತರ, ಮತ್ತು ಉಳಿಕೆ ತ್ಯಾಜ್ಯವನ್ನು ತ್ಯಾಜ್ಯ ಸಂಗ್ರಾಹಕರಿಗೆ / ಏಜೆನ್ಸಿಗಳಿಗೆ ನೀಡುವುದು.

ವಿವರವಾದ ಸೂಚನೆಗಳು ಉಪವಿಧಿಯಲ್ಲಿ ಲಭ್ಯವಿದ್ದು, ಬಿಬಿಎಂಪಿ ಜಾಲತಾಣದಲ್ಲೂ ಲಭ್ಯವಿದೆ.

ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ವ್ಯಾಖ್ಯಾನದೊಳಗೆ ಬರುವ ಎಲ್ಲಾ ತ್ಯಾಜ್ಯ ಉತ್ಪಾದಕರು ಈ ರೀತಿಯಾಗಿ ವರ್ಗೀಕರಿಸಲಾಗುವುದು, ನೋಟಿಸ್ ನೀಡಿದ ಅವಧಿಯೊಳಗೆ ಅವರು ಸ್ವಯಂಘೋಷಣೆ ಸಲ್ಲಿಸದೇ ಹೋದರೆ, ಬೃಹತ್‌ತ್ಯಾಜ್ಯ ಉತ್ಪಾದಕರ ವರ್ಗಕ್ಕೆ ಸೇರುವುದಿಲ್ಲವೆಂದು ಕೆಲ ಕಾರಣಗಳಿಗಾಗಿ ಸ್ವಯಂಘೋಷಣೆ ಮಾಡದೇ ಹೋದ ಪಕ್ಷದಲ್ಲಿ ವರ್ಗೀಕರಿಸಲಾಗುವುದು. ಈ ಸ್ವಯಂಘೋಷಣೆ ಪರಿಶೀಲನೆಗೆ ಒಳಪಡಲಿದ್ದು ಅದು ಸತ್ಯಕ್ಕೆ ದೂರವಾಗಿದೆ ಎಂದು ತಿಳಿದು ಬಂದಲ್ಲಿ ನಿಗದಿಪಡಿಸಲಾದ ದಂಡವನ್ನು ವಿಧಿಸಲಾಗುತ್ತದೆ. ಪರಿಶೀಲನೆ ಮಾಡಲು ಸಾಧ್ಯವಾಗುವಂತೆ ಬಿಬಿಎಂಪಿಗೆ ಈ ಸ್ವಯಂ ಘೋಷಣೆಗಳನ್ನು ಸಲ್ಲಿಸಬೇಕಾಗುತ್ತದೆ. ನಿಗದಿಪಡಿಸಿದ ದಿನಾಂಕದ ನಂತರ ಸಲ್ಲಿಸಲಾದ / ಕಳುಹಿಸಿದ ಯಾವುದೇ ಸ್ವಯಂ-ಘೋಷಣೆಯನ್ನು ತಕ್ಷಣ ತಿರಸ್ಕರಿಸಲಾಗುತ್ತದೆ.

2016ರ ಎಸ್‌ಡಬ್ಲ್ಯು ಎಂ ನಿಯಮಗಳು ಮತ್ತು / ಅಥವಾ ಈ ಉಪವಿಧಿಗಳ ಉಲ್ಲಂಘನೆ ಗಮನಕ್ಕೆ ಬಂದರೆ ಬಿಬಿಎಂಪಿ ಉಪವಿಧಿಗಳಲ್ಲಿ ಉಲ್ಲೇಖಿಸಲಾಗಿರುವಂತೆ ದಂಡವನ್ನು ವಿಧಿಸಲಾಗುತ್ತದೆ.

ಸ್ಥಳ:

ಬಿಬಿಎಂಪಿ ಅಧಿಕೃತ ಸಹಿದಾರರ ಸಹಿ

**ಅನುಸೂಚಿ IV**

**ವೈಯಕ್ತಿಕ ನೋಟಿಸ್ ನಮೂನೆ**

ರವರಿಗೆ,

(ಪ್ರಸ್ತಾಪಿತ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಹೆಸರು ಸೇರಿಸಿ)

ವಿಷಯ: ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಎಂದು ವರ್ಗೀಕರಣ

ಶ್ರೀ/ಶ್ರೀಮತಿ/ಮೆ||

ನಿಮ್ಮ ಸ್ವಾಧೀನದಲ್ಲಿರುವ ಆವರಣದಲ್ಲಿ ಮತ್ತು / ಅಥವಾ ಪ್ರದೇಶದಲ್ಲಿ ನಡೆಸುತ್ತಿರುವ ಕಾರ್ಯಚಟುವಟಿಕೆಗಳು / ವ್ಯಾಪಾರವನ್ನು ಪರಿಶೀಲಿಸಿ ಸಕ್ಷಮ ಪ್ರಾಧಿಕಾರವು (ಬಿಬಿಎಂಪಿ ಹೆಸರು) ನಿಮ್ಮನ್ನು ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಎಂದು ಪರಿಗಣಿಸಲಾಗಿದೆ. ಆ ಮೂಲಕವಾಗಿ ನೀವು 2016ರ ಎಸ್‌ಡಬ್ಲ್ಯುಎಂ ನಿಯಮಗಳಲ್ಲಿನ ಅವಕಾಶಗಳು, ಉಪ-ವಿಧಿಗಳ ಅನುಪಾಲನೆಗೆ ಬದ್ಧರಾಗಿರುವಂತೆ ಸೂಚನೆ ನೀಡಲಾಗಿದೆ. ಇದರಂತೆ ಮೂಲದಲ್ಲೇ ತ್ಯಾಜ್ಯವನ್ನು ಬೇರ್ಪಡಿಸುವುದು, ಆವರಣದ ಒಳಗೇ ಬೇರ್ಪಡಿಸಿದ ತ್ಯಾಜ್ಯ ಸಂಗ್ರಹಣೆ ಮತ್ತು ಸಂಸ್ಕರಣೆ ಮಾಡುವುದು, ಜೈವಿಕವಾಗಿ ವಿಘಟನೆಯಾಗುವ ತ್ಯಾಜ್ಯವನ್ನು ಆವರಣದೊಳಗೇ ಸಂಸ್ಕರಣೆ ಮಾಡಲು ಅಥವಾ ಸ್ಥಳಾವಕಾಶ ಇಲ್ಲದೇ ಹೋದ ಪಕ್ಷದಲ್ಲಿ ಪಟ್ಟಿ ಮಾಡಲಾದ ಅಧೀಕೃತ ತ್ಯಾಜ್ಯ ಸಂಸ್ಕರಣೆದಾರರ ಜೊತೆ ಒಪ್ಪಂದ ಮಾಡಿಕೊಳ್ಳುವ ನಿಯಮಕ್ಕೆ ಬದ್ಧರಾಗಿರಬೇಕಾಗುತ್ತದೆ.

ಒಂದು ವೇಳೆ ನೀವು ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರಲ್ಲ ಎಂದು ಹೇಳಿಕೊಳ್ಳುತ್ತೀರಾದರೆ 20 ದಿನಗಳ ಒಳಗಾಗಿ ನೀವು ಸ್ವಯಂ-ಘೋಷಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲದೇ ಹೋದರೆ ನಿಮ್ಮನ್ನು ಬೃಹತ್ ಪ್ರಮಾಣದ ತ್ಯಾಜ್ಯಉತ್ಪಾದಕರು ಎಂದು ವರ್ಗೀಕರಣ ಮಾಡಲು ಯಾವುದೇ ಆಕ್ಷೇಪ ಇಲ್ಲವೆಂದು ಪರಿಗಣಿಸಲಾಗುವುದು.

ಲಗತ್ತಿಸಲಾಗಿರುವ ಸ್ವಯಂ-ಘೋಷಣೆ ಪ್ರಪತ್ರವನ್ನು ಭರ್ತಿ ಮಾಡಿ ಬಿಬಿಎಂಪಿಯ ನಿಯೋಜಿತ ಅಧಿಕಾರಿಗಳಿಗೆ ಸಲ್ಲಿಕೆ ಮಾಡಿ ಸ್ವೀಕೃತಿ ರಸೀದಿಯನ್ನು ಪಡೆದುಕೊಳ್ಳಬೇಕು. ಮುಂದಿನ ಪರಿಶೀಲನಾ ಪ್ರಮಾಣ ಪತ್ರವನ್ನು ನೀಡುವತನಕ ಈ ರಸೀದಿಯನ್ನೇ "ಸಾಮಾನ್ಯ ತ್ಯಾಜ್ಯ ಉತ್ಪಾದಕ ಪ್ರಮಾಣ ಪತ್ರ"ಎಂದು ಪರಿಗಣಿಸಬೇಕಾಗುತ್ತದೆ. ಒಂದು ವೇಳೆ ನಿಮ್ಮ ಸ್ವಯಂ-ಘೋಷಣೆ ಸತ್ಯಕ್ಕೆ ದೂರವಾದುದು ಎಂದು ಕಂಡುಬಂದರೆ ಪ್ರಮಾಣ ಪತ್ರವನ್ನು ರದ್ದು ಮಾಡಲಾಗುತ್ತದೆ ಮತ್ತು ಉಪವಿಧಿಗಳ ಅನ್ವಯದಂಡ ವಿಧಿಸಲಾಗುತ್ತದೆ.

-----------

ಅಧಿಕೃತ ಸಹಿದಾರ

ಬಿಬಿಎಂಪಿ ಆಯುಕ್ತರ ಪರವಾಗಿ

**ಅನುಸೂಚಿ V**

**ಸ್ವಯಂ-ಘೋಷಣೆ ಅರ್ಜಿ ನಮೂನೆ**

(ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರಲ್ಲದವರಿಗೆ) ನಾನು/ನಾವು/ಮೆ||.**____________________________ಈ ಕಟ್ಟಡದ ಆವರಣದಲ್ಲಿ ______________________(ವಿಳಾಸ)____________ (ದೂರವಾಣಿ) _____________ (ಮೊಬೈಲ್)____________________ (ಇ-ಮೇಲ್) ಮತ್ತು ಹೊಂದಿರುವ _____________________________ ಪಾಲಿಕೆಯ ಅನುಭೋಗ ಪ್ರಮಾಣಪತ್ರ / ಆಸ್ತಿ ತೆರಿಗೆ ನಿರ್ಧಾರಣೆ ಸಂ.____________________________ ಅಥವಾ ವಾಣಿಜ್ಯ ಪರವಾನಗಿ ಸಂ._____________ವ್ಯವಹಾರದ ಕಾರ್ಯಚಟುವಟಿಕೆ ನಡೆಯುವ ಕಟ್ಟಡದ ಆವರಣದ ವಿವರ_________________________________________.

ನಾನು/ನಾವು/ಮೆ||_____________________________ ಈ ಮೂಲಕ ಸ್ವಯಂ-ಘೋಷಣೆ ಮಾಡುವುದೇನೆಂದರೆ ನಾವು ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕ ವರ್ಗದಡಿಯಲ್ಲಿ ಬರುವುದಿಲ್ಲ.

ನಾನು/ನಾವು/ಮೆ||_________________________ ತಿಳಿದಿರುವುದು ಏನೆಂದರೆ ______________ಬಿಬಿಎಂಪಿಯು ನಮ್ಮ ಕಟ್ಟಡದ ಆವರಣವನ್ನು ಪ್ರವೇಶಿಸಿ ಇಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯದ ಪ್ರಮಾಣವನ್ನು ತಪಾಸಣೆ ಮಾಡಿ ಪರಿಶೀಲನೆ ನಡೆಸಲು ಪೂರ್ಣ ಸ್ವಾತಂತ್ರ್ಯವನ್ನು ಹೊಂದಿರುತ್ತದೆ. ಇಂತಹ ಪರಿಶೀಲನೆಯ ಸಂದರ್ಭದಲ್ಲಿಇದು ಸತ್ಯಕ್ಕೆ ದೂರವಾದುದು ಎಂದುಕಂಡು ಬಂದಲ್ಲಿ ಈ ಸ್ವಯಂ-ಘೋಷಣೆಯು ರದ್ದಾಗುತ್ತದೆ ಮತ್ತು ನಾನು/ನಾವು/ಮೆ|| ಅನ್ನು ಬೃಹತ್‌ತ್ಯಾಜ್ಯ ಉತ್ಪಾದಕರು ಎಂದು ವರ್ಗೀಕರಣ ಮಾಡಬಹುದಾಗಿದೆ ಮತ್ತು____________ಬಿಬಿಎಂಪಿಯು ಹೊರಡಿಸಿದ ಸಾರ್ವಜನಿಕ ನೋಟಿಸ್ ಪ್ರಕಾರ ಬೃಹತ್‌ತ್ಯಾಜ್ಯ ಉತ್ಪಾದಕರ ಜವಾಬ್ದಾರಿಗಳು ಎಂದು ಜಾರಿಗೆ ಬಂದ ದಿನಾಂಕದಿಂದ ದಂಡ ವಿಧಿಸಬಹುದಾಗಿದೆ.

(ಅಧಿಕಾರಿಯ ಸಹಿ)

ಕಟ್ಟಡದ ಅನುಭೋಗದಾರ / ಮಾಲೀಕ ಇವರಿಗೆ

ಇವರಿಗೆ_____________ಬಿಬಿಎಂಪಿ

** ಅನ್ವಯವಾಗದಿರುವುದನ್ನು ಹೊಡೆದು ಹಾಕಿ

**ಅನುಸೂಚಿ VI**

**ಎಸ್‌ಡಬ್ಲ್ಯು ಎಂ ಕರ ಮತ್ತು ಬಳಕೆದಾರರ ಶುಲ್ಕ**

**(ರೂಪಾಯಿಗಳಲ್ಲಿ)**

**ಭಾಗ 1 ಎ -ಎಸ್‌ಡಬ್ಲ್ಯು ಎಂ ಕರಗಳು**

**(ಬೀದಿ ಮತ್ತು ಸಾರ್ವಜನಿಕ ಪ್ರದೇಶಗಳ ಸ್ವಚ್ಛತೆ ನಿರ್ವಹಣೆಗಾಗಿ ಎಲ್ಲಾ ತ್ಯಾಜ್ಯ ಉತ್ಪಾದಕರು ಆಸ್ತಿ ತೆರಿಗೆಯೊಂದಿಗೆ ಪಾವತಿ ಮಾಡುವುದು)**

| **ಕ್ರ.ಸಂ.** | **ತ್ಯಾಜ್ಯ ಉತ್ಪಾದಕರ ವರ್ಗ (ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು ಹೊರತುಪಡಿಸಿ)** | **ಎಸ್‌ಡಬ್ಲ್ಯು ಎಂ ಕರ (ಪ್ರತಿ ತಿಂಗಳು)** |
|---|---|---|
| **ಎ** | **ನಿವಾಸಗಳ ಕಟ್ಟಡಗಳು (ಗೃಹ ತ್ಯಾಜ್ಯ ಉತ್ಪಾದಕರ ವ್ಯಾಖ್ಯಾನದಂತೆ)** | |
| 1 | ಮೇಲ್ಪಾಯದ ವಿಸ್ತೀರ್ಣ 1000 ಚದರಡಿ ತನಕ | 10 |
| 2 | ಮೇಲ್ಪಾಯದ ವಿಸ್ತೀರ್ಣ 1001 ಚದರಡಿಯಿಂದ 3000 ಚದರಡಿ ತನಕ | 30 |
| 3 | ಮೇಲ್ಪಾಯದ ವಿಸ್ತೀರ್ಣ 3000 ಚದರಡಿಗಿಂತ ಮೇಲ್ಪಟ್ಟು | 50 |
| **ಬಿ** | **ವಾಣಿಜ್ಯ ಕಟ್ಟಡಗಳು (ವಾಣಿಜ್ಯ ಮತ್ತು ಸಾಂಸ್ಥಿಕ ತ್ಯಾಜ್ಯ ಉತ್ಪಾದಕರ ವ್ಯಾಖ್ಯಾನದಂತೆ)** | |
| 1 | ಮೇಲ್ಪಾಯದ ವಿಸ್ತೀರ್ಣ 1000 ಚದರಡಿ ತನಕ | 50 |
| 2 | ಮೇಲ್ಪಾಯದ ವಿಸ್ತೀರ್ಣ 1001 ಚದರಡಿಯಿಂದ 5000 ಚದರಡಿ ತನಕ | 100 |
| 3 | ಮೇಲ್ಪಾಯದ ವಿಸ್ತೀರ್ಣ 5000 ಚದರಡಿಗಿಂತ ಮೇಲ್ಪಟ್ಟು | 200 |
| **ಸಿ** | **ಕೈಗಾರಿಕಾ ಕಟ್ಟಡಗಳು (ವಾಣಿಜ್ಯ ತ್ಯಾಜ್ಯ ಉತ್ಪಾದಕರ ವ್ಯಾಖ್ಯಾನದಂತೆ)** | |
| 1 | ಮೇಲ್ಪಾಯದ ವಿಸ್ತೀರ್ಣ 1000 ಚದರಡಿ ತನಕ | 100 |

| | | |
|---|---|---|
| 2 | ಮೇಲ್ಛಾವಣಿಯದ ವಿಸ್ತೀರ್ಣ 1001 ಚದರಡಿಯಿಂದ 5000 ಚದರಡಿ ತನಕ | 200 |
| 3 | ಮೇಲ್ಛಾವಣಿಯದ ವಿಸ್ತೀರ್ಣ 5000 ಚದರಡಿಗಿಂತ ಮೇಲ್ಪಟ್ಟು | 300 |
| ಡಿ | **ಹೋಟೆಲ್‌ಗಳು, ಕಲ್ಯಾಣ ಮಂಟಪಗಳು, ಆರೋಗ್ಯ ಸೇವಾ ಸಂಸ್ಥೆಗಳು (ವಾಣಿಜ್ಯ ತ್ಯಾಜ್ಯ ಉತ್ಪಾದಕರ ವ್ಯಾಖ್ಯಾನದಂತೆ)** | |
| 1 | ಮೇಲ್ಛಾವಣಿಯದ ವಿಸ್ತೀರ್ಣ 10000 ಚದರಡಿ ತನಕ | 300 |
| 2 | ಮೇಲ್ಛಾವಣಿಯದ ವಿಸ್ತೀರ್ಣ 10001 ಚದರಡಿಯಿಂದ 50000 ಚದರಡಿ ತನಕ | 500 |
| 3 | ಮೇಲ್ಛಾವಣಿಯದ ವಿಸ್ತೀರ್ಣ 50000 ಚದರಡಿಗಿಂತ ಮೇಲ್ಪಟ್ಟು | 600 |

**ಭಾಗ 1ಬಿ- ಎಸ್‌ಡಬ್ಲ್ಯು ಎಂ ಬಳಕೆದಾರರ ಶುಲ್ಕಗಳು**

**ಎಲ್ಲಾ ತ್ಯಾಜ್ಯ ಉತ್ಪಾದಕರಿಂದ ಪಾವತಿಸಬೇಕಾದ (ಬಿಬಿಎಂಪಿಯ ಎಸ್‌ಡಬ್ಲ್ಯು ಎಂ ಸೇವೆಗಳನ್ನು ಬಳಸಿಕೊಳ್ಳದ ಬೃಹತ್‌ತ್ಯಾಜ್ಯ ಉತ್ಪಾದಕರನ್ನು ಹೊರತುಪಡಿಸಿ)**

| **ಕ್ರ.ಸಂ.** | **ತ್ಯಾಜ್ಯಉತ್ಪಾದಕರವರ್ಗ (ಬಿಬಿಎಂಪಿಯ ಎಸ್‌ಡಬ್ಲ್ಯು ಎಂ ಸೇವೆಗಳನ್ನು ಬಳಸಿಕೊಳ್ಳದ ಬೃಹತ್‌ತ್ಯಾಜ್ಯ ಉತ್ಪಾದಕರನ್ನು ಹೊರತುಪಡಿಸಿ)** | **ಎಸ್‌ಡಬ್ಲ್ಯು ಎಂ ಬಳಕೆದಾರರ ಶುಲ್ಕ (ಪ್ರತಿ ತಿಂಗಳಿಗೆ)** |
|---|---|---|
| | **ಗೃಹ ತ್ಯಾಜ್ಯಉತ್ಪಾದಕರು** | |
| 1 | ಎಲ್ಲಾ ವರ್ಗಗಳು | 200 |
| | | |

| | | |
|---|---|---|
| | **ವಾಣಿಜ್ಯ ಮತ್ತು ಸಾಂಸ್ಥಿಕ ತ್ಯಾಜ್ಯ ಉತ್ಪಾದಕರು** | |
| 2 | ಪ್ರತಿದಿನ 5 ಕೆಜಿಗೆ ಸಮನಾಗಿ ಅಥವಾ 5 ಕೆಜಿಗಿಂತ ಕಡಿಮೆ | 500 |
| 3 | ಪ್ರತಿದಿನ 10 ಕೆಜಿಗೆ ಸಮನಾಗಿ ಅಥವಾ 10 ಕೆಜಿಗಿಂತ ಕಡಿಮೆ | 1400 |
| 4 | ಪ್ರತಿದಿನ 25 ಕೆಜಿಗೆ ಸಮನಾಗಿ ಅಥವಾ 25 ಕೆಜಿಗಿಂತ ಕಡಿಮೆ | 3500 |
| 5 | ಪ್ರತಿದಿನ 50 ಕೆಜಿಗೆ ಸಮನಾಗಿ ಅಥವಾ 50 ಕೆಜಿಗಿಂತ ಕಡಿಮೆ | 7000 |
| 6 | ಪ್ರತಿದಿನ 100 ಕೆಜಿಗೆ ಸಮನಾಗಿ ಅಥವಾ 100 ಕೆಜಿಗಿಂತ ಕಡಿಮೆ | 14000 |
| | **ಖಾಲಿ ನಿವೇಶನಗಳು** | |
| 7 | ಖಾಲಿ ನಿವೇಶನಗಳು | ರೂ.0.20 ಚದರಡಿಗೆ |
| | **ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯ** | |
| 8 | ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯ ಸಂಗ್ರಹ ಮತ್ತು ಸಾಗಣೆ | ಸಾಮಾನ್ಯ/ವಿಶೇಷ ಆದೇಶಗಳು/ಅಧಿಸೂಚನೆ/ ವಿಶೇಷ ನಿಯಮಗಳ ಮೂಲಕ ಬಿಬಿಎಂಪಿ ಅಭಿಪ್ರಾಯ/ ನಿರ್ಧಾರದಂತೆ |

| | | |
|---|---|---|
| 9 | ನಿರ್ಮಾಣ ಮತ್ತು ಭಗ್ನಾವಶೇಷ ಸಂಸ್ಕರಣೆ | ರೂ.134 ಪ್ರತಿ ಮೆ.ಟನ್‌ಗೆ (ಕಾಲಕಾಲಕ್ಕೆ ಬಿಬಿಎಂಪಿ ಪರಿಷ್ಕರಿಸಿದಂತೆ) |
| **ಬಿಬಿಎಂಪಿ ವ್ಯಾಪ್ತಿಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸ್ಥಳದಲ್ಲಿ ನಡೆಯುವ ಕಾರ್ಯಕ್ರಮಗಳು (ರೂ. ಗಳಲ್ಲಿ)** | | |
| 10 | ವಸ್ತುಪ್ರದರ್ಶನಗಳು, ಮದುವೆ ಹಾಲ್‌ಗಳಲ್ಲಿ ನಡೆಯುವ ತಾತ್ಕಾಲಿಕ ಮನರಂಜನಾ ಕಾರ್ಯಕ್ರಮಗಳು, ಸಮುದಾಯ ಭವನ, ಹೋಟೆಲ್, ನಿರ್ಮಾಣ ಹಂತದಲ್ಲಿರುವ ನಿವೇಶಗಳು/ ಖಾಲಿ ಇರುವ ಪ್ರದೇಶಗಳು, ಮಾರ್ಕೆಟ್ ಪ್ರದೇಶ ಇತ್ಯಾದಿ | |
| | ಎ) ಒಂದು ವಾರ ಕಾಲದವರೆಗೆ | 1,500 |
| | ಬಿ) ಒಂದು ವಾರಕ್ಕಿಂತ ಹೆಚ್ಚು ಮತ್ತು ತಿಂಗಳಿಗಿಂತ ಕಡಿಮೆ | 3,000 |
| | ಸಿ) ಒಂದು ತಿಂಗಳಿಗಿಂತ ಹೆಚ್ಚು | 6,000 |
| 11 | ಸಾರ್ವಜನಿಕ ಸ್ಥಳಗಳಲ್ಲಿ ನಡೆಯುವ ಕಾರ್ಯಕ್ರಮಗಳು ಮತ್ತು ಸಮಾವೇಶಗಳಿಗೆ ಮರುಪಾವತಿಸಬಹುದಾದ ಸ್ವಚ್ಛತಾ ಠೇವಣಿ (ಒಂದು ಬಾರಿ) (ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳು ಮತ್ತು ಸಮಾವೇಶಗಳನ್ನು ಹೊರತುಪಡಿಸಿ | - |

| | | |
|---|---|---|
| | ಎ) 500-5000 ಜನ ಸಮಾವೇಶಗೊಂಡಾಗ | -<br>10,000 |
| | ಬಿ) 5000-10000 ಜನರ ಸಮಾವೇಶ | 25,000 |
| | ಸಿ) 10,000-25,000 ಜನರ ಸಮಾವೇಶ | 50,000 |
| | ಡಿ) 25,000ಕ್ಕಿಂತ ಹೆಚ್ಚು ಜನರ ಸಮಾವೇಶ | 1,00,000 |
| 12 | ಸಾರ್ವಜನಿಕ ಸ್ಥಳಗಳಲ್ಲಿ ನಡೆಸುವ ಕಾರ್ಯಕ್ರಮಗಳು ಮತ್ತು ಸಮಾವೇಶಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದ ಸಂಗ್ರಹ, ಸಾರಿಗೆ ಮತ್ತು ಸಂಸ್ಕರಣಕ್ಕೆ ಬಳಕೆದಾರರ ಶುಲ್ಕ (ಒಂದು ಬಾರಿ) (ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳು ಮತ್ತು ಸಮಾವೇಶಗಳನ್ನು ಹೊರತುಪಡಿಸಿ) | ಉತ್ಪತ್ತಿಯಾದ ತ್ಯಾಜ್ಯಕ್ಕೆ ರೂ.6/ಕೆ.ಜಿ. ರಂತೆ ಅಥವಾ ನಿಜವಾದ ಆಧಾರದ ಮೇಲೆ ಒಂದು ಬಾರಿಯ ಮೊತ್ತ. |

- **ಮೇಲೆ ಪ್ರಸ್ತಾಪಿಸಿದ ಎಸ್‌ಡಬ್ಲ್ಯುಎಂ ಬಳಕೆದಾರರ ಶುಲ್ಕಗಳು ಕಡ್ಡಾಯವಾಗಿ ಪಾವತಿ ಮಾಡುವ ಎಸ್‌ಡಬ್ಲ್ಯುಎಂ ಕರದ ಮೇಲೆ ಮತ್ತು ಮೇಲೆ ವಿಧಿಸುವ ಶುಲ್ಕಗಳಾಗಿದ್ದು ಯಾವುದೇ ಸಂದರ್ಭದಲ್ಲಿ ಇದನ್ನು ಅಧಿಸೂಚನೆಯ ಮೂಲಕ ತಿದ್ದುಪಡಿ ಮಾಡಬಹುದಾಗಿದೆ.**

**ಅನುಸೂಚಿ VII**

**ದಂಡಗಳ ವಿವರ ಪಟ್ಟಿ**

**(ರೂಪಾಯಿಗಳಲ್ಲಿ)**

| **ಕ್ರ. ಸಂ** | **ನಿಯಮದ ಅನುಪಾಲನೆ ಮಾಡದಿರುವುದು ಮತ್ತು ತ್ಯಾಜ್ಯ ಉತ್ಪಾದಕರ ವರ್ಗ** | **ಮೊದಲ ಅಪರಾಧಕ್ಕೆ ದಂಡ/ ಶಿಕ್ಷೆ** | **ಎರಡನೇ ಮತ್ತು ಪುನರಾವರ್ತಿತ ಅಪರಾಧಕ್ಕೆ ದಂಡ** |
|---|---|---|---|

| | | | |
|---|---|---|---|
| 1. | ಕಸ ಎಸೆಯುವುದು, ಉಗಿಯುವುದು, ಮೂತ್ರ ವಿಸರ್ಜನೆ ಮಾಡುವುದು, ಬಯಲು ಮಲ ವಿಸರ್ಜನೆ ಅಥವಾ ಇನ್ನಿತರ ಯಾವುದೇ ಸಾರ್ವಜನಿಕವಾಗಿ ಮಾಡುವ ಉಪದ್ರವ | 1,000 | 2,000 |
| 2. | ಉಪವಿಧಿಗಳಂತೆ ಘನತ್ಯಾಜ್ಯವನ್ನು ಬೇರ್ಪಡಿಸಲು ಮತ್ತು / ಅಥವಾ ಹಸ್ತಾಂತರಿಸಲು ವಿಫಲವಾದರೆ:<br>(i) ಗೃಹ ತ್ಯಾಜ್ಯ ಉತ್ಪಾದಕರಿಂದ (ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರಲ್ಲದವರು)<br>(ii)ತ್ಯಾಜ್ಯ ಸಂಗ್ರಹಕಾರರಿಂದ (ಎಸ್‌ಡಬ್ಲ್ಯು ಎಂ ಅಧಿಕಾರಿಗಳು ಸೇರಿದಂತೆ)- ಮಿಶ್ರ ತ್ಯಾಜ್ಯವನ್ನು ಸಂಗ್ರಹಿಸುವವರು ಅಥವಾ ಸಂಗ್ರಹಿಸಿದ ನಾನಾ ರೀತಿಯ ತ್ಯಾಜ್ಯವನ್ನು ಮಿಶ್ರಣ ಮಾಡಿ ಸಾಗಾಟ ಮಾಡುವವರು. | (i) 1,000<br>(ii) 2,000 | (i) 2,000<br>(ii) 3,000 |
| 3. | ಈ ಉಪವಿಧಿಯ ಅನ್ವಯ ಘನತ್ಯಾಜ್ಯವನ್ನು ಬೇರ್ಪಡಿಸುವಲ್ಲಿ ವಿಫಲವಾದರೆ/ ಕಸ ಎಸೆಯುವುದು / ಅನಧಿಕೃತ ತ್ಯಾಜ್ಯ ಸಂಗ್ರಹಕರಿಗೆ ತ್ಯಾಜ್ಯವನ್ನು ಹಸ್ತಾಂತರಿಸಿದರೆ,<br>(i) ಸಣ್ಣ ವಾಣಿಜ್ಯ ಸಂಸ್ಥೆಗಳು<br>(ii) ಬೃಹತ್ ವಾಣಿಜ್ಯ ಸಂಸ್ಥೆಗಳು | (i)5,000<br>(ii) 10,000<br>(iii) 15000<br>(iv) 5,000/ 10,000 | (i) 10,000<br>(ii) 20,000<br>(iii) 30,000 |

| | | | |
|---|---|---|---|
| | (iii) ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು<br>(iv) ಮಿಶ್ರಿತ ತ್ಯಾಜ್ಯ ಸಂಗ್ರಹಿಸುವ ಅಥವಾ ವಿವಿಧ ಬಗೆಯ ತ್ಯಾಜ್ಯವನ್ನು ಮಿಶ್ರಣ ಮಾಡುವ ಮತ್ತು ವಾಣಿಜ್ಯ/ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರಿಂದ ಸಾಗಾಟ ಮಾಡುವ ತ್ಯಾಜ್ಯ ಸಂಗ್ರಾಹಕರು (ಎಸ್‌ಡಬ್ಲ್ಯು ಎಂ ಅಧಿಕಾರಿಗಳು ಸೇರಿದಂತೆ) | | (iv) 10,000/20,000 |
| 4. | ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯವನ್ನು ಬೇರ್ಪಡಿಸಿದ ವಿಧಾನದಲ್ಲಿ ಸಂಗ್ರಹಿಸುವ ಮತ್ತು/ಅಥವಾ ವಿತರಣೆ ಮಾಡಲು ಅಥವಾ ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ ತ್ಯಾಜ್ಯ ರಾಶಿ ಹಾಕುವಲ್ಲಿ ವಿಫಲವಾದರೆ | 10,000/ಟನ್ | 25,000/ ಟನ್ |
| 5. | ಯಾವುದೇ ತ್ಯಾಜ್ಯ ಉತ್ಪಾದಕರು (ವಾಣಿಜ್ಯ ಅಥವಾ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರಲ್ಲದವರು) ಘನತ್ಯಾಜ್ಯವನ್ನು ಸುಡುವುದು, ರಾಶಿ ಹಾಕುವುದು ಮತ್ತು/ಅಥವಾ ಅನಧಿಕೃತವಾಗಿ ಹೂತು ಹಾಕಿ ವಿಲೇವಾರಿ ಮಾಡಿದರೆ* | 10,000 | |
| 6. | ವಾಣಿಜ್ಯ/ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರಲ್ಲದವರು ಘನತ್ಯಾಜ್ಯವನ್ನು ಸುಡುವುದು, ರಾಶಿ ಹಾಕುವುದು ಮತ್ತು/ಅಥವಾ ಅನಧಿಕೃತವಾಗಿ ಹೂತು ಹಾಕಿ ವಿಲೇವಾರಿ ಮಾಡಿದರೆ* | 25,000 | |

| | | | |
|---|---|---|---|
| 7. | ಉಪವಿಧಿಗಳಲ್ಲಿ ನಿರ್ದಿಷ್ಟವಾಗಿ ತಿಳಿಸಿರುವಂತೆ ತ್ಯಾಜ್ಯ ಸಂಗ್ರಾಹಕರಿಗೆ ಬೇರ್ಪಡಿಸಿದ ವಿಧಾನದಲ್ಲಿ (ಗೃಹೇತರವಲ್ಲದ) ಮೀನು, ಕೋಳಿ ಮತ್ತು ಕಸಾಯಿಖಾನೆಯ ತ್ಯಾಜ್ಯವನ್ನು ನೀಡುವಲ್ಲಿ ವಿಫಲವಾದರೆ ಅಥವಾ (ಗೃಹೇತರವಲ್ಲದ) ಮೀನು, ಕೋಳಿ ಮತ್ತು ಕಸಾಯಿಖಾನೆಯ ತ್ಯಾಜ್ಯವನ್ನು ಸಮುದಾಯದ ಬಿನ್, ಕಸದಬುಟ್ಟಿ, ಸಾರ್ವಜನಿಕ ಸ್ಥಳ ಅಥವಾ ಇನ್ನಿತರ ಯಾವುದೇ ಅನಧಿಕೃತ ಸ್ಥಳದಲ್ಲಿ ರಾಶಿ ಹಾಕಿದರೆ. | 2,000 | 3,000 |
| 8. | ಉಪವಿಧಿಯಲ್ಲಿ ಸ್ಪಷ್ಟವಾಗಿ ತಿಳಿಸಿರುವಂತೆ ಬೀದಿ ಬದಿಯ ವ್ಯಾಪಾರಿಗಳು ಕಂಟೇನರ್/ ಕಸದ ಬುಟ್ಟಿಯನ್ನು ಇಡದೇ ಇದ್ದರೆ ಮತ್ತು/ ಅಥವಾ ಬೇರ್ಪಡಿಸಿದ ವಿಧಾನದಲ್ಲಿ ಘನ ತ್ಯಾಜ್ಯವನ್ನು ನೀಡದೇ ಇದ್ದರೆ. | 300 | 500 |
| 9. | ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಎಂದು ವರ್ಗೀಕರಣಗೊಳ್ಳುವುದನ್ನು ತಪ್ಪಿಸಿಕೊಳ್ಳಲು ಈ ಉಪವಿಧಿಯ ಅಡಿಯಲ್ಲಿ ತಪ್ಪು ಸ್ವಯಂ-ಘೋಷಣೆಯನ್ನು ಮಾಡಿಕೊಂಡರೆ | 10,000 | |
| 10. | ಸ್ವಚ್ಛತೆಯನ್ನು ಕಾಯ್ದುಕೊಳ್ಳಲು ಮತ್ತು ರಸ್ತೆ, ಬಸ್‌ನಿಲ್ದಾಣ, ರೈಲ್ವೆ ನಿಲ್ದಾಣ, ಬೀದಿ, ಮೈದಾನ, ಪಾರ್ಕ್ ಮತ್ತು ಇತರ ಸಾರ್ವಜನಿಕ ಬಳಕೆಯ ಆವರಣಗಳಲ್ಲಿ ಸ್ವಚ್ಛತೆ ಕಾಪಾಡುವಂತೆ ಆಯುಕ್ತರು ಅಧಿಕೃತವಾಗಿ ಹೊರಡಿಸಿದ ಸೂಚನೆಗಳನ್ನು ಪಾಲಿಸುವಲ್ಲಿ | 500 | 1,000 |

| | | | |
|---|---|---|---|
| | ವಿಫಲವಾದರೆ. | | |
| 11. | ಕಸ ಅಥವಾ ಕೊಳಚೆ ಅಥವಾ ಇನ್ಯಾವುದೇ ಘನ ವಸ್ತುಗಳನ್ನು ಅನಿಯಮಿತವಾಗಿ ಸಂಗ್ರಹಿಸಿಟ್ಟರೆ | 500 | 1,000 |
| 12. | ಮಾಲೀಕರು ಖಾಲಿ ನಿವೇಶನಗಳಲ್ಲಿ ಇರುವ ಕೊಳಚೆ, ಕಸಕಡ್ಡಿಗಳನ್ನು ತೆರವು ಮಾಡದೇ ಅನಾರೋಗ್ಯಕರವಾಗಿ ಇಟ್ಟುಕೊಂಡು ಸಾರ್ವಜನಿಕರ ಆರೋಗ್ಯಕ್ಕೆ ಅಪಾಯ ಉಂಟುಮಾಡಿದ್ದರೆ. | 25,000 | 50,000 ರಿಂದ 1,00,000 ತನಕ |
| 13 | ಈ ಉಪವಿಧಿಯಂತೆ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರು ಹಸಿ ತ್ಯಾಜ್ಯವನ್ನು ಆವರಣದಲ್ಲೇ ಸಂಸ್ಕರಿಸುವ ಅಭ್ಯಾಸ ಇಟ್ಟುಕೊಳ್ಳದೇ ಹೋದರೆ | 10,000 | 25,000 |
| *ಒ.ಎ. ಸಂಖ್ಯೆ 606-2018ಕ್ಕೆ ಸಂಬಂಧಿಸಿದಂತೆ ದಿ:15.03.2019ರಂದು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ (ಎನ್.ಜಿ.ಟಿ) ನಿರ್ದೇಶನದಂತೆ. | | | |
| **ಪ್ಲಾಸ್ಟಿಕ್ ನಿಷೇಧ ಜಾರಿ** | | | |
| 13. | ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಸಗಟು ಮಾರಾಟ, ಚಿಲ್ಲರೆ ಮಾರಾಟ ಮತ್ತು ಮಾರಾಟ* | 50,000 | 1,00,000 |
| 14. | ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಬಳಕೆದಾರರು: | | |

| | | | |
|---|---|---|---|
| | ವಾಣಿಜ್ಯಿಕ ಬಳಕೆದಾರರು | 25,000 | 50,000 |
| | ಗೃಹ ಬಳಕೆದಾರರು | 500 | 1,000 |
| *ದಿ:11.03.2016 ರಂದು ಹೊರಡಿಸಲಾದ ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ ಸಂಖ್ಯೆ. ಏಫ್‌ಇಇ 17ಇಪಿಸಿ2012 ಮತ್ತು ಆ ಬಳಿಕ ಮಾಡಲಾದ ತಿದ್ದುಪಡಿಗಳು. | | | |

<u>ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಮಾವೇಶಗಳಲ್ಲಿ ನಿಯಮ ಪಾಲನೆ ಮಾಡದಿರುವುದಕ್ಕೆ ದಂಡ</u>

| ಕ್ರ.ಸಂ. | ಅಪರಾಧ | ಕಾರ್ಯಕ್ರಮದಲ್ಲಿ ಭಾಗವಹಿಸಿದ ಜನರ ಸಂಖ್ಯೆಯನ್ನು ಆಧರಿಸಿ ದಂಡ | | | |
|---|---|---|---|---|---|
| | ಭಾಗವಹಿಸಿದ ಜನರ ಸಂಖ್ಯೆ | **<5,000** | **5,001-10,000** | **10,001-25,000** | **>25,000** |
| 1. | ಅನುಮತಿ ಇಲ್ಲದೆ ಕಾರ್ಯಕ್ರಮ ನಡೆಸಿರುವುದು | 2,500 | 5,000 | 10,000 | 50,000 |
| 2. | ಪ್ಲಾಸ್ಟಿಕ್ ನಿಷೇಧ ಉಲ್ಲಂಘನೆ | | | | |
| ಎ. | ಪ್ಲಾಸ್ಟಿಕ್ & ಎನ್‌ಡಬ್ಲ್ಯು ಪಿಪಿ ಬ್ಯಾಗ್‌ಗಳು | 3,500 | 7,000 | 25,000 | 50,000 |
| ಬಿ. | ಆಹಾರ ಮತ್ತು ಪಾನೀಯ ವಿತರಣೆಗೆ ಪ್ಲಾಸ್ಟಿಕ್/ಥರ್ಮೋಕೋಲ್ ಬಳಕೆ | 3,500 | 7,000 | 25,000 | 50,000 |
| ಸಿ. | ಫ್ಲೆಕ್ಸ್, ಪ್ಲಾಸ್ಟಿಕ್ ಹಾಳೆ ಇತ್ಯಾದಿ ಬಳಕೆ | 3,500 | 7,000 | 25,000 | 50,000 |
| 3. | ಕಾರ್ಯಕ್ರಮದ ಸ್ಥಳದಿಂದ ತ್ಯಾಜ್ಯವನ್ನು ನಿರ್ವಹಿಸಲು ಅಧಿಕೃತ ಸೇವಾದಾರರ ಜೊತೆ ಒಪ್ಪಂದ ಮಾಡಿಕೊಳ್ಳಲು ವಿಫಲವಾಗಿರುವುದು. | 2,500 | 5,000 | 20,000 | 40,000 |
| 4. | ಬೇರ್ಪಡಿಸಿದ ತ್ಯಾಜ್ಯವನ್ನು ಸಂಗ್ರಹಿಸಲು | 2,500 | 5,000 | 20,000 | 40,000 |

| | | | | | |
|---|---|---|---|---|---|
| | ಕಸದ ಬುಟ್ಟಿಗಳನ್ನು ಒದಗಿಸದೇ ಇರುವುದು. | | | | |
| 5. | ಕಾರ್ಯಕ್ರಮದ ಸ್ಥಳದಲ್ಲಿ ಬೇರ್ಪಡಿಸಲಾದ ತ್ಯಾಜ್ಯ ಸಂಗ್ರಹಕ್ಕೆ ಧಾರಕಗಳನ್ನು ಇಡಲು ವಿಫಲವಾಗಿರುವುದು. | 5,000 | 10,000 | 50,000 | 1,00,000 |
| 6. | ಕಟ್ಟಡದ ಆವರಣದಲ್ಲಿ (ಅಥವಾ ಇತರ ಯಾವುದೇ ನಿವೇಶನದಲ್ಲಿ) ತ್ಯಾಜ್ಯ ಸುಟ್ಟು ಹಾಕಿದ್ದು ಅಥವಾ 2016ರ ಎಸ್‌ಡಬ್ಲ್ಯುಎಂ ನಿಯಮಗಳನ್ನು ಪಾಲಿಸದೇ ತ್ಯಾಜ್ಯ ವಿಲೇವಾರಿ ಮಾಡಿದ್ದು | 5,000 | 10,000 | 1,00,000 | 2,00,000 |

*ಗಂಭೀರ ಅಪರಾಧಗಳು ಮತ್ತು ಪುನರಾವರ್ತಿತ ಉಲ್ಲಂಘನೆದಾರರಿಗೆ ರೂ.5.00 ಲಕ್ಷ ಮೀರದಂತೆ (ಪ್ರತಿ ಪ್ರಕರಣದಲ್ಲಿ) ದಂಡ ವಿಧಿಸುವ ಅಧಿಕಾರವು, ಅಧಿಕಾರಿಗಳು ಮತ್ತು ಉಪದ್ರವ ಪತ್ತೆದಾರರೊಂದಿಗೆ ಇರುತ್ತದೆ.

## ಅನುಸೂಚಿ VIII

## ರಸ್ತೆ ಗುಡಿಸುವಿಕೆಯ ಮಾನದಂಡಗಳು

**ಎ. ಗುಡಿಸುವ ಕಾರ್ಯ (ಪೌರಕಾರ್ಮಿಕರಿಂದ)**

| ಕ್ರ.ಸಂ | ಬೀದಿಯ ವಿಧ | ನಿರ್ದಿಷ್ಟ ವಿವರ | ಗುಡಿಸುವ ಆವರ್ತನ | ವ್ಯಾಪ್ತಿ ಪ್ರಮಾಣ |
|---|---|---|---|---|
| **1.** | ಪ್ರಮುಖ ರಸ್ತೆಗಳು | ಕೇವಲ ಪಾದಚಾರಿ ಮಾರ್ಗಗಳು (0.5-2.5 ಮೀ ಅಗಲ, ಎರಡೂ ಬದಿ) | ಪ್ರತಿದಿನ | 0.75-1 ಕಿಮಿ/ಪ್ರತಿದಿನ |

| | | | | |
|---|---|---|---|---|
| | | ಕೇವಲ ಪಾದಚಾರಿ ಮಾರ್ಗಗಳು (2.5ಮೀ ಅಗಲ, ಎರಡೂ ಬದಿ) | ಪ್ರತಿದಿನ | 0.5 ಕಿಮಿ /ಪ್ರತಿದಿನ |
| | | ಸಂಪೂರ್ಣ ಅಗಲಕ್ಕೆ (ಎರಡೂ ಬದಿ, ಪಾದಚಾರಿ ಮಾರ್ಗ- ಕಾಲು ಹಾದಿ ಬದಿ- ಕಾಲಹಾದಿ ಬದಿ- ಪಾದಚಾರಿ ಮಾರ್ಗ | ಪ್ರತಿದಿನ | 00.35 ಕಿಮಿ/ಪ್ರತಿದಿನ |
| **2.** | ಮಧ್ಯಂತರ ರಸ್ತೆಗಳು | ಕೇವಲ ಪಾದಚಾರಿ ಮಾರ್ಗ (0.5-2.5 ಮೀ ಅಗಲ, ಎರಡೂ ಬದಿ) | ಪ್ರತಿದಿನ | 0.75-1 ಕಿಮಿ/ಪ್ರತಿದಿನ |
| | | ಕೇವಲ ಪಾದಚಾರಿ ಮಾರ್ಗ (2.5 ಮೀ ಅಗಲ, ಎರಡೂ ಬದಿ) | ಪ್ರತಿದಿನ | 0.5 ಕಿಮಿ/ಪ್ರತಿದಿನ |

| | | | | |
|---|---|---|---|---|
| | | ಸಂಪೂರ್ಣ ಅಗಲಕ್ಕೆ (ಪಾದಚಾರಿ ಮಾರ್ಗ ಸೇರಿದಂತೆ (ಎರಡೂ ಬದಿ, ಪಾದಚಾರಿ ಮಾರ್ಗ) | ಪ್ರತಿದಿನ | 0.5ಕಿಮೀ / ಪ್ರತಿದಿನ |
| **3.** | ಸಣ್ಣ ರಸ್ತೆಗಳು | ಸಂಪೂರ್ಣ ಅಗಲಕ್ಕೆ (ಪಾದಚಾರಿ ಮಾರ್ಗ ಸೇರಿದಂತೆ) | ಪ್ರತಿದಿನ* | 0.75 -1 ಕಿಮಿ /ಪ್ರತಿದಿನ ; 0.5ಕಿಮಿ/ಪ್ರತಿದಿನ (ಗುಂಪು ಕೆಲಸಕ್ಕೆ ಪಿಕೆ ನಿಯೋಜಿಸಿದರೆ) |
| | | ಸಂಪೂರ್ಣ ಅಗಲಕ್ಕೆ (ಪಾದಚಾರಿ ಮಾರ್ಗ ಸೇರಿದಂತೆ) | ವಾರಕ್ಕೆ ಮೂರು ದಿನ | |
| | | ಸಂಪೂರ್ಣ ಅಗಲಕ್ಕೆ (ಪಾದಚಾರಿ ಮಾರ್ಗ ಸೇರಿದಂತೆ) | ವಾರಕ್ಕೆರಡು ಬಾರಿ | |
| | | ಸಂಪೂರ್ಣ ಅಗಲಕ್ಕೆ (ಪಾದಚಾರಿ ಮಾರ್ಗ ಸೇರಿದಂತೆ) | ವಾರಕ್ಕೊಂದು ಬಾರಿ | |
| | | (ಪಾದಚಾರಿ ಮಾರ್ಗ ಸೇರಿದಂತೆ) | 15 ದಿನಗಳಿಗೊಮ್ಮೆ | |

*ಪ್ರಮುಖ ವಲಯಗಳಲ್ಲಿ ಸಣ್ಣ ರಸ್ತೆಗಳ 100%ದಷ್ಟು ರಸ್ತೆಉದ್ದವನ್ನು ಪ್ರತಿದಿನ ಗುಡಿಸುವುದಕ್ಕೆ ಗಣನೆಗೆ ತೆಗೆದುಕೊಳ್ಳಬಹುದು ಉಳಿದಂತೆ ಇತರೆ ವಲಯದ ರಸ್ತೆಗಳಲ್ಲಿ 25-30% ಸಣ್ಣರಸ್ತೆ ಉದ್ದವನ್ನು ಗುಡಿಸುವುದಕ್ಕಾಗಿ ಪರಿಗಣಿಸಬಹುದು.

**ಬಿ. ಯಂತ್ರಗಳಿಂದ ಗುಡಿಸುವುದು**

| ಕ್ರ.ಸಂ | ಬೀದಿಯ ವಿಧ | ನಿರ್ದಿಷ್ಟ ವಿವರ | ಗುಡಿಸುವ ಆವರ್ತನ | ಗುಡಿಸುವ ಉದ್ದ |
|---|---|---|---|---|
| 1. | ಪ್ರಮುಖ ಮತ್ತು ಮಧ್ಯಂತರ ರಸ್ತೆಗಳು | ಏಕಪಥ (ಉದಾ: ಚತುಷ್ಪಥ ರಸ್ತೆಯ 10 ಕಿಮಿ ಪರಿಣಾಮಾತ್ಮಕ ಉದ್ದ;, ದ್ವಿಪಥ ರಸ್ತೆಯ 20ಕಿಮೀ ಪರಿಣಾಮಾತ್ಮಕ ಉದ್ದ, ಏಕಪಥ ರಸ್ತೆಯ 40ಕಿಮೀ ಪರಿಣಾಮಾತ್ಮಕ ಉದ್ದ) | ಪ್ರತಿದಿನ/ಎರಡು ದಿನಗಳಿಗೊಮ್ಮೆ /ವಾರಕ್ಕೆರಡು ಬಾರಿ | 40 ಕಿಮೀ /ಪ್ರತಿದಿನ |

*******

# BRUHAT BENGALURU MAHANAGARA PALIKE (BBMP)

No: Addl.Comm/SWM/PR/G/9266/2019-20 Date:20-04-2020

**SOLID WASTE MANAGEMENT BYE-LAWS (March 2020)**
**BRUHAT BENGALURU MAHANAGARA PALIKE**

In exercise of the powers conferred by Sections 423, 424, 426, 431-A, 431-B of the Karnataka Municipal Corporations Act, 1976 (Karnataka Act 14 of 1977) read with clause (e), (f) and (zf) of Rule 15 of the Solid Waste Management Rules (SWM),2016; Bruhat Bengaluru MahanagaraPalike (BBMP), hereby makes the following bye-laws for management of Solid Waste.

## CHAPTER I
## GENERAL

**1. Short title and commencement**: -(1) These bye-laws may be called the Bruhat BengaluruMahanagaraPalike Solid Waste Management (BBMP-SWM) Bye-laws, 2019.